# ಪರಿಚಯ

ಸಹೋದರ ಜೆ ಸಿ ಚೋಟ್ ಅವರು ಈ ಪುಸ್ತಕದ ರಚನಕಾರರಾಗಿದ್ದಾರೆ. ಇವರು 1965–70ರ ಮಧ್ಯದಲ್ಲಿ ಮೊದಲು ಪಾಕಿಸ್ತಾನದಲ್ಲಿಯೂ, ನಂತರ ದೆಹಲಿಯಲ್ಲಿಯೂ ಕ್ರಿಸ್ತನ ಸಭೆಯ ಪರವಾಗಿ ಸುವಾರ್ತೆ ಪ್ರಕಟಿಸುತ್ತಾ, ಅನೇಕ ಪುಸ್ತಕಗಳನ್ನು ಬರೆಯುತ್ತಾ ಇವರು ಪಾಕಿಸ್ತಾನದಲ್ಲಿ ಸೇವೆ ಮಾಡುತ್ತಿದ್ದ ಸಮಯದಲ್ಲಿ ಕ್ರಿಸ್ತನ ಸಭೆಯನ್ನು ಕುರಿತು ಜನರಲ್ಲಿ ಉಂಟಾದ ಪ್ರಶ್ನೆಗಳಿಗೆ ಉತ್ತರವಾಗಿ ಈ ಪುಸ್ತಕವನ್ನು ಬರೆದರು. ಇದು ಪ್ರಪಂಚದಲ್ಲಿನ ಅನೇಕ ಭಾಷೆಗಳಲ್ಲಿ ಅನುವಾದಗೊಂಡಿದೆ.

'ಬೈಬಲ್ ಸಭೆ'ಎಂಬ ಈ ಪುಸ್ತಕವನ್ನು ಈಗ ಕನ್ನಡ ಭಾಷೆಯಲ್ಲಿ ಅನುವಾದ ಮಾಡಿ ನಿಮ್ಮ ಕೈಯಲ್ಲಿ ನೀಡುವುದಕ್ಕೆ ಎಷ್ಟೋ ಸಂತೋಷಿಸುತ್ತೇನೆ. ಇದನ್ನು ಕನ್ನಡ ಭಾಷೆಗೆ ಅನುವಾದ ಮಾಡಿದ ಸಹೋದರ ರತ್ನಕರ್, ಅಜಿತ್ ಕುಮಾರ್ ಮತ್ತು ಈಶ್ವರ್ ಅವರಿಗೆ ನನ್ನ ವಂದನೆಗಳು. ಈ ಚಿಕ್ಕ ಪುಸ್ತಕವನ್ನು ಓದುವುದರ ಮೂಲಕ ಯೇಸು ಕ್ರಿಸ್ತನು ಸ್ಥಾಪಿಸಿದ ಒಂದೇ ಒಂದು ಸಭೆಯನ್ನು ಕುರಿತು ನೀವು ತಿಳಿದುಕೊಂಡು ಅದರ ಸದಸ್ಯರಾಗಬೇಕೆಂದು ನನ್ನ ಆಕಾಂಕ್ಷೆ ಮತ್ತು ಪ್ರಾರ್ಥನೆ.

ನಿಮಗೆ ಸತ್ಯವೇದವನ್ನು ಕುರಿತು ಹೆಚ್ಚಾಗಿ ತಿಳಿದುಕೊಳ್ಳಲು ಮತ್ತು ಅಧ್ಯಾಯನ ಮಾಡಲು ಕನ್ನಡ ಭಾಷೆಯಲ್ಲಿ ನಾವು ಒದಗಿಸುವ "ಸತ್ಯವೇದ ಅಧ್ಯಾಯನ" ಪಾಠಗಳನ್ನು ಪೋಸ್ಟ್ ಮೂಲಕ ಪಡೆಯಲು ನಮ್ಮ ವಿಳಾಸವನ್ನು ಸಂಪರ್ಕಿಸಿ.

**ಸತ್ಯವಾಣಿ**
ಕಾಕಿನಾಡ

**ಜಾಶುವಾ ಗೂಟಂ**
ಆಗಸ್ಟ್ – 2018

# ವಿಷಯಗಳು

1. ಸಭೆಯ ಅರ್ಥ ........ 1
2. ಸಭೆ ಉದ್ಭವಿಸುವಿಕೆ ........ 4
3. ಸಭೆಯ ಸ್ಥಾಪನೆ ........ 7
4. ಸಭೆಯ ರೂಪರೇಷೆಗಳು/ಲಕ್ಷಣಗಳು ........ 10
5. ಸಭೆಯ ಹೆಸರು ........ 14
6. ಸಭೆಯ ಪರಿಪಾಲನೆ ........ 17
7. ಸಭೆಯೊಳಗೆ ಪ್ರವೇಶ ........ 21
8. ಸಭೆಯ ಆರಾಧನೆ ........ 25
9. ಸಭೆಯ ಕೆಲಸ ........ 29
10. ಸಭೆಯ ಐಕ್ಯತೆ ........ 34
11. ಸಭೆಯ ನಂಬಿಕೆ ........ 38
12. ಸಭೆಯ ಕರ್ತನ ಭೋಜನ ........ 42
13. ಸಭೆಯ ಸಂಗೀತ ........ 48
14. ಸಭೆಯ ಅಸ್ತಿವಾರ (ಬುನಾದಿ) ........ 52
15. ಸಭೆಯ ಆತ್ಮ ........ 57
16. ಸಭೆಯ ಪವಿತ್ರತೆ ........ 63
17. ಸಭೆಯ ಅನ್ಯೋನ್ಯತೆ ........ 68
18. ಸಭೆಯ ಕ್ರಮಶಿಕ್ಷಣ ........ 75
19. ಸಭೆಗೆ ಪುಃನ ಸೇರಿಕೋಳ್ಳುವದು ........ 80
20. ಸಭೆಯಲ್ಲಿನ ಆಶೀರ್ವಾದಗಳು ........ 84
21. ಸಭೆಯ ಆರ್ಥಿಕತೆ ........ 89
22. ಸಭೆಗಾಗಿ ಕ್ರಿಸ್ತನ ಬರುವಿಕೆ ........ 94
23. ಸಭೆಯ ಚರಿತ್ರೆ ........ 100
24. ಇಂದಿನ ಕ್ರಿಸ್ತನ ಸಭೆ ........ 106

## ಪಾಠ – 1
# ಸಭೆಯ ಅರ್ಥ
# (Meaning of Church)

ಬೈಬಲ್ ಒಂದು ಸಭೆಯನ್ನು ಕುರಿತು ಹೇಳುತ್ತದೆ ಎಂಬುದನ್ನು ಯಾರೂ ಇಲ್ಲ ಎನ್ನುವುದಿಲ್ಲ. ಆದರೆ ಯಾವ ಸಭೆ? ಯಾರ ಸಭೆ? ಈ ಪ್ರಶ್ನೆಗಳಿಗೆ, ಇನ್ನೂ ಕೆಲವು ಪ್ರಶ್ನೆಗಳಿಗೆ ಮುಂದಿನ ಪುಟಗಳಲ್ಲಿ ಉತ್ತರ ಕೊಡಲಾಗುವುದು. ಆದರೆ ಈಗ ಸಭೆ ಎಂದರೆ ಏನು? ಎಂದು ಈಗ ನಾವು ತಿಳಿದುಕೊಳ್ಳೋಣ. ಆದರೆ ಅದು ಏನು ಆಗಿಲ್ಲ ಎಂಬುದನ್ನು ಮೊದಲು ತಿಳಿದುಕೊಳ್ಳುವುದು ಒಳ್ಳೇದು. ಬೈಬಲ್ ನಲ್ಲಿ ವರ್ಣಿಸಲ್ಪಟ್ಟ ಸಭೆ ಕ್ಯಾಥೋಲಿಕ್‌ರದಾಗಲಿ, ಪ್ರೊಟೆಸ್ಟೆಂಟ್‌ರದಾಗಲಿ, ಯೆಹೂದ್ಯರದ್ದಗಲಿ, ಅದು ಡಿನಾಮಿನೇಷನ್ ಅಲ್ಲ, ಅದು ಮತ ಶಾಖೆಯಲ್ಲ, ರಾಜಕೀಯ ಸಂಸ್ಥೆ ಅಥವಾ ಸಾಂಘೀಕ ಸಂಸ್ಥೆಯು ಅಲ್ಲ. ಅದು ಭೌತಿಕ ಸಂಬಂಧವಾದ ಭವನವು ಅಲ್ಲ. ಆದ್ದರಿಂದ ಅದು ಇವು ಯಾವುಗಳೂ ಅಲ್ಲವಾದರೆ ಮತ್ತೆ ಏನಾಗಿದೆ? ಸಭೆಯನ್ನು ಅನೇಕರು ಗ್ರಹಿಸಿಕೊಳ್ಳುತ್ತಿಲ್ಲ. ಯಾಕೆಂದರೆ ಅದು ಏನೆಂಬುದು ಅವರಿಗೆ ತಿಳಿದಿಲ್ಲ. ಆದ್ದರಿಂದ ಅವರು ಅದರ ಪ್ರಯೋಜನವನ್ನು ಪ್ರಾಮುಖ್ಯತೆಯನ್ನು, ಕೆಲಸವನ್ನು ಗ್ರಹಿಸುತ್ತಿಲ್ಲ. ಸಭೆ ಎಂಬ ಪದವು ಎಕ್ಲೇಷಿಯ ಎಂಬ ಗ್ರೀಕ್ ಪದದಿಂದ ಬಂದಿದೆ. ಎಕ್ಲೇಷಿಯ ಅಂದರೆ 'ಕರೆಯಲ್ಪಟ್ಟವರು' ಎಂದು ಅರ್ಥ. ಅದ್ದರಿಂದ ಸಭೆಯು ಕರೆಯಲ್ಪಟ್ಟ ಸಂಸ್ಥೆಯಾಗಿದೆ. ಅದು ಈ ಲೋಕದೊಳಗಿಂದ ದೇವರ ಪ್ರಿಯ ಕುಮಾರನ ರಾಜ್ಯದೊಳಗೆ ಕರೆಯಲ್ಪಟ್ಟ ಜನಾಂಗವಾಗಿದ್ದರೆ (ಕೊಲೊಸ್ಸೆ 1:13). ಅದು ಕ್ರಿಸ್ತನ ಆತ್ಮೀಯ ಶರೀರವಾಗಿದೆ (1ಕೊರಿಂಥ 12:27), ಅದು ಕ್ರಿಸ್ತನಿಗೆ ವಿಧೇಯರಾದವರೊಂದಿಗೆ (ಇಬ್ರಿಯ 5:8,9) ಅಂದರೆ ಆತನ ಮೂಲಕ ರಕ್ಷಣೆಹೊಂದಿ ಅದರಲ್ಲಿ ಸೇರಿಸಲ್ಪಟ್ಟವರೊಂದಿಗೆ ಹೊಂದಿಕೆಯಾಗಿದೆ (ಮಾರ್ಕ 16:16; ಅ.ಕೃ.2:47). ಇನ್ನೊಂದು ಮಾತಿನಲ್ಲಿ ಕ್ರಿಸ್ತನನ್ನು ಅನುಸರಿಸುವವರಿಂದ ಕೂಡಿಕೊಂಡಿದೆ.

ಸಭೆ ಎಂಬ ಪದವು ಬೈಬಲಿನಲ್ಲಿ 2 ಭಾವಗಳಿಂದ ಕಾಣಿಸಿಕೊಂಡಿದೆ. ಮೊದಲನೆಯದು ಅದು ಸಾರ್ವತ್ರಿಕ (universal) ಎಂಬ ಭಾವ. ಈ ಭಾವದಿಂದ ಕ್ರಿಸ್ತನು ಪೇತ್ರನಿಗೆ ಹೀಗೆ ಹೇಳಿದನು " ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18). ಸಭೆಯು ಸಾರ್ವತ್ರಿಕವಾದದ್ದು ಎಂದು ಹೇಳುವ ಅನೇಕ

ವಚನಗಳವೆ. ಅಂದರೆ ಈ ಲೋಕದಲ್ಲಿ ಎಲ್ಲಿಯಾದರು ಸಭೆ ಇದ್ದರೆ ಅದು ಬೈಬಲಿನಲ್ಲಿರುವ ಸಭೆಯಾಗಿರುತ್ತದೆ. ಅದು ನಾನು ಕಟ್ಟುವೆನು ಎಂದು ಹೇಳಿದ ಕ್ರಿಸ್ತನ ಸಭೆಯಾಗಿರುತ್ತದೆ.

ಎರಡನೆಯದು ಸ್ಥಳೀಯ (local) ಎಂಬ ಭಾವ. ಉದಾಹರಣೆಗೆ ಪೌಲನು ರೋಮಾಪುರದಲ್ಲಿರುವ ಸಭೆಗೆ ಬರೆಯುವಾಗ ಅನೇಕ ಸ್ಥಳೀಯ ಸಭೆಗಳನ್ನು (local congrigation) ಕುರಿತು ಹೇಳುತ್ತಾ "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" (ರೋಮಾ 16:16) ಈ ಸಭೆಗಳೆಲ್ಲವೂ ಮತಶಾಖೆಗಳೆಂಬ ಭಾವದಿಂದಲ್ಲ, ಅವೆಲ್ಲವೂ ಬೇರೆ ಬೇರೆ ಸ್ಥಳದಲ್ಲಿರುವ ಸ್ಥಳೀಯ ಕ್ರಿಸ್ತನ ಸಭೆಗಳೆಂಬ ಭಾವದಿಂದ ಕರೆದನು. ಇದನ್ನು ಇನ್ನೂ ವಿವರಿಸಬೇಕಾದರೆ ವಾಕ್ಯದಲ್ಲಿ ಕೊರಿಂಥದಲ್ಲಿರುವ ಸಭೆ, ಎಫೆಸದಲ್ಲಿರುವ ಸಭೆ, ಫಿಲಿಪ್ಪಿಯಲ್ಲಿರುವ ಸಭೆ ಎಂದು ಕರೆಯುವದನ್ನು ನೀನು ಗಮನಿಸಬಹುದು (1ಕೊರಿಂಥ 1:1; ಎಫೆಸ 1:1; ಫಿಲಿಪ್ಪಿ 1:1). ಸಭೆಯನ್ನು ಮತಶಾಖೆಯ ಭಾವದಿಂದ ನೋಡುವದಕ್ಕೆ ಅಭ್ಯಾಸವಿರುವವರಿಗೆ ಇದು ಗಲಿಬಿಲಿ ಅನ್ನಿಸುತ್ತದೆ. ಮೊದಲ ಮತಶಾಖೆಯನ್ನು ಕುರಿತು ನೀನು ಬೈಬಲಿನಲ್ಲಿ ಓದುವದಿಲ್ಲ.

ಮೇಲೆ ವಿವರಿಸಿದ ಸಂದರ್ಭಗಳಲ್ಲಿ ಅನೇಕ ಸ್ಥಳೀಯ ಸಭೆಗಳನ್ನು ಕುರಿತು ಹೇಳುವುದನ್ನು ನೀನು ನೋಡಬಹುದು. ಅವುಗಳೆಲ್ಲವೂ ಸೇರಿ ಸಾರ್ವತ್ರಿಕ ಸಭೆಯಾಗುತ್ತವೆ. ನಾವು ಡಿನಾಮಿನೇಷನ್‌ಗಳನ್ನು ಮರೆತು ಬೈಬಲಿನಲ್ಲಿರುವ ಕರ್ತನು ಏರ್ಪಡಿಸಿದ ಸಭೆಯನ್ನು ಕಂಡುಕೊಳ್ಳುವದು ಸುಲಭ.

ಸಭೆಯ ಅರ್ಥವನ್ನು ನಾವು ಇನ್ನೂ ಗ್ರಹಿಸುವದಕ್ಕೆ ಸಭೆಯನ್ನು ಬೈಬಲ್ ಈ ಕೆಳಗಿನಂತೆ ವರ್ಣಿಸುತ್ತದೆ.

**1. ಕ್ರಿಸ್ತನ ಶರೀರ :** ಸಭೆಯು ಕ್ರಿಸ್ತನ ಆತ್ಮೀಯ ಶರೀರವಾಗಿದೆ. ಆ ಶರೀರಕ್ಕೆ ಶಿರಸ್ಸು ಕ್ರಿಸ್ತನೆ (ಎಫೆಸ 5:23). ಒಂದೇ ಒಂದು ಶರೀರವಿದೆ (ಎಫೆಸ 4:4). ಆ ಒಂದೆ ಶರೀರವೆ ಒಂದೇ ಸಭೆಯಾಗಿದೆ (ಕೊಲೊಸ್ಸೆ 2:18).

**2. ದೇವರ ಮನೆ :** ವಾಕ್ಯದಲ್ಲಿ ಮನೆ ಎಂಬ ಪದವು ಕುಟುಂಬವನ್ನು ಸೂಚಿಸುತ್ತದೆ ಅಂದರೆ ಸಭೆಯು ದೇವರ ಕುಟುಂಬವಾಗಿದೆ ಎಂದು ನಮಗೆ ತಿಳಿಯುತ್ತದೆ. 1ತಿಮೊಥೆ 3:15 ರಲ್ಲಿ ದೇವರ ಮನೆ ಅಂದರೆ ಜೀವಸ್ವರೂಪನಾದ ದೇವರ ಮನೆಯಲ್ಲಿ ಎಂದು ಪೌಲನು ಹೇಳಿದ್ದಾನೆ. ದೇವರು ತಂದೆ ನಾವು ಆತನ ಮಕ್ಕಳು

(ಗಲಾತ್ಯ 3:26,27; ಎಫೆಸ 3:3).

**3. ದೇವರ ರಾಜ್ಯ :** ರಾಜ್ಯವು ಒಬ್ಬ ರಾಜನನ್ನು ಸೂಚಿಸುತ್ತದೆ ಆದದರಿಂದ ಕ್ರಿಸ್ತನು ರಾಜನಾಗಿದ್ದಾನೆ (ಪ್ರಕಟನೆ 17:14). ಹಾಗಾದರೆ ಆತನು ರಾಜನಾಗುವದಕ್ಕೆ ಈಗ ರಾಜ್ಯವನ್ನು ಹೊಂದಿರಬೇಕಲ್ಲವೇ ? ಅದನ್ನೂ ಆತನು ಹೊಂದಿದ್ದಾನೆ (ಅ.ಕೃ. 8:12). ನಾವು ಆತನ ಸೇವಕರು ಈ ಪ್ರಪಂಚವು ಆತನು ಪಾಲಿಸುವ ಪ್ರದೇಶ ಅಥವಾ ರಾಜ್ಯವಾಗಿದೆ, ಹೊಸ ಒಡಂಬಡಿಕೆ ಆತನ ಕಾನೂನು, ಇದುವೇ ಈಗಿನ ಸಭೆ (ಮತ್ತಾಯ 16:18,19).

**4. ದೇವರ ದ್ರಾಕ್ಷೇತೋಟ :** ಕ್ರಿಸ್ತನು ದ್ರಾಕ್ಷೇಬಳ್ಳಿಯಾಗಿರುವಾಗ ಕ್ರೈಸ್ತರು ವೈಯಕ್ತೀಕವಾಗಿ ಕೊಂಬೆಯಾಗಿದ್ದಾರೆ (ಯೋಹಾನ 15:1–8). ಇದರ ನಿಮಿತ್ತ ನಾವು ಆತನ ತೋಟದಲ್ಲಿ ಕೆಲಸಮಾಡಿ ಕರ್ತನಿಗಾಗಿ ಫಲಕೊಡುವ ಭಾವ ಇದರಲ್ಲಿದೆ.

ಬೈಬಲಿನಲ್ಲಿ ಸಭೆಯು ಈ ರೀತಿಯಾಗಿ ವರ್ಣಿಸಲ್ಪಟ್ಟಿದೆ. ವಾಕ್ಯಗಳನ್ನು ಅನುಸರಿಸಿ ಈ ಸಂಗತಿಗಳನ್ನು ದಯಾಮಾಡಿ ಓದಿ ನಿನಗೆ ನೀನೆ ಪರಿಶೀಲನೆ ಮಾಡಿಕೊ, ಕರ್ತನ ಸಭೆಯನ್ನು ಆತನು ಕೋರಿಕೊಳ್ಳುವ ರೀತಿಯಲ್ಲಿ ನೀನು ಗ್ರಹಿಸಿಕೊಳ್ಳುವದಾದರೆ ನಿನ್ನ ಸಿದ್ಧಾಂತವೆಲ್ಲಾ, ಬಹುಶಃ ನಿನ್ನ ಜೀವಿತವೆಲ್ಲಾ ಬದಲಾಗಬಹುದು.

## ಪಾಠ – 2
# ಸಭೆ ಉದ್ಭವಿಸುವಿಕೆ
# (The Coming of the Church)

ಸಭೆಯು ಆಕಸ್ಮಾತಾಗಿ ಉದ್ಭವಿಸಿಲ್ಲ. ಅದು ಮೊದಲೇ ನಿರ್ಣಯಿಸಲ್ಪಟ್ಟು, ಪ್ರವಾದಿಸಲ್ಪಟ್ಟು, ವಾಗ್ದನ ಮಾಡಲ್ಪಟು ಸ್ಥಾಪಿಸಲ್ಪಟ್ಟಿದೆ. ಇದೆಲ್ಲವನ್ನು ಬೈಬಲ್ ಬಹಳ ವಿವರವಾಗಿ ವಿವರಿಸುತ್ತದೆ.

ಮೊದಲನೆಯದಾಗಿ, ಸಭೆಯು ಜಗದುತ್ಪತ್ತಿಗೆ ಮೊದಲೇ ದೇವರಿಂದ ನಿರ್ಣಯಿಸಲ್ಪಟ್ಟಿತ್ತು. ಇದನ್ನು ಪೌಲನು ಎಫೆಸದಲ್ಲಿರುವ ಪರಿಶುದ್ಧರಿಗೆ ಈ ರೀತಿಯಲ್ಲಿ ತಿಳಿಸಿದನು "ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರು ತಂದೆಯೂ ಆಗಿರುವಾತನಿಗೆ ಸ್ತೋತ್ರ, ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ. ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ, ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು" (ಎಫಸ 1:3–6). ಎಫೆಸದಲ್ಲಿರು ಸಭೆಗೆ ಬರೆಯುತ್ತಾ ಅವರನ್ನು ಜಗತ್ತು ಉಂಟಾಗುವದಕ್ಕೆ ಮೊದಲೇ ಆರಿಸಿಕೊಂಡನೆಂದು ಆತನು ಅಲ್ಲಿ ಬರೆದದ್ದನು ದಯಾಮಾಡಿ ಗಮನಿಸಿ. ಜಗತ್ತು ಉಂಟಾಗುವದಕ್ಕೆ ಮೊದಲೇ ದೇವರು ಸಭೆಯನ್ನು ಕುರಿತು ಆಲೋಚಿಸಿದಂತೆ ಇದರ ಭಾವವಾಗಿದೆ. ಅಂದರೆ ಆ ಸಮಯದಲ್ಲಿ ಆತನು ಅದರ ನೀಲನಕ್ಷೆಯನ್ನು ಸಿದ್ಧ ಪಡಿಸಿದ್ದನು. ಆದದರಿಂದ ಆದು ಮೊದಲು ದೇವರ ಮನಸ್ಸಿನಲ್ಲಿ ಉದ್ಭವಿಸಿತ್ತು. ಆದಿಯಿಂದಲೂ ದೇವರಿಂದ ನಿರ್ಣಯಿಸಲ್ಪಟ್ಟಿದ್ದನ್ನು ನಾವು ಸ್ವಲ್ಪವಾಗಿಯೂ ಸಂಕುಚಿತವಾಗಿಯೂ ಮಾಡುವದು ಎಷ್ಟೋ ವಿಶಾದನೀಯ ಸಂಗತಿ.

ಎರಡನೆಯದಾಗಿ, ಸಭೆಯು ಪ್ರವಾದನೆಯ ರೂಪದಲ್ಲಿ ಅನೇಕ ಪರ್ಯಾಯಗಳಲ್ಲಿ ಪ್ರವಾದಿಸಲ್ಪಟಿತ್ತು. ಯೆಶಾಯನು ಹೀಗೆ ಪ್ರವಾದಿಸಿದ್ದಾನೆ "ಅಂತ್ಯಕಾಲದಲ್ಲಿ ಯೆಹೋವನ ಮಂದಿರದ ಬೆಟ್ಟವು ಗುಡ್ಡಬೆಟ್ಟಗಳಿಗಿಂತ ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವದು; ಆಗ ಸಕಲ ದೇಶಗಳವರು ಅದರ ಕಡೆಗೆ ಪ್ರವಾಹಗಳಂತೆ ಬರುವರು" (ಯೆಶಾಯ 2:2,3). ಯೋವೇಲನು ಹೀಗೆ ಹೇಳಿದ್ದಾನೆ "ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ

ಹಿರಿಯರಿಗೆ ಕನಸುಗಳು ಬೀಳುವವು, ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ಇದಲ್ಲದೆ ಆ ದಿನಗಳಲ್ಲಿ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು" (ಯೋವೇಲ 2:28,29). ಅದರ ನಂತರ ದಾನಿಯೇಲನು ಹೀಗೆ ಸೂಚಿಸಿದನು "ಆ ರಾಜರ ಕಾಲದಲ್ಲಿ ಪರಲೋಕದ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವದು" (ದಾನಿಯೇಲ 2:44). ಈಗ ಇವುಗಳ ಕೆಲವು ಅಭಿಪ್ರಾಯಗಳನ್ನು ಪಟ್ಟಿಮಾಡೋಣ:

1. ಸ್ಥಾಪಿಸಲ್ಪಡುವ ರಾಜ್ಯವು ಅಂತ್ಯದಿನಗಳಲ್ಲಿ ಸ್ಥಾಪಿಸಲ್ಪಡುವದು.
2. ಅದು ಗುಡ್ಡಬೆಟ್ಟಗಳಿಗಿಂತ ಉನ್ನತೋನ್ನತವಾಗಿ ಬೆಳೆಯುವದು.
3. ಸಕಲ ದೇಶಗಳ ಜನರು ಅದರ ಕಡೆಗೆ ಪ್ರವಾಹಗಳಂತೆ ಬರುವರು.
4. ಎಲ್ಲಾ ಜನರ ಮೇಲೆ ಕರ್ತನು ತನ್ನ ಆತ್ಮವನ್ನು ಸುರಿಸುವನು.
5. ಅದು ನಾಲ್ಕನೇಯ ಭೂ ಸಾಮ್ರಾಜ್ಯದ ಸಮಯದಲ್ಲಿ ಸ್ಥಾಪಿಸಲ್ಪಡುವದು.
6. ಅದು ಬೇರೆ ರಾಜ್ಯಗಳನ್ನೆಲ್ಲಾ ನಿರ್ನಾಮ ಮಾಡಿ, ಯುಗಯುಗಗಳವರೆಗೆ ಶಾಶ್ವತವಾಗಿ ನಿಲ್ಲುವದು.

ಇದೆಲ್ಲವು ಎಲ್ಲಿ ನೇರವೇರುತ್ತದೆ ? ಈಗ ಅ.ಕೃ. 2ನೇ ಅಧ್ಯಾಯವನ್ನು ಓದು.

ಮೂರನೆದಾಗಿ ಸಭೆಯು ವಾಗ್ದಾನ ಮಾಟಲ್ಪಟ್ಟಿತ್ತು. ಅದು ಸಮೀಪವಾಯಿತು ಎಂದು ಸ್ನಾನಿಕನಾದ ಯೋಹಾನನು ಹೇಳಿದನು (ಮತ್ತಾಯ 3:2). ಅದು ಬೇಗನೆ ಬರುವದಾಗಿತ್ತು, ಬೇಗನೆ ಸ್ಥಾಪಿಸಲ್ಪಡುತ್ತದೆ ಎಂದು ಇದರ ಅರ್ಥ. ಕ್ರಿಸ್ತನು ಹೀಗೆ ವಾಗ್ದಾನ ಮಾಡಿದನು "ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18), "ಮತ್ತು ಅವರಿಗೆ ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಬಲವಾಗಿ ಬಂದಿರುವದನ್ನು ನೋಡುವ ತನಕ ಮರಣ ಹೊಂದುವದಿಲ್ಲವೆಂದು ಹೇಳಿದನು" (ಮಾರ್ಕ 9:1). "ಆ ಮೇಲೆ ಅವರು ವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರದು ಅವರಿಗೆ ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ ಪಾಪ ಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರಿಗಿ ಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲು ಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ

ಹೇಳುವವರಾಗಿದ್ದೀರಿ. ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದು ಕೊಂಡಿರ್ರಿ ಎಂದು ಹೇಳಿದನು" (ಲೂಕ 24:45–49). ಈಗ ಈ ಕೆಳಗಿನ ಸತ್ಯಾಂಶಗಳನ್ನು ಗಮನಿಸು :

1.ರಾಜ್ಯವು ಸಮೀಪವಾಗಿತ್ತು.

2.ಮರಣ ಹೊಂದಿದರೂ ಅದನ್ನು ಸ್ಥಾಪಿಸುವೆನೆಂದು ಕ್ರಿಸ್ತನು ವಾಗ್ದಾನ ಮಾಡಿದು.

3.ಕ್ರಿಸ್ತನ ಬಳಿಯಲಿದ್ದ ಕೆಲವರು ಅದು ಸ್ಥಾಪನೆಯಾಗುವವರೆಗೂ ಮರಣದ ರುಚಿ ನೋಡುವದಿಲ್ಲ.

4.ಅದು ಪ್ರಬಲವಾಗಿ ಬರುವುದಾಗಿತ್ತು.

5.ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದು.

6.ಅದು ಯೆರೂಸಲೇಮಿನಿಂದ ಪ್ರಾರಂಭವಾಗುವದು.

7.ಅಪೊಸ್ತಲರು ಮೇಲಣ ಲೋಕದಿಂದ ಶಕ್ತಿ ಹೊಂದುವರು.

ಸಭೆಯ ಸ್ಥಾಪನೆ ಎಂಬ ಅಂಶವನ್ನು ತಿಳಿದುಕೊಳ್ಳುವವರೆಗೆ ಮೇಲೆ ತಿಳಿಸಿದ ಸಂಗತಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರು. ಆಗ ಇವುಗಳೆಲ್ಲವೂ ನಿನಗೆ ಅರ್ಥವಾಗುತ್ತದೆ.

ಅಪೊಸ್ತಲರ ಕೃತ್ಯಗಳ 2ನೇ ಅಧ್ಯಾಯ ಕೆಲವು ಸಾರಿ ನಿರಂತರವಾಗಿ ಓದು. ಬೈಬಲ್ ಪಂಡಿತರೆಲ್ಲರೂ ಸಭೆಯು ಈ ಅಧ್ಯಾಯ ಹೇಳಲ್ಪಟ್ಟ ಕಾಲದಲ್ಲಿ ಸ್ಥಾಪಿಸಲ್ಪಟ್ಟಿತ್ತೆಂದು ಒಪ್ಪಿಕೊಳ್ಳುವರು. ಅಷ್ಟು ಮಾತ್ರವಲ್ಲದೇ ಅದು ಯೆರೂಸಲೇಮಿನಲ್ಲಿ ಸ್ಥಾಪಿಸಲ್ಪಟ್ಟಿತು. ಶಕ್ತಿ ಬಂದಿತು, ಸಮಸ್ತ ದೇಶದ ಜನರಿಗೆ ಪಾಪ ಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಪ್ರಕಟಿಸಲ್ಪಟ್ಟಿತು. ಅಂದಿನಿಂದಲೂ ಸಭೆಯು ಅಸ್ಥಿತ್ವದಲ್ಲಿದೆ. ಆದುದರಿಂದ ದೇವರ ನಿತ್ಯಸಂಕಲ್ಪದಲ್ಲಿರುವ ಸಭೆಯು ಸ್ಥಾಪಿಸಲ್ಪಟ್ಟಿದೆ. ಅದರ ಸಂಬಂಧವಾದ ಪ್ರವಾದನೆಗಳು, ವಾಗ್ದಾನಗಳು ನೇರವೆರಿಸಲ್ಪಟ್ಟಿವೆ.

ಪಾಠ – 3

# ಸಭೆಯ ಸ್ಥಾಪನೆ.

## (The Establishment of the Church)

ಹಿಂದಿನ ಪಾಠದಲ್ಲಿ ಯೆಶಾಯ 2:2–3; ಯೋವೇಲ 2:28–29; ದಾನಿಯೇಲ 2:44 ಗಳನ್ನು ಓದಿ ನೋಡಿದಾಗ ದೇವರ ರಾಜ್ಯವು (ಸಭೆಯು) ಅಂತ್ಯದಿನಗಳಲ್ಲಿ ಯೆರೂಸಲೇಮಿನಲ್ಲಿ, ಪವಿತ್ರಾತ್ಮನು ಬಂದಾಗ ಸ್ಥಾಪಿಸಲ್ಪಟ್ಟಿತ್ತು. ಸಮಸ್ತ ದೇಶದ ಜನರು ಅದರೊಳಗೆ ಬರುವರೆಂದು, ಅದು ಶಾಶ್ವತವಾಗಿ ನಿಲ್ಲುತ್ತದೆ ಎಂದು ಕಲಿತು ಕೊಂಡಿದ್ದೇವೆ. ಯೇಸು ಕ್ರಿಸ್ತನು ಮತ್ತಾಯ 16:18; ಮಾರ್ಕ 9:1; ಮತ್ತು ಲೂಕ 24:45–49 ರಲ್ಲಿ ಸಭೆಯು ಸ್ಥಾಪಿಸಲ್ಪಡುತ್ತದೆ ಎಂದು, ಅದು ಪ್ರಬಲವಾಗಿ ಬರುವದೆಂದು, ಆತನ ಹೆಸರಿನಲ್ಲಿ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಸಮಸ್ತ ದೇಶಗಳ ಜನರಿಗೆ ಪ್ರಕಟಿಸಲ್ಪಡುತ್ತದೆ ಎಂದು ವಾಗ್ದಾನ ಮಾಡಲಾಗಿತ್ತು. ಅ.ಕೃ. 2ನೇ ಅಧ್ಯಾಯದಲ್ಲಿ ನೋಡುವಾಗ ಮೇಲೆ ತಿಳಿಸಿದ ಪ್ರವಾದನೆಗಳು, ವಾಗ್ದಾನಗಳೆಲ್ಲವೂ ನೆರವೇರಿದಂತೆ ಗೊತ್ತಾಗುತ್ತದೆ.

ಅ.ಕೃ. 2ನೇ ಅಧ್ಯಾಯವನ್ನು ನಾವು ಓದಿದಾಗ, ಅಪೊಸ್ತಲರೆಲ್ಲರು ಯೆರುಸಲೇಮಿನಲ್ಲಿ ಕಾದು ಕೊಂಡಿದ್ದನ್ನು ನೋಡುತ್ತೇವೆ. "ಪಂಚಾಶತ್ತಾಮ ಹಬ್ಬವು ಬಂದಿರಲಾಗಿ ಅವರೆಲ್ಲರೂ ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿಕೊಂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ಧವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು, ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು. ಆಕಾಶದ ಕೆಳಗಿರುವ ಎಲ್ಲಾ ದೇಶದವರೊಳಗಿಂದ ಬಂದ ಸದ್ಭಕ್ತರಾದ ಯೆಹೂದ್ಯರು ಯೆರೂಸಲೇಮಿನಲ್ಲಿ ವಾಸವಾಗಿದ್ದರು. ಆ ಸಪ್ಪಳವಾದಾಗ ಜನರು ಗುಂಪು ಗುಂಪಾಗಿ ಕೂಡಿಬಂದು ಪ್ರತಿಯೊಬ್ಬರು ತಮ್ಮ ತಮ್ಮ ಭಾಷೆಯಲ್ಲೇ ಇವರು ಮಾತಾಡುವದನ್ನು ಕೇಳಿ ಭ್ರಮೆಗೊಂಡರು (ಅ.ಕೃ.2:1–6).

ಎಲ್ಲರೂ ಬೆರಗಾಗಿ ಕಳವಳಗೊಂಡು ಇದೇನಾಗಿರಬಹುದು ಎಂದು ಒಬ್ಬರನ್ನೊಬ್ಬರು ಕೇಳುತ್ತಿದ್ದರು. ಕೆಲವರು ಇವರು ಮದ್ಯಪಾನ ಮಾಡಿ ಮತ್ತಾಗಿದ್ದಾರೆಂದು ಹಾಸ್ಯ ಮಾಡಿದರು. ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ

ಮಾಡಿದನು "ಯೆಹೂದ್ಯರೇ, ಯರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಜನರೇ, ಈ ಸಂಗತಿ ಏನೆಂದು ನಿಮಗೆ ಗೊತ್ತಾಗುವ ಹಾಗೆ ನನ್ನ ಮಾತಿಗೆ ಕಿವಿಗೊಡಿರಿ; ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ; ಈಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿದೆಯಷ್ಟೆ. ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ. ಅದೇನಂದರೆ ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು".ಅದರೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದು" (ಅ.ಕೃ.2:12–17,21).

ಅಲ್ಲಿ ನಡೆಯುತ್ತಿರುವದೆಲ್ಲವೂ ಹಳೆ ಒಡಂಬಡಿಕೆ ಪ್ರವಾದನೆಯ ನೇರವೇರಿಕೆ ಎಂದು ಅವರಿಗೆ ತೋರಿಸಿದ ನಂತರ, ಪೇತ್ರನು ತನ್ನ ಪ್ರಸಂಗವನ್ನು ಗಂಭೀರವಾಗಿ ಮಾಡಿದನು. ದೇವರು ಯೇಸು ಕ್ರಿಸ್ತನ ಕೈಯಿಂದ ಮಹತ್ತುಗಳನ್ನೂ, ಅದ್ಭುತಗಳನ್ನೂ, ಸೂಚಕಕಾರ್ಯಗಳನ್ನೂ ನಿಮ್ಮಲ್ಲಿ ನಡೆಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿ ಕೊಟ್ಟನು ಎಂದು ವಿವರಿಸಿದನು. ಆತನು ಅನ್ಯಜನರ ಕೈಯಿಂದ ಶಿಲುಬೆಗೆ ಹಾಕಲ್ಪಟ್ಟು ಹೇಗೆ ಮರಣಿಸಿದನೆಂದು ಹೇಳಿದನು. ಆದರೆ ದೇವರು ಆತನನ್ನು ಮರಣವೇದನೆಗಳಿಂದ ಬಿಡಿಸಿ ಎಬ್ಬಿಸಿದನು. ಅವರಲ್ಲಿ ನಂಬಿಕೆ ಉಂಟಾಗುವಂತೆ ಕ್ರಿಸ್ತನನ್ನು ಕುರಿತು ದಾವೀದನು ಪ್ರವಾದಿಸಿದ ಮಾತುಗಳನ್ನು ಅವರಿಗೆ ತಿಳಿಸಿದನು. ಕ್ರಿಸ್ತನು ಜೀವಿಸಿದನು, ಮರಣಹೊಂದಿದನು, ಸಮಾಧಿ ಮಾಡಲ್ಪಟ್ಟನು, ಮೂರನೇ ದಿನದಲ್ಲಿ ಪುನರುತ್ಥಾನನಾಗಿ ದೇವರ ಬಲಗಡೆಯಲ್ಲಿಗೆ ಹೆಚ್ಚಿಸಲ್ಪಟ್ಟನು. " ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೇ ಸಾಕ್ಷಿಗಳಾಗಿದ್ದೇವೆ. ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮ ವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುತ್ತಿರುವುದನ್ನು ಸುರಿಸಿದ್ದಾನೆ. ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ. ತಾನೇ ಹೇಳುವ ಮಾತೇನೆಂದರೆ ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬುದೇ. ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ, ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು. ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನು ಸಹೋದರರರೇ, ನಾವೇನು ಮಾಡಬೇಕು ಎಂದು ಕೇಳಲು ಪೇತ್ರನು ಅವರಿಗೆ ನಿಮ್ಮ

ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ; ಆ ವಾಗ್ದಾನವೂ ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು. ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾಗಿ ಸಾಕ್ಷಿನುಡಿದು ವಕ್ರ ಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ ಎಂದು ಅವರನ್ನು ಎಚ್ಚರಿಸಿದನು. ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರುಸಾವಿರ ಜನರು ಅವರಲ್ಲಿ ಸೇರಿದರು". "ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆ ಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು. ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು" (ಅ.ಕೃ.2:32–41,46,47).

ಮೇಲೆ ವಿವರಿಸಿದ ವಾಕ್ಯಗಳಲ್ಲಿ ಕರ್ತನ ಸಭೆಯು ಸ್ಥಾಪಿಸಲ್ಪಟ್ಟಿತ್ತು. ಇದೆಲ್ಲವೂ ಯೆರೂಸಲೇಮಿನಲ್ಲಿ ನಡೆಯಿತು. ಪವಿತ್ರಾತ್ಮ ಸುರಿಸಲ್ಪಟ್ಟನು. ಪ್ರವಾದನೆಗಳು ಇಲ್ಲಿ ನೇರವೇರಿದವು. "ಇದು ಪ್ರವಾದಿಯಾದ ಯೋವೇಲನ ಮೂಲಕ ಹೇಳಿಸಿದ ಸಂಗತಿ" ಎಂದು ಪೌಲನು ಪ್ರತ್ಯೇಕವಾಗಿ ಹೇಳಿದನು(ಅ.ಕೃ.2:16). ಆದುದರಿಂದ ಇದನ್ನು ಕುರಿತು ಸಂದೇಹ ಪಡುವ ಅವಶ್ಯಕತೆ ಇಲ್ಲ. ಈ ಸಂಗತಿಗಳೆಲ್ಲವೂ ಅಂತ್ಯದಿನಗಳಲ್ಲಿ ನೇರವೇರುವವು ಎಂದು ಪ್ರವಾದಿಗಳು ಹೇಳಿದಂತೆ ಇದು ನಡೆಯಿತು ಎಂದು ಪೇತ್ರನು ಹೇಳಿದನು. ಆದ್ದರಿಂದ ಅಂತ್ಯದಿನಗಳಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿತ್ತು. ದೇವರ ಕಡೆಗೆ ತಿರುಗಿ ಕೊಳ್ಳುವದು, ಪಾಪ ಪರಿಹಾರ ಪ್ರಕಟಿಸಲ್ಪಟ್ಟಾಗ ಎಲ್ಲಾ ಜನರು ಅದನ್ನು ಕೇಳಿದರು. ಮೂರುಸಾವಿರ ಜನರು ವಿಧೇಯರಾದರು, ರಕ್ಷಣೆ ಹೊಂದಿದರು, ಸಭೆಯೊಂದಿಗೆ ಸೇರಿಸಲ್ಪಟ್ಟರು. ಆದದರಿಂದ ಕ್ರಿಸ್ತನು ತನ್ನ ಸಭೆಯನ್ನು ಯೆರೂಸಲೇಮಿನಲ್ಲಿ ಕ್ರಿ.ಶ.33ರಲ್ಲಿ ಸ್ಥಾಪಿಸಿದನು. ಅಂದಿನಿಂದ ಅದು ಅಸ್ಥಿತ್ವದಲ್ಲಿದೆ.

## ಪಾಠ – 4

# ಸಭೆಯ ರೂಪರೇಷೆಗಳು/ಲಕ್ಷಣಗಳು
# (Identity/Charecterstics of the Church)

ಅನೇಕ ವರ್ಷಗಳ ಹಿಂದೆ ತಪ್ಪಿಹೋದ ಸ್ನೇಹಿತನನ್ನು ನೀನು ಹೇಗೆ ಕಂಡುಕೊಳ್ಳುವಿ? ಮೊದಲು ನೀನು ಆತನ ರೂಪರೇಖೆಗಳನ್ನು ಕುರಿತ ವಿಷಯಗಳನ್ನೆಲ್ಲಾ ಸಂಗ್ರಹಿಸಿದ ನಂತರ ಆತನನ್ನು ಹುಡುಕುವದಕ್ಕೆ ಪ್ರಾರಂಭಿಸುವಿಯಲ್ಲವೇ? ನೀನು ಹುಡುಕುತ್ತಿರುವ ಸ್ನೇಹಿತನ ಹೋಲಿಕೆಗಳನ್ನು ಹೊಂದಿದವನನ್ನು ಕೊನೆಗೆ ಅಂಗೀಕರಿಸುವಿ. ಅದೇ ರೀತಿಯಲ್ಲಿ ಈ ಲೋಕದಲ್ಲಿ ಅನೇಕ ಸಭೆಗಳಿವೆ. ಆದರೆ ಅವೆಲ್ಲವುಗಳಲ್ಲಿ ಸರಿಯಾದದ್ದು, ನಿಜವಾದದ್ದು ಯಾವದು ಎಂದು ನಮಗೆ ಹೇಗೆ ತಿಳಿಯುತ್ತದೆ? ಇದನ್ನು ತಿಳಿದುಕೊಳ್ಳುವುದಕ್ಕೆ ನಿಜವಾದ ಸಭೆಯ ರೂಪರೇಖೆಗಳನ್ನು ತಿಳಿದುಕೊಂಡು ಈ ಲೋಕದಲ್ಲಿರುವ ಎಲ್ಲಾ ಸಭೆಗಳನ್ನು ಆ ನಿಜವಾದ ಸಭೆಯೊಂದಿಗೆ ಹೋಲಿಸಿ ನೋಡಬೇಕು. ಎಲ್ಲಾ ವಿಷಯಗಳಲ್ಲಿಯೂ ನಿಜವಾದ ಸಭೆಯ ಹೋಲಿಕೆಗಳಿರುವ ಸಭೆಯನ್ನೇ ನಾವು ನಿಜ ಸಭೆಯೆಂದು ತಪ್ಪದೇ ಅಂಗೀಕರಿಸಬೇಕು. ಆದರೆ ನಿಜವಾದ ಸಭೆಯ ಲಕ್ಷಣಗಳೇನು? ಅವು ನಮಗೆ ಎಲ್ಲಿ ದೊರೆಯುತ್ತವೆ? ಇದಕ್ಕೆ ಬೈಬಲ್ ಉತ್ತರಿಸುತ್ತದೆ.

ಸಭೆಯ ನಿಜವಾದ ಲಕ್ಷಣಗಳೆಲ್ಲವನ್ನು ಬೈಬಲ್ ನಮಗೆ ಬೋಧಿಸುತ್ತದೆ. ಆದ್ದರಿಂದ ಅವು ಯಾವುವು ಎಂದು ಈಗ ನಾವು ನೋಡೋಣ:

**1.ಕ್ರಿಸ್ತನು ಸಭೆಯನ್ನು ಸ್ಥಾಪಿಸಿದನು :** "ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಆದನ್ನು ಸೋಲಿಸಲಾರದು" ಎಂದು ಯೇಸು ಹೇಳಿದನು (ಮತ್ತಾಯ 16:18).

**2.ಅದು ಯೆರೂಸಲೇಮಿನಲ್ಲಿ ಪ್ರಾರಂಭವಾಯಿತು :** ಲೂಕ 24:45–49 ಮತ್ತು ಅ.ಕೃ.2:5 ರಲ್ಲಿ ಇದು ನಮಗೆ ಕಾಣಿಸುತ್ತದೆ.

**3.ಅದು ಕ್ರಿ.ಶ.33 ರಲ್ಲಿ ಸ್ಥಾಪನೆಯಾಯಿತು ಪಂಚಾಶತ್ತಮ ಹಬ್ಬದ ದಿನದಂದು :** ಅ.ಕೃ.2ನೇ ಅಧ್ಯಾಯದಲ್ಲಿ ಇದು ನಮಗೆ ಕಾಣಿಸುತ್ತದೆ.

**4.ಸಭೆಯು ಕ್ರಿಸ್ತನ ಹೆಸರನ್ನು ಧರಿಸಿಕೊಂಡಿರುತ್ತದೆ :** ಅನೇಕ ಸ್ಥಳೀಯ ಸಭೆಗಳನ್ನು ಕುರಿತು ಹೇಳುತ್ತಾ "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" (ರೋಮಾ 16:16) ಎಂದು ಪೌಲನು ಹೇಳಿದನು. ಕೊರಿಂಥದಲ್ಲಿರುವ ಸಭೆಯನ್ನು ಉದ್ದೇಶಿಸಿ "ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ" (1ಕೊರಿಂಥ 12:27) ಎಂದೂ ಪೌಲನು ಹೇಳಿದ್ದಾನೆ. ಆದರೆ ಈ ದೇಹವು ಏನಾಗಿದೆ? ಸಭೆಯಾಗಿದೆ (ಎಫೆಸ 1:22,23).

**5.ಅದರ ಸದಸ್ಯರು ಕ್ರೈಸ್ತರೆಂದು ಕರೆಯಲ್ಪಟ್ಟರು :** "ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು" (ಅ.ಕೃ.11:26). "ಅದಕ್ಕೆ ಅಗ್ರಿಪ್ಪನು–ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವದಕ್ಕೆ ಒಡಂಬಡಿಸುತ್ತೀಯಾ?" ಎಂದು ಪೌಲನಿಗೆ ಹೇಳಿದನು (ಅ.ಕೃ.26:28). "ಆದರೆ ಕ್ರೈಸ್ತನಾಗಿ ಭಾದೆ ಪಟ್ಟರೆ ಅವನು ನಾಚಿಕೆ ಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1ಪೇತ್ರ 4:16). "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ ಎಂದು ಹೇಳಿದನು" (ಅ.ಕೃ.4:12).

**6.ಕ್ರಿಸ್ತನು ಆ ಸಭೆಗೆ ಶಿರಸ್ಸಾಗಿದ್ದಾನೆ :** "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿ ಸಂಭೂತನು, ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ" (ಕೊಲೊಸ್ಸೆ 1:18).

**7.ಒಂದೇ ಒಂದು ಇದೆ :** "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು; ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು (ಎಫೆಸ 4:4). ಹಾಗಾದರೆ ಈ ಶರೀರ ಯಾವುದು? ಅದು ಸಭೆಯೆ (ಕೊಲೊಸ್ಸೆ 1:18). ಆದದರಿಂದ ಒಂದೇ ಶರೀರವಿರುವುದಾದರೆ ಆ ಶರೀರ ಸಭೆಯಾದರೆ, ಸಭೆಯು ಒಂದೇ.

**8.ಸಭೆಯಲ್ಲಿ ಸೇರುವದಕ್ಕೆ ಕೆಲವು ನಿಯಮಗಳಿವೆ:** ಅವು ನಂಬಿಕೆ (ಇಬ್ರಿಯ 11:6), ಮಾನಸಾಂತರ (ಅ,ಕೃ.17:30), ಒಪ್ಪಿಕೊಳ್ಳುವುದು (ರೋಮಾ 10:9,10), ದೀಕ್ಷಾಸ್ನಾನ (ಮಾರ್ಕ 16:16) ಎಂಬುವುಗಳು. ಒಬ್ಬನು ರಕ್ಷಣೆಹೊಂದಿದ ನಂತರ ಸಭೆಯಲ್ಲಿ ಸೇರಿಸಲ್ಪಡುವನು (ಅ.ಕೃ.2:47). ಮತ್ತು ಕ್ರಿಸ್ತನೊಳಗೆ, ಆತನ ಸಭೆಯೊಳಕ್ಕೆ ದೀಕ್ಷಾಸ್ನಾನ ಹೊಂದಿದಂತೆ ಎಂದು ಗ್ರಹಿಸಬಹುದು. ಈ ಆಜ್ಞೆಗೆ

ವಿಧೇಯತೆ ತೋರಿಸುವುದರ ಮೂಲಕ ಒಬ್ಬನು ಆತನ ರಾಜ್ಯದೊಳಗೆ ಅಥವಾ ಸಭೆಯೊಳಗೆ ಹುಟ್ಟಿದವನಾಗುವನು (ಯೋಹಾನ 3:3,5).

**9.ಸಭೆಯ ಆರಾಧನೆ ಪ್ರತ್ಯೇಕವಾದದ್ದು :** ಕ್ರೈಸ್ತರು ವಾರದ ಮೊದಲನೆಯ ದಿನ ಅಂದರೆ ಭಾನುವಾರ ಸಭೆಯಾಗಿ ಕೂಡಿಕೊಳ್ಳುವರು (ಅ.ಕೃ.20;7). ಹಾಡುಗಳನ್ನು ಹಾಡುವರು (ಎಫೆಸ 5:19), ಪ್ರಾರ್ಥನೆ ಮಾಡುವರು (ಅ.ಕೃ.2:42), ವಾಕ್ಯವನ್ನು ಓದುವರು (2ತಿಮೊಥೆ 2:15), ರೊಟ್ಟಿ ಮುರಿಯುವದರಲ್ಲಿ ಪಾಲುಗಾರರಾಗುವರು (1ಕೊರಿಂಥ 11) ಮತ್ತು ಕಾಣಿಕೆಗಳನ್ನು ಕೊಡುವರು (1ಕೊರಿಂಥ 16:2).

**10.ಸಭೆಯ ಬೋಧನೆಯೆಲ್ಲಾ ಬೈಬಲಿನ ಮೇಲೆ ಆಧಾರಗೊಂಡಿರುತ್ತದೆ :** ಅದಕ್ಕೆ ಸ್ವಲ್ಪ ಸೇರಿಸುವದಾಗಲಿ, ಇಲ್ಲವೇ ಅದರಿಂದ ಮತ್ತೊಂದನ್ನು ತೆಗೆಯುವುದಾಗಲಿ ನಡೆಯುವುದಿಲ್ಲ (ಪ್ರಕಟಣೆ 22:18,19). ಬೈಬಲ್ ಮಾತ್ರವೇ ನಂಬಿಕೆಯ ಪ್ರಮಾಣ ಪುಸ್ತಕವಾಗಿದೆ. ಉಳಿದ ಎಲ್ಲವನ್ನು ಅದು ತಿರಸ್ಕರಿಸುತ್ತದೆ.

**11.ಸಭೆಯ ಪರಿಪಾಲನೆ ಎಲ್ಲವೂ ದೇವರ ವಾಕ್ಯದ ಅನುಸಾರವಾಗಿ ನಡೆಯುತ್ತದೆ :** ಕ್ರಿಸ್ತನೇ ಶಿರಸ್ಸು. ಪ್ರತಿ ಸ್ಥಳೀಯ ಸಭೆಯು ಅದರ ಹಿರಿಯರನ್ನು, ಅದರ ಸೇವಕರನ್ನು ಹೊಂದಿರಬೇಕು (1ತಿಮೊಥೆ 3; ತೀತ 1 ಅಧ್ಯಾಯಗಳು). ಕರ್ತನ ಸಭೆಗೆ ಭೂಲೋಕದಲ್ಲಿ ಯಾವ ಶಿರಸ್ಸು ಇಲ್ಲ. ಅದರ ಒಂದು ಪ್ರಧಾನ ಕಛೇರಿ ಇಲ್ಲ, ರಾಷ್ಟ್ರೀಯ ಅಂತರಾಷ್ಟ್ರೀಯವಾಗಿ ಒಂದು ಮನುಷ್ಯ ಕಲ್ಪಿತ ಆರ್ಗನೈಜೇಷನ್ ಇಲ್ಲ.

**12.ಸಭೆಯ ಕೆಲಸ ಮೂರು ರೀತಿಯಲ್ಲಿವೆ :** ಅದು ಸುವಾರ್ತೆ ಪ್ರಕಟಿಸುವುದು (ಮಾರ್ಕ 17:16), ಅವಶ್ಯಕತೆಯಲ್ಲಿರುವವರಿಗೆ ಸಹಾಯ ಮಾಡುವುದು (ಗಲಾತ್ಯ 6, ಯಾಕೋಬ 2), ಸದಸ್ಯರನ್ನು ಆತ್ಮೀಯ ಸ್ಥಿತಿಯಲ್ಲಿ ಅಭಿವೃದ್ಧಿ ಪಡಿಸುವುದು (ಇಬ್ರಿಯ 3:12–14).

**13.ಪ್ರತಿಯೊಬ್ಬ ಕ್ರೈಸ್ತವನು ನಂಬಿಕೆಯಿಂದ ಕ್ರೈಸ್ತವ ಜೀವಿತವನ್ನು ಜೀವಿಸಬೇಕು :** ನಾವು ಲೋಕವನ್ನು ಪ್ರೀತಿಸಬಾರದು (1 ಯೋಹಾನ 2:15; ಯಾಕೋಬ 4;4). ಆದರೆ ಆತ್ಮೀಯ ಫಲಗಳನ್ನು ಫಲಿಸಬೇಕು (ಗಲಾತ್ಯ 5;22,23). ನಂಬಿಕೆಯಿಂದ ಜೀವಿಸುವವರಿಗೆ ನೀತ್ಯಜೀವದ ಕೀರಿಟ ದೊರೆಯುವುದು (ಪ್ರೆಕಟಣೆ 22:10).

ಮೇಲೆ ಹೇಳಲಾಗಿರುವುದು ಸಭೆಯ ಕೆಲವು ರೂಪರೇಷೆಗಳು ಅಥವಾ

ಲಕ್ಷಣಗಳು. ಇವೆಲ್ಲವುಗಳನ್ನು ಬೈಬಲಿನಿಂದ ತೆಗೆದುಕೊಳ್ಳಲಾಗಿದೆ. ನಿನ್ನ ಸಭೆಯನ್ನು ಇವುಗಳೊಂದಿಗೆ ಹೋಲಿಸಿ ನೋಡು. ಉದಾಹರಣೆಗೆ ಮೊದಲ ನಾಲ್ಕು ಅಂಶಗಳನ್ನು ನೋಡು. ನಿನ್ನ ಸಭೆಯನ್ನು ಯಾರು ಸ್ಥಾಪನೆ ಮಾಡಿದರು? ಕ್ರಿಸ್ತನಾ ಅಥವಾ ಮನುಷ್ಯನಾ? ನಿನ್ನ ಸಭೆ ಎಲ್ಲಿ ಸ್ಥಾಪಿಸಲ್ಪಟ್ಟಿತ್ತು? ಯೆರೂಸಲೇಮಿನಲ್ಲಿಯಾ ಅಥವಾ ಬೇರೆ ಸ್ಥಳದಲ್ಲಿಯಾ? ನಿನ್ನ ಸಭೆ ಯಾವಾಗ ಸ್ಥಾಪನೆಯಾಯಿತ್ತು? ಅದು ಕ್ರಿ.ಶ.33 ರಲ್ಲಿ ಅಥವಾ ಅದರ ನಂತರವಾದರೆ ಅದು ಕರ್ತನ ಸಭೆಯಾಗಲಾರದು. ನಿನ್ನ ಸಭೆಯು ಯಾವ ಹೆಸರನ್ನು ಧರಿಸಿಕೊಂಡಿದೆ? ಅದು ಕ್ರಿಸ್ತನ ಹೆಸರನ್ನು ಧರಿಸಿಕೊಳ್ಳದೆ ಹೋದರೆ ಅದು ಕರ್ತನ ಸಭೆ ಹೇಗಾಗುತ್ತದೆ? ಈ ರೀತಿಯಲ್ಲಿ ನೀನು ಪರಿಶೋಧಿಸಿದರೆ ನಿನ್ನ ಸಭೆ ಕರ್ತನದೊ ಇಲ್ಲವೇ ಮತ್ತೊಬ್ಬ ಮನುಷ್ಯನದೊ ನೀನು ಗಮನಿಸಬಹುದು. ಉಳಿದ ಸಭೆಗಳೆಲ್ಲವನ್ನು ನೀನು ಹೀಗೆ ಪರಿಶೋಧಿಸಿ ನೋಡು. ಒಳ್ಳೆ ಮನಸಾಕ್ಷಿಯುಳ್ಳವನಾದರೆ ಅವುಗಳ ಭೇದವನ್ನು ನೀನು ಸುಲಭವಾಗಿ ಗ್ರಹಿಸಿಕೊಳ್ಳುವಿ.

ನಿನ್ನ ಸಭೆಯು ಬೈಬಲಿನಲ್ಲಿರುವ ನಿಜವಾದ ಸಭೆ ಅಲ್ಲವೆಂದು ನೀನು ಗ್ರಹಿಸಿದರೆ ಅದನ್ನು ಹಿಂದೆ ಬಿಟ್ಟು, ಸತ್ಯವನ್ನು ತಿಳಿದುಕೊಂಡು ಅದಕ್ಕೆ ಒಳಗಾಗಿ, ಕ್ರಿಸ್ತನ ಸಭೆಯ ಸದಸ್ಯನಾಗಲು ತ್ವರೆಪಡಬೇಕೆಂದು ನಿನ್ನನು ಕೋರಿಕೊಳ್ಳುತ್ತೇನೆ. ಆಗ ರಕ್ಷಣೆ ಯಾವುದರಲ್ಲಿದೆಯೋ ಅದರಲ್ಲಿ ನೀನು ಇರುವಿ.

ಪಾಠ – 5

# ಸಭೆಯ ಹೆಸರು
# (Name of the Church)

ಸಭೆಯು ವಾಕ್ಯಾನುಸಾರವಾದದ್ದಾದರೆ ಅದು ವಾಕ್ಯಾನುಸಾರವಾದ ಹೆಸರನ್ನು ಧರಿಸಿಕೊಂಡಿರಬೇಕು. ಆದರೆ ಇಂದು ಮನುಷ್ಯ ಕಲ್ಪಿತವಾದ ಹೆಸರುಗಳ್ಳುಳ ಅನೇಕ ಮನುಷ್ಯ ಕಲ್ಪಿತ ಸಭೆಗಳಿವೆ. ಇವೆಲ್ಲವುಗಳು ಹೇಗೆ ಬಂದವು? ಕೆಲವು ಸಭೆಗಳು ಅವುಗಳನ್ನು ಸ್ಥಾಪಿಸಿದವರ ಗೌರವಾರ್ಥವಾಗಿ ಅವರ ಹೆಸರುಗಳಿಂದಲೇ ಕರೆಯಲ್ಪಡುತ್ತಿವೆ. ಉದಾಹರಣೆಗೆ "ಲೂಥರನ್" ಎಂಬ ಸಭೆ. ಕೆಲವು ಸಭೆಗಳು ಅವುಗಳು ಬೋಧಿಸುವ ಬೋಧನೆಯ ಪ್ರಕಾರ ಅಥವಾ ಅವರು ಕೆಲಸ ಮಾಡುವ ಪದ್ಧತಿಯ ಪ್ರಕಾರ ಕರೆಯಲ್ಪಡುತ್ತಿವೆ. ಕೆಲವುಗಳಾದರೆ ಒಂದು ದಿನವನ್ನು ಪ್ರಾಮುಖ್ಯವನ್ನಾಗಿ ತೆಗೆದುಕೊಂಡು ಆ ದಿನದ ಹೆಸರಿನಿಂದಲೇ ಕರೆಯಲ್ಪಡುತ್ತಿವೆ. ಉದಾ:ಪೆಂಥಕೊಸ್ತ್ ಸಭೆ, ಸವೆಂತ್ ಡೇ ಅಡ್ವಂಟಿಸ್ಟ್, ಮತ್ತು ಕೆಲವು ಅವುಗಳ ಪರಿಪಾಲನೆ ಪದ್ಧತಿಯ ಪ್ರಕಾರ ಕರೆಯಲ್ಪಡುತ್ತಿವೆ. ಇಂತಹ ಸಭೆಗಳು ಕ್ರಿಸ್ತನಿಗೆ ಸೇರಬೇಕಾದ ಮಹಿಮೆಯನ್ನು, ಸ್ತುತಿ, ಗೌರವಗಳನ್ನು ಆತನಿಂದ ತೊಲಗಿಸಿ ಅವುಗಳನ್ನು ಆರಂಭಿಸಿದ ಮನುಷ್ಯನ ಹೆಸರುಗಳಿಗೆ, ಬಿರುದುಗಳಿಗೆ ಕೊಡುತ್ತಿದ್ದಾರೆ.

ಮನುಷ್ಯ ಕಲ್ಪಿತ ಹೆಸರುಗಳು, ಬಿರುದುಗಳು ಸರಿಯಾದವುಗಳಲ್ಲ ಎಂದು ಹೇಳುವದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಅವು ಒಡಕುಗಳನ್ನು ಉಂಟುಮಾಡುತ್ತವೆ. ದೇವರು ಕಲ್ಪಿಸದ ಬೇಧಗಳನ್ನು ಅವು ಕಲ್ಪಿಸುತ್ತವೆ. ಮನುಷ್ಯರನ್ನು ಅವು ಬೇರೆ ಬೇರೆ ಮಾಡುತ್ತವೆ. ಆತನ ಶಿಷ್ಯರೆಲ್ಲರೂ ಐಕ್ಯವಾಗಿರಬೇಕೆಂದು ಯೋಹಾನ 17ನೇ ಅಧ್ಯಾಯದಲ್ಲಿ ಯೇಸು ಕ್ರಿಸ್ತನು ಮಾಡಿದ ಪ್ರಾರ್ಥನೆಯನ್ನು ಅವು ವಿರೋಧಿಸುತ್ತವೆ. ಎರಡನೆಯದಾಗಿ ವಾಕ್ಯದಲ್ಲಿ ಅವುಗಳು ಖಂಡಿಸಲ್ಪಟ್ಟಿವೆ. 1ಕೊರಿಂಥ 1:10–17ರಲ್ಲಿ ಮನುಷ್ಯ ಕಲ್ಪಿತ ಹೆಸರುಗಳನ್ನು ಧರಿಸಿಕೊಂಡು ಗುಂಪುಗಳಾಗಿ ವಿಭಾಗಿಸಲ್ಪಡುವುದನ್ನು ಪೌಲನು ಖಂಡಿಸಿದ್ದಾನೆ. ಮೂರನೆಯದಾಗಿ ಅವು ಕ್ರಿಸ್ತನ ಹೆಸರಿಗೆ ಬದಲಾಗಿ ಮನುಷ್ಯರ ಹೆಸರನ್ನು ಕಲ್ಪಿಸುತ್ತವೆ. ಆದರೆ ಕ್ರಿಸ್ತನ ಹೆಸರನ್ನು ಕುರಿತು ವಾಕ್ಯವು ಹೀಗೆ ಹೇಳುತ್ತದೆ "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅ.ಕೃ.4:12). ನಾಲ್ಕನೆಯದಾಗಿ ಮಾನವ ಕಲ್ಪಿತ ಹೆಸರುಗಳು ವಿಶ್ವಾಸಿಗಳಲ್ಲಿ ಅಪಾರ್ಥಗಳನ್ನು, ಕಳವಳವನ್ನು, ವಿಭಿನ್ನತೆಗಳನ್ನು ಉಂಟುಮಾಡುತ್ತವೆ. ಅಪನಂಬಿಗಸ್ಥರಿಗೆ ಅವು ದಾರಿಯಾಗುವವು.

ಐದನೆಯದಾಗಿ ಆ ಹೆಸರುಗಳನ್ನು ಧರಿಸಿದ ಎಲ್ಲಾರನ್ನು ಅವು ಕ್ರಿಸ್ತನಿಂದ ಬೇರೆ ಮಾಡಿ ನಾಶನಕ್ಕೆ ಗುರಿಮಾಡುತ್ತವೆ. ಅದ್ದರಿಂದ ಮಾನವ ಕಲ್ಪಿತ ಹೆಸರುಗಳು ಪಾಪವು, ದೋಷವು ಆಗುತ್ತದೆ.

ಸಭೆಯನ್ನಾದರೆ ಯೇಸುಕ್ರಿಸ್ತನೇ ಸ್ಥಾಪಿಸುವನೆಂದು ವಾಗ್ದಾನ ಮಾಡಿದನು (ಮತ್ತಾಯ 16:18). ಆತನು ತನ್ನ ಸ್ವಂತ ರಕ್ತವನ್ನು ಕೊಟ್ಟು ಸ್ಥಾಪಿಸಿದನು (ಅ.ಕೃ.20:28). ಆತನು ಅದರ ರಕ್ಷಕನು (ಎಫಸ 5:23); ಅದರ ಶಿರಸ್ಸು ಆತನೇ (ಕೊಲೊಸ್ಸೆ 1:18). ಅದ್ದರಿಂದ ಸಭೆಯು ಆತನ ಸ್ಥಾಪಕನ, ನಿರ್ಮಾಣಿಕನ, ರಕ್ಷಕನ, ಶಿರಸ್ಸಾಗಿರುವವನನ್ನು ಗೌರವಿಸುವ ನಿಮಿತ್ತ ಸಹಜವಾಗಿ ಆತನ ಹೆಸರನ್ನೇ ಧರಿಸಿಕೊಳ್ಳಬೇಕು. ಆದದರಿಂದ ಪೌಲನು ರೋಮಾಪುರದಲ್ಲಿರುವ ಸಭೆಯವರಿಗೆ ಒಂದು ಪತ್ರಿಕೆಯನ್ನು ಬರೆಯುತ್ತಾ "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" ಎಂಬ ಶುಭವಚನವನ್ನು ಅವರಿಗೆ ಕಳುಹಿಸಿದನು (ರೋಮಾ 16:16). ಕೊರಿಂಥದಲ್ಲಿರುವ ಸಭೆಯಲ್ಲಿ " ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ" ಎಂದು ಪೌಲನು ಹೇಳಿದನು (1ಕೊರಿಂಥ 12:27). ಆದರೆ ಶರೀರವೇ ಸಭೆಯಾಗಿರುವಾಗ ಆತನು ಕ್ರಿಸ್ತನ ಸಭೆಯನ್ನು ಕುರಿತು ಮಾತನಾಡುತ್ತಿದ್ದಾನೆ (ಎಫೆಸ 1:22,23). ಅದು ದೇವರ ಸಭೆ (1ಕೊರಿಂಥ 1:2, ಅ.ಕೃ.20:23). ದೇವರ ರಾಜ್ಯ (ಎಫೆಸ 5:5). ಆತನ ಪ್ರಿಯ ಕುಮಾರನ ರಾಜ್ಯ (ಕೊಲೊಸ್ಸೆ 1:13), ಕರ್ತನ ರಾಜ್ಯ (1ಪೇತ್ರ 1:1). ಸಭೆ (ಅ.ಕೃ.13:1), ಜೀವಸ್ವರೂಪನಾದ ದೇವರ ಸಭೆ (1ತಿಮೊಥೆ 3:15), ಚೊಚ್ಚಲ ಮಕ್ಕಳ ಸಭೆ (ಇಬ್ರಿಯ 12:23) ಎಂದು ಕರೆಯಲ್ಪಟ್ಟಿದೆ. ಇವೆಲ್ಲವೂ ಸಭೆಯನ್ನು ವರ್ಣಿಸುವ ಬೈಬಲ್ ಪದಗಳು. ಯಾವುದು ದೇವರದೋ ಅದು ಕ್ರಿಸ್ತನದು ಸಹ ಎಂದು ಗುರುತಿಸಬೇಕು. ಮೇಲೆ ಹೇಳಲಾದ ಹೆಸರುಗಳೆಲ್ಲವೂ ಕ್ರಿಸ್ತನು ಸ್ಥಾಪಿಸಿದ ಸಭೆಯನ್ನು ಸೂಚಿಸುತ್ತವೆ. ಅದು ಕ್ರಿಸ್ತನ ಸಭೆ ಅಲ್ಲವಾದರೆ ಮತ್ತೆ ಯಾರ ಸಭೆ? ಸಭೆಯನ್ನು ವರ್ಣಿಸುವ ಇಷ್ಟು ಪದಗಳು ಬೈಬಲಿನಲ್ಲಿ ಇರುವಾಗ ಕ್ರಿಸ್ತನ ಸಭೆಯನ್ನು ಬೇರೊಂದು ಹೆಸರಿನಿಂದ ಕರೆಯುವವರು ವಾಕ್ಯದಿಂದ ದೂರವಾಗುತ್ತಿದ್ದಾರೆ. ಅದ್ದರಿಂದ ಬೈಬಲ್ ಹೇಳುವಂತೆ ಮಾಡೋಣ ಆಗ ನಾವು ಸರಿಯಾಗಿ ಇರುವೆವು.

ಸಭೆಯ ಸದಸ್ಯರ ಹೆಸರನ್ನು ಸಹ ವಾಕ್ಯಗಳು ವಿವರಿಸುತ್ತವೆ. ದೇವರು ತನ್ನ ಪ್ರಜೆಗಳಿಗೆ ಒಂದು ಹೊಸ ಹೆಸರನ್ನು ಕೊಡುವೆನೆಂದು ಪ್ರವಾದಿಯಾದ ಯೆಶಾಯನ ಮೂಲಕ ಮೊದಲೇ ಹೇಳಿಸಿದ್ದಾನೆ (ಯೆಶಾಯ 62:2). ಅನೇಕ ವರ್ಷಗಳ ನಂತರ ಪೌಲನು ಆ ಹೆಸರನ್ನು ಧರಿಸಿದನು (ಅ.ಕೃ.9:1). ಆದರೆ ಅನ್ಯ ಜನರು ಸಹ ದೇವರ ವಾಕ್ಯಕ್ಕೆ ವಿಧೇಯರಾಗುವವರೆಗೂ ಅದು ಕೊಡಲ್ಪಟ್ಟಿರಲಿಲ್ಲ. ಅಂತಿಯೋಕ್ಯದಲ್ಲಿಯೇ

ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು (ಅ.ಕೃ.11:26) ಆಗ ಆ ಪ್ರವಾದನೆ ನೇರವೇರಿತು. ಸ್ವಲ್ಪ ಕಾಲದ ನಂತರ ಪೌಲನು ಅಗ್ರಿಪ್ಪ ರಾಜನಿಗೆ ಉಪದೇಶ ಮಾಡುವಾಗ ಅವನು "ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವದಕ್ಕೆ ಒಡಂಬಡಿಸುತ್ತೀಯಾ?" ಎಂದು ಪೌಲನಿಗೆ (ಅ.ಕೃ.26:28) ಹೇಳಿದನು. ಪೇತ್ರನು ಸಹ ಹೀಗೆ ಹೇಳಿದ್ದಾನೆ " ಆದರೆ ಕ್ರೈಸ್ತನಾಗಿ ಭಾದೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1ಪೇತ್ರ 4:16). ಆದುದರಿಂದ ಕ್ರಿಸ್ತನನ್ನು ಅನುಸರಿಸುವವರು ಹೊಸ ಒಡಂಬಡಿಕೆಯ ಕಾಲದಲ್ಲಿ ಕ್ರೈಸ್ತವರೆಂದು, ಕೇವಲ ಕ್ರೈಸ್ತವರೆಂದು ಮಾತ್ರವೇ ನಮಗೆ ತಿಳಿಸುತ್ತದೆ. ಇಂದು ನಾವು ಸಹ ಹಾಗೆ ಇರಬೇಕೆಂದು ಕರ್ತನು ಅಪೇಕ್ಷಿಸುತ್ತಿದ್ದಾನೆ. ಕ್ರೈಸ್ತವನೆಂಬ ಹೆಸರಿಗೆ ಇನ್ನೂ ಸ್ವಲ್ಪ ಕಲ್ಪಿಸಿದ ಹೆಸರನ್ನು ನಾವು ಧರಿಸುವದಾದರೆ ನಾವು ನಿಜವಾದ ಕ್ರೈಸ್ತವರಲ್ಲ. ಕ್ರೈಸ್ತವರೆಂಬ ಹೆಸರು ಈ ಲೋಕದೊಳಗಿನಿಂದ ಒಬ್ಬನನ್ನು ಪ್ರತ್ಯೇಕಮಾಡುತ್ತದೆ. ಕರ್ತನು ಸಹ ಇದನ್ನೇ ಕೋರಿಕೊಳ್ಳುತ್ತಾನೆ.

ಸಭೆಯ ಹೆಸರಿನಲ್ಲಿಯೂ, ಸದಸ್ಯನ ಹೆಸರಿನಲ್ಲಿಯೂ ಕ್ರಿಸ್ತನ ಹೆಸರು ಹೆಚ್ಚಿಸಲ್ಪಡಬೇಕು. ಯಾಕೆ? ಯಾಕೆಂದರೆ ಅದು ಕುಟುಂಬದ ಹೆಸರಾಗಿರುವದರಿಂದ (ಎಫೆಸ 3:14,15), ಆ ಹೆಸರು ಎಲ್ಲಾ ನಾಮಕ್ಕಿಂತಲೂ ಹೆಚ್ಚಾದ ನಾಮವಾಗಿರುವದರಿಂದ (ಫಿಲಿಪ್ಪಿ 2:9–12), ಮತ್ತು ಆ ಹೆಸರಿನಲ್ಲಿಯೇ ರಕ್ಷಣೆಯುಂಟು (ಅ.ಕೃ.4:12). ಆದ್ದರಿಂದ ನಾವು ಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಡಬೇಕು (1ಯೋಹಾನ 5:13), ಆ ಹೆಸರನ್ನು ಒಪ್ಪಿಕೊಳ್ಳಬೇಕು (2ತಿಮೋಥೆ 2:19), ಮಾನಸಾಂತರ ಹೊಂದಿ ಆ ಹೆಸರಿನಲ್ಲಿಯೇ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು (ಅ.ಕೃ.2:38). ಆ ಹೆಸರಿನಲ್ಲಿಯೇ ಆರಾಧನೆಗೆ ಸಭೆಯಾಗಿ ಕೂಡಿಬರಬೇಕು (ಮತ್ತಾಯ 18:20), ಎಲ್ಲಾವು ಆತನ ಹೆಸರಿನಲ್ಲಿಯೇ ಮಾಡಬೇಕು (ಕೊಲೊಸ್ಸೆ 3:17). ಹಾಗೆ ಮಾಡುವುದರಿಂದ ಆತನ ಹೆಸರಿನಲ್ಲಿ ನಾವು ನಿತ್ಯಜೀವ ಹೊಂದುವೆವು (ಯೋಹಾನ 20:30,31).

ಮೇಲೆ ವಿವರಿಸಿದ ಎಲ್ಲವನ್ನು ಗ್ರಹಿಸಿದ ನಂತರ ಹೆಸರಿನಲ್ಲಿ ಏನು ಇಲ್ಲ ಎಂದು ಯಾರು ಹೇಳುವರು? ಮನುಷ್ಯರ ಹೆಸರಿನಲ್ಲಿಯೂ ಬಿರುದುಗಳಲ್ಲಿಯೂ ಯಾವ ವಿಧವಾದ ರಕ್ಷಣೆ ಇಲ್ಲ. ಅವುಗಳನ್ನು ಧರಿಸಿಕೊಂಡವರು ಅವುಗಳಿಂದ ನಾಶನಕ್ಕೆ ಗುರಿಯಾಗುವರು. ಆದರೆ ಕ್ರಿಸ್ತನ ಹೆಸರಿನಲ್ಲಿ ಮಾತ್ರವೇ ರಕ್ಷಣೆ ಇದೆ.

## ಪಾಠ – 6

# ಸಭೆಯ ಪರಿಪಾಲನೆ

## (Organization of the Church)

ಕ್ರಿಸ್ತನು ಸಭೆಯನ್ನು ಸ್ಥಾಪಿಸಿದನು (ಮತ್ತಾಯ 16:18). ಲೋಕದೊಳಗಿನಿಂದ ಕರೆಯಲ್ಪಟ್ಟವರೊಂದಿಗೆ ಅದು ಕೂಡಿಕೊಂಡಿದೆ (ಕೊಲೊಸ್ಸೆ 1:13.14). ರಕ್ಷಣೆ ಹೊಂದಿದವರ ಮಂಡಳಿ (ಅ.ಕೃ.2:47). ಅದು ಕ್ರಿಸ್ತನ ಆತ್ಮೀಯ ಶರೀರವಾಗಿದೆ (ಕೊಲೊಸ್ಸೆ 1:18). ಅದು ಒಂದೇ ಒಂದು ಆಗಿದೆ (ಎಫೆಸ 4:4).

ಸಭೆಯು ಸಾರ್ವತ್ರಿಕವಾದದ್ದು ಸಾವಿರ ಗಟ್ಟಲೇ ಸ್ಥಳೀಯ ಸಭೆಗಳಿಂದ ಅದು ಕೂಡಿಕೊಂಡಿದೆ. ಆದರೆ ಪ್ರತಿ ಸ್ಥಳೀಯ ಸಭೆಯು ವೈಯಕ್ತಿಕ ಸದಸ್ಯರಿಂದ ಕೂಡಿಕೊಂಡಿದೆ. ಅದ್ದರಿಂದ ಸಭೆಯ ಅಧಿಕಾರ ಸ್ಥಳೀಯ ಸಭೆಯದೇ ಆಗಿರುತ್ತದೆ ಹೊರತು ರಾಷ್ಟ್ರೀಯವಾಗಿ, ಅಂತರಾಷ್ಟ್ರೀಯವಾಗಿ ಅಲ್ಲ. ಮತ್ತೊಂದು ಮಾತಿನಲ್ಲಿ ಕರ್ತನ ಸಭೆಗೆ ಭೂಲೋಕ ಸಂಬಂಧವಾದ ಅಧಿಕಾರಿಯಾಗಲಿ, ಮುಖ್ಯ ಕೇಂದ್ರವಾಗಲಿ ಇಲ್ಲ.

ಕ್ರಿಸ್ತನು ಸಭೆಗೆ ಶಿರಸ್ಸು ಆಗಿದ್ದಾನೆಂದು ವಾಕ್ಯವು ಬೋಧಿಸುತ್ತದೆ. ಈ ಕೆಳಗಿನ ವಚನಗಳನ್ನು ನಾವು ಗಮನಿಸೋಣ: "ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲಾವನ್ನು ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆ ಯುಳ್ಳದ್ದಾಗಿದೆ" (ಎಫೆಸ 1:22,23). ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ" (ಎಫೆಸ 5:23). "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿ ಸಂಭೂತನು, ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ" (ಕೊಲೊಸ್ಸೆ 1:18). ಈ ವಚನಗಳೆಲ್ಲಾ ಏನು ಬೋಧಿಸುತ್ತವೆ? ಸಭೆಯೆಂಬ ದೇಹಕ್ಕೆ ಕ್ರಿಸ್ತನು ಶಿರಸ್ಸು ಎಂದು ಬೋಧಿಸುತ್ತದೆ. ಹಾಗಾದರೆ ಎಷ್ಟು ಶಿರಸ್ಸುಗಳಿವೆ? ಒಂದು ಮಾತ್ರವೇ. ಅದು ಕ್ರಿಸ್ತನು ಮಾತ್ರವೆ ಆಗಿದ್ದಾನೆ. ಬೇರೆ ಯಾರು ಆತನನ್ನು ಹಂಚಿಕೊಳ್ಳುವುದಿಲ್ಲ. ಅನೇಕ ಸ್ಥಳೀಯ ಸಭೆಗಳಿಂದ ಕೂಡಿದ ಸಭೆಗೆ ಕ್ರಿಸ್ತನು ಶಿರಸ್ಸಾಗಿದ್ದಾನೆ. ಆದ್ದರಿಂದ ಆತನು ಪ್ರತಿ ಸ್ಥಳೀಯ ಸಭೆಗೂ, ಪ್ರತಿ ಸದಸ್ಯನಿಗೂ ಶಿರಸ್ಸಾಗಿದ್ದಾನೆ. ಇದಕ್ಕೆ ಅನುಗುಣವಾಗಿ ಪೌಲನು ಹೀಗೆ ಹೇಳಿದ್ದಾನೆ " ಆದರೂ ಒಂದು ಸಂಗತಿಯನ್ನು ನೀವು ತಿಳಿಯ ಬೇಕೆಂದು ನನ್ನ ಇಷ್ಟ; ಅದೇನೆಂದರೆ ಪ್ರತಿ

ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ (1ಕೊರಿಂಥ 11:3).

ಪ್ರತೀ ಸ್ಥಳೀಯ ಸಭೆಯು (local congrigation) ಸ್ಥಳೀಯವಾಗಿ ಪರಿಪಾಲನೆ ಹೊಂದಿರಬೇಕು. ಕ್ರಿಸ್ತನು ಶಿರಸ್ಸಾಗಿರುವಾಗ, ಸಭೆಯು ಆತ್ಮೀಯ, ಶಾರೀರಿಕ ಅವಶ್ಯಕತೆಗಳನ್ನು ತೀರಿಸುವದಕ್ಕೆ ಸದಸ್ಯರೊಳಗಿಂದ ಹಿರಿಯರು, ಸೇವಕರು ನೇಮಿಸಲ್ಪಡಬೇಕು. ಸದಸ್ಯರ ಆತ್ಮಗಳನ್ನು ಸನ್ಮಾರ್ಗಕ್ಕೆ ನಡೆಸಬೇಕು (ಇಬ್ರಿಯ 13:7). ಪರಿಚಾರಕರಾದರೆ ಭೌತಿಕವಾದ ಅವಶ್ಯಕತೆಗಳನ್ನು ಸರಿಪಡಿಸಬೇಕು (ಅ.ಕೃ.6). ಪ್ರತಿಯೊಂದು ಸ್ಥಳೀಯ ಸಭೆಯಲ್ಲಿ ಹಿರಿಯರು, ಸೇವಕರು ಎಂದು ಬಹುವಚನದಲ್ಲಿ ವಾಕ್ಯವು ಹೇಳುತ್ತದೆ ಎಂದು ಗಮನಿಸು. ಅದ್ದರಿಂದ ಸಭೆಯಲ್ಲಿ ಒಬ್ಬನೇ ಹಿರಿಯನಾಗಲಿ, ಸೇವಕರಾಕನಾಗಲಿ ಎಂದಿಗೂ ಇರಬಾರದು ಎಂದು ಅರ್ಥವಾಗುತ್ತದೆ. ಒಂದು ಸ್ಥಳೀಯ ಸಭೆಯ ಹಿರಿಯರು, ಸೇವಕರು ಬೇರೊಂದು ಸಭೆಯ ಮೇಲೆ ಅಥವಾ ಸಭೆಗಳ ಮೇಲೆ ಅಧಿಕಾರ ಚಲಾಯಿಸಬಾರದು. ಸಭೆಗಳ ಸದಸ್ಯರಾದರೂ ಒಬ್ಬರಿಗೊಬ್ಬರು ಸಹವಾಸದಲ್ಲಿ ಇರಬಹುದಾಗಲಿ, ಒಬ್ಬರಮೇಲೊಬ್ಬರು ಅಧಿಕಾರ ನಡೆಸಬಾರದು.

ಸಭೆಯ ಹಿರಿಯ (Elder) ಪಾಸ್ಟರ್ (Paster) ಸಭಾಧ್ಯಕ್ಷನು (Bishop) ಮತ್ತು ಪ್ರೆಸ್ಬೆಟ್ಯೆರ್ ಎಂಬ ಪದಗಳೆಲ್ಲವೂ ಒಂದೇ ಪದವಿಯನ್ನು ಸೂಚಿಸುತ್ತವೆ. 1ತಿಮೊಥೆ 3:1–7 ರಲ್ಲಿ ಪೌಲನು ಅನೇಕವಾದ ಅರ್ಹತೆಗಳನ್ನು ಸೂಚಿಸಿದ್ದಾನೆ. "ಸಭಾಧ್ಯಕ್ಷನ ಉದ್ಯೋಗವನ್ನು ಪಡೆದುಕೊಳ್ಳು ಬೇಕೆಂದಿರುವವನು ಒಳ್ಳೆ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದ್ದಾಗಿದೆ. ಸಭಾಧ್ಯಕ್ಷನು ದೋಷಾರೋಪಣೆಯಿಲ್ಲದವನೂ, ಏಕಪತ್ನಿಯುಳ್ಳವನೂ ಮಧ್ಯಾಸಕ್ತಿಯಿಲ್ಲದವನೂ, ಜಿತೇಂದ್ರಿಯನು, ಮಾನಸ್ಥನೂ, ಅತಿಥಿಸತ್ಕಾರ್ಯ ಮಾಡುವವನು, ಬೋಧಿಸುವದರಲ್ಲಿ ಪ್ರವೀಣನೂ ಆಗಿರಬೇಕು. ಅವನು ಕುಡಿದು ಜಗಳವಾಡುವವನೂ ಹೊಡೆದಾಡುವವನೂ ಆಗಿರಬಾರದು; ಸಾತ್ವಿಕನೂ ಕುತರ್ಕ ಮಾಡದವನೂ ದ್ರವ್ಯಾಶೆಯಿಲ್ಲದವನೂ ಆಗಿರಬೇಕು. ಪೂರ್ಣ ಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು ಸ್ವಂತ ಮನೆಯವರನ್ನು ಚೆನ್ನಾಗಿ ಆಳುವವನಾಗಿರಬೇಕು. ಸ್ವಂತ ಮನೆಯವರನ್ನು ಆಳುವದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಂಬರಿಸುವನು? ಅವನು ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು; ಅಂಥವನಾದರೆ ಉಬ್ಬಿಕೊಂಡು ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿಗೆ ಒಳಗಾದಾನು. ಇದಲ್ಲದೆ ಅವನು ಹೊರಗಣವರಿಂದ ಒಳ್ಳೆಯವನೆನಿಸಿಕೊಂಡಿರಬೇಕು; ಇಲ್ಲದಿದ್ದರೆ ನಿಂದಗೆ ಗುರಿಯಾಗುವನು ಮತ್ತು

ಸೈತಾನನ ಉರ್ಲಿನೊಳಗೆ ಸಿಕ್ಕಿಬಿದ್ದಾನು" (1ತಿಮೊಥೆ 3:1–7). ಇದೇ ಅರ್ಹತೆಗಳನ್ನು ತೀತ 1:5–9ರಲ್ಲಿ ಸಹ ಹೇಳಲಾಗಿದೆ. ಆದ್ದರಿಂದ ಸಭೆಯಲ್ಲಿರುವ ಪ್ರತಿಯೊಬ್ಬರು ಹಿರಿಯರಾಗಲಾರರು. ಅರ್ಹತೆಯುಳ್ಳವರು ಸಭೆಯಲ್ಲಿ ನೇಮಿಸಲ್ಪಡಬೇಕು. ಅಂತಹವರು ಒಬ್ಬರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರಬೇಕು. ಯಾವ ಸಭೆಯಲ್ಲಿ ಅವರು ಸದಸ್ಯರಾಗಿರುವರೋ ಆ ಸಭೆಯಲ್ಲಿಯೇ ಅವರು ಹಿರಿಯರಾಗಿ ನೇಮಿಸಲ್ಪಡಬೇಕು. ಅಂತಹವರು ಒಬ್ಬರಿಗಿಂತಲೂ ಹೆಚ್ಚಾಗಿರಬೇಕು. ಯಾವ ಸಭೆಯಲ್ಲಿ ಹಿರಿಯರನ್ನಾಗಿ ನೇಮಿಸಲು ಬೇಕಾದ ಅರ್ಹತೆಯುಳ್ಳವರು ಇಲ್ಲವೋ, ಅಂತಹವರು ಅರ್ಹತೆಯನ್ನು ಹೊಂದಿಕೊಂಡು ಹಿರಿಯರಾಗಿ ನೇಮಿಸಲ್ಪಡುವವರೆಗೂ ಸಭೆಯಲ್ಲಿರುವ ಕೆಲಸಗಳನ್ನು ಅದರಲ್ಲಿರುವ ಪುರುಷರು ಸರಿ ಮಾಡಿಕೊಳ್ಳಬೇಕು.

ಹಿರಿಯರೊಂದಿಗೆ ಕೆಲಸಮಾಡುವುದಕ್ಕೆ ಪರಿಚಾರಕರನ್ನು (ಸಭಾಸೇವಕರನ್ನು) ಸಹ ನೇಮಿಸಲ್ಪಡಬೇಕು. ಅವರು ಸೇವಕರೆಂದು ಕರೆಯಲ್ಪಡುತ್ತಾ ಸ್ಥಳೀಯ ಸಭೆಯ ಹಿರಿಯರ ಮಾರ್ಗದರ್ಶನದಲ್ಲಿ ಕೆಲಸಮಾಡಬೇಕು. ಅವರಿಗೆ ಇರಬೇಕಾದ ಅರ್ಹತೆಗಳನ್ನು ಪೌಲನು ಹೀಗೆ ವಿವರಿಸಿದ್ದಾನೆ "ಅದೇ ರೀತಿಯಾಗಿ ಸಭಾಸೇವಕರು ಗೌರವವುಳ್ಳವರಾಗಿರಬೇಕು. ಅವರು ಎರಡು ಮಾತಿನವರು, ಮದ್ಯನಿರತರು ನೀಚಲಾಭವನ್ನು ಅಪೇಕ್ಷಿಸುವವರೂ ಆಗಿರದೆ ನಂಬಿದವರಿಗೆ ಪ್ರಕಟವಾಗಿರುವ ಸತ್ಯಾರ್ಥವನ್ನು ಶುದ್ಧಮನಸಾಕ್ಷಿಯಿಂದ ಕೈಕೊಳ್ಳುವವರಾಗಿರಬೇಕು. ಇದಲ್ಲದೆ ಅವರು ಮೊದಲು ಪರೀಕ್ಷಿಸಲ್ಪಡಬೇಕು; ತರುವಾಯ ಅವರ ಮೇಲೆ ಯಾರೂ ತಪ್ಪು ಹೊರಿಸದಿದ್ದರೆ ಸಭಾಸೇವಕರ ಉದ್ಯೋಗವನ್ನು ನಡೆಸಲಿ. ಹಾಗೆಯೇ ಸಭಾಸೇವಕಿಯರಾದ ಸ್ತ್ರೀಯರು ಗೌರವವುಳ್ಳವರಾಗಿರಬೇಕು; ಚಾಡಿ ಹೇಳುವವರಾಗಿರದೆ ಮದ್ಯಸಕ್ತಿಯಿಲ್ಲದವರಾಗಿಯೂ ಎಲ್ಲಾ ವಿಷಯಗಳಲ್ಲಿ ನಂಬಿಗಸ್ಥರಾಗಿ ಇರಬೇಕು. ಸಭಾಸೇವಕರು ಏಕಪತ್ನಿಯುಳ್ಳವರೂ ತಮ್ಮ ಮಕ್ಕಳನ್ನೂ ಮನೆಯವರನ್ನೂ ಚೆನ್ನಾಗಿ ಆಳುವವರೂ ಆಗಿರಬೇಕು. ಸಭಾಸೇವಕರಾಗಿ ಚೆನ್ನಾಗಿ ಕೆಲಸ ಮಾಡಿದವರು ತಮಗೆ ಒಳ್ಳೇ ಪದವಿಯನ್ನೂ ಕ್ರಿಸ್ತಯೇಸುವಿನಲ್ಲಿರುವ ನಂಬಿಕೆಯ ಸಂಬಂಧವಾಗಿ ಬಹು ಧೈರ್ಯವನ್ನು ಸಂಪಾದಿಸಿಕೊಳ್ಳುತ್ತಾರೆ" (1ತಿಮೋಥೆ 3:8–13). ಇದು ದೈವಿಕವಾದ ಸಭೆಯ ಪರಿಪಾಲನ ಪದ್ಧತಿ. ಪ್ರತಿ ಸ್ಥಳೀಯ ಸಭೆಯಲ್ಲಿ ಹಿರಿಯರು, ಸೇವಕರು ಇರುವಾಗ ಕ್ರಿಸ್ತನು ಅದಕ್ಕೆ ಶಿರಸ್ಸಾಗಿರುವನು. ಅವರ ಅಧಿಕಾರದ ಕೆಳಗೆಯೇ ಬೋಧಕರು, ಉಪದೇಶಕರು, ಸದಸ್ಯರು ನಡೆದುಕೊಳ್ಳಬೇಕು. ಹೀಗಿರುವಲ್ಲಿ ಯಾವುದಾದರೂ ಸ್ಥಳೀಯ ಸಭೆಯು ಅಸತ್ಯ ಮಾರ್ಗಕ್ಕೆ ತೊಲಗಿ ಹೋಗಿದ್ದರೆ ಉಳಿದ ಸಭೆಗಳು ನಂಬಿಕೆಯಿಂದ

ಇರಬೇಕು. ಒಂದನ್ನು ಬಿಟ್ಟು ಉಳಿದೆಲ್ಲಾ ಸ್ಥಳೀಯ ಸಭೆಗಳು ನಂಬಿಕೆಯಿಂದ ತೊಲಗಿ ಹೋದರೆ, ಆ ಒಂದೇ ಸಭೆ ನಂಬಿಕೆಯಿಂದ ಇರಲು ಸಾಧ್ಯವಾಗುತ್ತದೆ. ಕರ್ತನ ದೃಷ್ಟಿಯಲ್ಲಿ ಪ್ರತಿ ಸ್ಥಳೀಯ ಸಭೆಯು ಸ್ವಯಂ ಪರಿಪಾಲನೆ ಹೊಂದಿದ್ದು ಉಳಿದವುಗಳಿಂದ ಸ್ವತಂತ್ರವಾಗಿರುತ್ತದೆ. ಸ್ಥಳೀಯ ಸಭೆಗಳೆಲ್ಲವೂ ಮನುಷ್ಯ ಕಲ್ಪಿತ ಸಿದ್ಧಾಂತಗಳಿಂದಲ್ಲದೇ ಪ್ರೀತಿಯಿಂದ ಪರಸ್ಪರ ಬಂಧಿಸಲ್ಪಟ್ಟಿವೆ. ಅದ್ದರಿಂದ ಅವು ಒಂದಕ್ಕೊಂದು ಸಹವಾಸವಿದ್ದು, ಒಟ್ಟಾಗಿ ಸೇರಿ ಕೆಲಸಮಾಡುವವು. ಹೇಗೆಂದರೆ ಅವು ಕ್ರಿಸ್ತನಲ್ಲಿ ಐಕ್ಯವಾಗಿವೆ.

ಪೇತ್ರನಾಗಲಿ ಅಥವಾ ಮತ್ತೊಬ್ಬ ಮನುಷ್ಯನಾಗಲಿ ಸಭೆಗೆ ಶಿರಸ್ಸಾಗಿ ನೇಮಿಸಲ್ಪಟ್ಟಿದ್ದೆ ಎಂದು ವಾಕ್ಯದಲ್ಲಿ ನೀನು ಎಲ್ಲೂ ನೋಡುವುದಿಲ್ಲ. ಒಬ್ಬ ಬಿಷಪ್ ಅನೇಕ ಸಭೆಗಳ ಮೇಲೆ ಅಧಿಕಾರ ಹೊಂದಿದವನಂತೆ ಅಥವಾ "ಫಾದರ್" ಸಭೆಯ ನಾಯಕನಾಗಿರುವಂತೆ ನೀನು ವಾಕ್ಯದಲ್ಲಿ ಎಲ್ಲಿಯೂ ಕಾಣುವುದಿಲ್ಲ. ಸಾಮಾನ್ಯ ಸದಸ್ಯರು, ಗುರುಗಳು ಎಂಬ ಭೇದವನ್ನು ನೀನು ಕಾಣುವದಿಲ್ಲ. ಇಂದು ಕ್ರೈಸ್ತವರೆಂದು ಹೇಳಿಕೊಳ್ಳುವ "ಕ್ರೈಸ್ತರ ಲೋಕದಲ್ಲಿ" ದೇವರು ಕೊಟ್ಟ ಸಭೆಯ ಪರಿಪಾಲನೆ ಪದ್ಧತಿ ತೊಲಗಿಹೋಗಿದೆ. ಆದ್ದರಿಂದ ಅವರಲ್ಲಿ ಸಾವಿರಗಟ್ಟಲೇ ವಿಭಾಗಗಳು (ಒಡಕುಗಳು) ಉಂಟಾಗಿವೆ. ಆದದರಿಂದ ಸತ್ಯಸಭೆಯ ಪರಿಪಾಲನಾ ಪದ್ಧತಿ ಅನುಸರಿಸುವುದಕ್ಕೆ ಎಲ್ಲಾ ವಿಷಯಗಳಲ್ಲಿ ಬೈಬಲನ್ನು ಅನುಸರಿಸಿ ನಡೆದುಕೊಳ್ಳುವುದಕ್ಕೆ ನಾವು ನಿಶ್ಚಯಿಸಿಕೊಳ್ಳೋಣ ಆಮೆನ್.

ಪಾಠ – 7

# ಸಭೆಯೊಳಗೆ ಪ್ರವೇಶ
# (Entering the Church)

ಇಲ್ಲಿಯ ವರೆಗೆ ಓದಿದ ವಿಷಯಗಳಲ್ಲಿ ಸಭೆಯ ಪ್ರಾಮುಖ್ಯತೆಯನ್ನು ಗಮನಿಸಿದ್ದೇವೆ. ಅನೇಕ ಸಂಗತಿಗಳಿಂದಾಗಿ ಸಭೆಯು ಪ್ರಾಮುಖ್ಯತೆ ಯುಳ್ಳದ್ದೆಂದು ಅರ್ಥವಾಗುತ್ತದೆ. ಅವುಗಳೆಂದರೆ: ಕ್ರಿಸ್ತನು ಸಭೆಗಾಗಿ ತನ್ನನ್ನು ಒಪ್ಪಿಸಿಕೊಟ್ಟನು (ಎಫೆಸ 5:25), ಆತನು ಅದನ್ನು ತನ್ನ ಸ್ವಂತ ರಕ್ತದಿಂದ ಸಂಪಾದಿಸಿದನು (ಅ.ಕೃ.20:28), ಅದರ ರಕ್ಷಕನು ಕ್ರಿಸ್ತನೆ (ಎಫೆಸ 5:23), ಎಂದು ವಾಕ್ಯವು ಬೋಧಿಸುತ್ತದೆ. ಆದರೆ ಈಗ ಕೆಲವು ಪ್ರಶ್ನೆಗಳು ಉದ್ಭವಿಸಿವೆ: ಪ್ರಾಮುಖ್ಯತೆ ಇಲ್ಲದ್ದಕ್ಕಾಗಿ ಕ್ರಿಸ್ತನು ಮರಣಹೊಂದಿದನಾ? ಬೆಲೆ ಇಲ್ಲದ್ದಕ್ಕಾಗಿ ಆತನು ತನ್ನ ಪ್ರಾಣವನ್ನು ಕೊಟ್ಟನ? ಅದರಲ್ಲಿ ಇಲ್ಲದೆಯೇ ಒಬ್ಬನು ರಕ್ಷಣೆ ಹೊಂದುವುದಾದರೆ, ಅಂತಹ ಸಭೆಗೆ ಆತನು ಹೇಗೆ ರಕ್ಷಕನಾಗುವನು? ಹಾಗೆ ಇಲ್ಲ ಎಂದು ನೀನು ಉತ್ತರ ಕೊಡಬಹುದು. ಅದು ಒಳ್ಳೆಯದೇ, ಆದರೆ ಸಭೆಯು ಪ್ರಾಮುಖ್ಯವಲ್ಲವೆಂದು, ಅದರಲ್ಲಿ ಸದಸ್ಯರಾಗದೆ ರಕ್ಷಣೆಹೊಂದುವೆವೆಂದು ಕೆಲವರು ಹೇಳುತ್ತಿದ್ದಾರೆ. ಹೇಗೆಂದರೆ ಅಂತಹ ಜನರು ಸಭೆಯನ್ನು ಅಪಾರ್ಥ ಮಾಡಿಕೊಂಡಿದ್ದಾರೆ. ಆ ರೀತಿಯಲ್ಲಿ ಆಲೋಚಿಸುವಂತೆ ಅವರು ಮೋಸ ಹೋಗಿದ್ದಾರೆ.

ಸಭೆಯು ರಕ್ಷಿಸುತ್ತದೆ ಎಂದು ಬೈಬಲ್ ಬೋಧಿಸುವುದಿಲ್ಲವಾದರೂ ಒಬ್ಬನು ರಕ್ಷಣೆಹೊಂದಬೇಕಾದರೆ ಕ್ರಿಸ್ತನ ಸಭೆಯಲ್ಲಿ ಇರಬೇಕೆಂದು ಬೋಧಿಸುತ್ತದೆ. ನೋಹನು ನಿರ್ಮಿಸಿದ ನಾವೆ ರಕ್ಷಕನಲ್ಲ, ನೋಹನು, ಆತನ ಕುಟುಂಬವು ಜಲಪ್ರಳಯದಿಂದ ರಕ್ಷಿಸಲ್ಪಡಲು ನಾವೆಯಲ್ಲಿ ಇರಬೇಕಾಗಿಯಿತ್ತು. ಸಭೆಯ ಪರಿಸ್ಥಿತಿ ಸಹ ಅಷ್ಟೆ. ಅಷ್ಟುಮಾತ್ರವೇ ಅಲ್ಲ, ಒಬ್ಬನು ರಕ್ಷಣೆಹೊಂದಿದಾಗ ಆತನನ್ನು ಕರ್ತನು ತನ್ನ ಸಭೆಯಲ್ಲಿ ಸೇರಿಸುತ್ತಾನೆ (ಅ.ಕೃ.2:47). ಆದ್ದರಿಂದ ಒಬ್ಬನು ರಕ್ಷಣೆಹೊಂದಿದವನಾದರೆ ಅವನು ಕ್ರಿಸ್ತನ ಸಭೆಯ ಸದಸ್ಯನಾಗಿರುವನು. ಸದಸ್ಯನಾಗಿರದಿದ್ದರೆ ಅವನು ರಕ್ಷಣೆಹೊಂದಿಲ್ಲ. ಇದು ಬಹಳ ಸುಲಭವಾದ್ದದು. ಮತಶಾಖೆಯಲ್ಲಿ, ಮನುಷ್ಯ ಕಲ್ಪಿತ ಸಂಸ್ಥೆಗಳಲ್ಲಿ ಸದಸ್ಯನಾಗದಿದ್ದರೆ ಒಬ್ಬನು ರಕ್ಷಣೆಹೊಂದಬಹುದು. ಆದರೆ ಕ್ರಿಸ್ತನ ಸಭೆಯ ಸದಸ್ಯನಾಗದಿದ್ದರೆ ಮಾತ್ರ ರಕ್ಷಣೆಹೊಂದುವದು ಅಸಾಧ್ಯ.

ಮತ್ತೊಂದು ಸಂಗತಿ ಏನೆಂದರೆ ಕ್ರಿಸ್ತನ ಸಭೆಯಲ್ಲಿ ಒಬ್ಬನು ತನಗೆ ತಾನೇ ಸೇರುವುದಿಲ್ಲ; ಆದರೆ ರಕ್ಷಣೆಹೊಂದುತ್ತಿರುವವರನ್ನು ಕರ್ತನು ತನ್ನ ಸಭೆಯಲ್ಲಿಗೆ

ಸೇರಿಸುವನು. ಆತನು ರಕ್ಷಣೆ ಹೊಂದಿದವರನ್ನು ಮಾತ್ರವೇ ಸಭೆಯಲ್ಲಿ ಸೇರಿಸಿಕೊಳ್ಳುವನು. ಆದ್ದರಿಂದ ಸಭೆಯಲ್ಲಿ ರಕ್ಷಣೆ ಹೊಂದಿದವರು ಇರುವರು. ಒಬ್ಬನ ನಂಬಿಕೆ, ವಿಧೇಯತೆ ನಿಜವೋ ಅಲ್ಲವೋ, ಮನಃಪೂರ್ವಕವಾದದ್ದು ಹೌದು ಅಥವಾ ಅಲ್ಲವೋ ಎಂದು ಯೇಸು ಕ್ರಿಸ್ತನು ಅಂತರಂಗವನ್ನು ಪರಿಶೋಧಿಸುವನು. ಒಬ್ಬನು ಒಳ್ಳೇ ಮನಸ್ಸುಳ್ಳವನಾಗಿ ವಿಧೇಯನಾದರೆ ಕರ್ತನು ಅವನನ್ನು ಸಭೆಯಲ್ಲಿಗೆ ಸೇರಿಸಿಕೊಳ್ಳುವನು. ಇಲ್ಲವಾದರೆ ಅವನು ಬಾಹ್ಯಕ್ರಿಯೆಗಳಿಗೆ ವಿಧೇಯತೆ ತೋರಿಸಿದಂತಾಗುತ್ತದೆ, ಅವನು ಕರ್ತನಿಂದ ಸಭೆಯಲ್ಲಿಗೆ ಸೇರುವುದಿಲ್ಲ. ಒಬ್ಬನು ತನಗೆ ತಾನೆ ಸಭೆಯಲ್ಲಿಗೆ ಸೇರಿದರೆ ಮನುಷ್ಯರ ಅಂತರಂಗ ಭಾವಗಳು ಹೇಗಿದ್ದರೂ ಎಲ್ಲರೂ ಅದರಲ್ಲಿ ಪ್ರವೇಶಿಸಬಹುದು. ಆದ್ದರಿಂದ ಒಬ್ಬನನ್ನು ಸಭೆಯಲ್ಲಿ ಸೇರಿಸುವ ಭಾರವನ್ನು ಕ್ರಿಸ್ತನು ಹೊಂದಿದ್ದಾನೆ. ರಕ್ಷಣೆ ಹೊಂದುವವರು ಯಾರು? ಕೇವಲ ಬಾಹ್ಯಕ್ರಿಯುಗಳನ್ನು ಮಾಡುವವರು ಯಾರು? ಎಂದು ಆತನು ತಿಳಿದವನಾಗಿರುವುದರಿಂದ ಆತನು ತಪ್ಪು ಮಾಡುವುದಿಲ್ಲ.

ಸಭೆಗೆ ರಕ್ಷಕನು ಕ್ರಿಸ್ತನೇ; ಆತನೇ ರಕ್ಷಣೆಹೊಂದಿದವರನ್ನು ಅದರಲ್ಲಿ ಸೇರಿಸುವವನು ಆತನೇ, ಅದ್ದರಿಂದ ಆತನ ಸಭೆಯಲ್ಲಿ ಸೇರುವದಕ್ಕೆ ಏನು ಮಾಡಬೇಕೆಂದು ಆತನು ಕೋರುತ್ತಿದ್ದಾನೆ ಎಂದು ತಿಳಿದುಕೊಳ್ಳುವುದು ಸಹಜವಾಗಿ ಒಳ್ಳೆಯದು. ದೇವರ ವಾಕ್ಯದಲ್ಲಿ ಇದು ಬಹಳ ವಿವರವಾಗಿ ಬರೆದದೆ. ಪೊಸ್ತಲರ ಕೃತ್ಯಗಳು ಎಂಬ ಪುಸ್ತಕದಲ್ಲಿ ಇರುವ ಅನೇಕ ಮಾನಸಾಂತರ ಹೊಂದಿದ ಸಂಧರ್ಭಗಳಲ್ಲಿ ಇದು ವಿವರಿಸಲ್ಪಟ್ಟಿದೆ. ಆದ್ದರಿಂದ ಕರ್ತನ ಸಭೆಯಲ್ಲಿ ಸೇರುವುದಕ್ಕೆ ಇರುವ ಮೆಟ್ಟಿಲುಗಳನ್ನು ಜಾಗ್ರತೆಯಿಂದ ಪರಿಶೀಲಿಸೋಣ:

**1. ಒಬ್ಬನು ಸತ್ಯವನ್ನು ಕೇಳಬೇಕು :**

> "ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" (ರೋಮಾ 10:17).

**2. ಅವನು ದೇವರಲ್ಲಿಯೂ, ಕ್ರಿಸ್ತನನಲ್ಲಿಯೂ ನಂಬಿಕೆ ಇಡಬೇಕು :**

> "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ಆತನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ" (ಇಬ್ರಿಯ 11:6). "ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ" (ಯೋಹಾನ 14:1) ಎಂದು ಯೇಸು ಹೇಳಿದ್ದಾನೆ.

**3. ಅವನು ತನ್ನ ಪಾಪಗಳ ವಿಷಯದಲ್ಲಿ ದೇವರ ಕಡೆಗೆ ತಿರುಗಿಕೊಳ್ಳಬೇಕು :**

"ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ಲೂಕ 13:3).

**4. ಅವನು ಯೇಸು ಕ್ರಿಸ್ತನನ್ನು ದೇವರ ಮಗನೆಂದು ಒಪ್ಪಿಕೊಳ್ಳಬೇಕು :**

"ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು" (ಮತ್ತಾಯ 10:32) ಎಂದು ಯೇಸು ಹೇಳಿದ್ದಾನೆ.

**5. ಪಾಪಗಳ ಕ್ಷಮಾಪಣೆಗಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು :**

ಈ ದೀಕ್ಷಾಸ್ನಾನವು ಒಂದು ನೀರಿನ ಸಮಾಧಿ (ರೋಮಾ 6:3,4; ಅ.ಕೃ.8:36–39). "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16). "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ಅ.ಕೃ.2:38).

ಈ ಸಂಚಿಕೆಯಲ್ಲಿ ನಾವು ಮೊದಲು ಏನನ್ನು ಕಲಿತುಕೊಂಡೆವು? ರಕ್ಷಣೆ ಹೊಂದಿದವರನ್ನು ಕರ್ತನು ತನ್ನ ಸಭೆಯಲ್ಲಿ ಸೇರಿಸುವನು ಎಂದು. ಅಂದರೆ ಒಬ್ಬನು ಕರ್ತನಿಗೆ ವಿಧೇಯನಾಗಿ ರಕ್ಷಣೆಹೊಂದಿದಾಗ ಅವನು ತಕ್ಷಣವೇ ಸಭೆಯಲ್ಲಿ ಸೇರಿಸಲ್ಪಡುವನು. ಒಬ್ಬನು ಸತ್ಯವನ್ನು ಕೇಳಿ, ನಂಬಿಕೆ ಇಟ್ಟು, ಮಾನಸಾಂತರಹೊಂದಿ, ಕ್ರಿಸ್ತನನ್ನು ಒಪ್ಪಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅವನು ರಕ್ಷಣೆ ಹೊಂದುವನೆಂದು ಗಮನಿಸಿದೆವು. ಒಬ್ಬ ವ್ಯಕ್ತಿ ಈ ಕ್ರಿಯೆಗಳನ್ನು ಮಾಡಿದಾಗ ಅವನು ಸಭೆಯಲ್ಲಿ ಸೇರಿಸಲ್ಪಡುವನು. ಕರ್ತನ ಆಜ್ಞೆಗಳಿಗೆ ನಾವು ವಿಧೇಯತೆ ತೋರಿಸುವುದರ ಮೂಲಕ ನಾವು ರಕ್ಷಣೆಹೊಂದಿದಾಗ ನಮ್ಮನ್ನು ಆತನೇ ತನ್ನ ಸಭೆಯಲ್ಲಿ ಸೇರಿಸುವನು. ಇದು ಸುಲಭ ಅಲ್ವಾ.?

ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಒಬ್ಬನು ಆತ್ಮದಿಂದಲೂ, ನೀರಿನಿಂದಲೂ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಸೇರುವುದಿಲ್ಲ. ಎಂದು ಯೇಸು ಹೇಳಿದ್ದಾನೆ (ಯೋಹಾನ 3:3–5). ಹಾಗಾದರೆ ದೇವರ ರಾಜ್ಯ ಅಂದರೆ

ಏನು? ಅದೇ ಕ್ರಿಸ್ತನ ಸಭೆ (ಮತ್ತಾಯ 16:18,19). ಸಭೆಯಲ್ಲಿ ಸೇರಲಿಕ್ಕೆ ಕರ್ತನು ಎರಡು ಮಾರ್ಗಗಳನ್ನು ಇಟ್ಟಿರುವನಾ? ಎಂದಿಗೂ ಇಲ್ಲ. ಅದ್ದರಿಂದ ಒಬ್ಬನು ನಂಬಿ ದೀಕ್ಷಾಸ್ನಾನ ಹೊಂದಿದಾಗ (ವಾಕ್ಯದಿಂದ ಆತ್ಮೀಯ ರೀತಿಯಲ್ಲಿ ಹುಟ್ಟಿ, ಆ ಬೋಧನೆಗೆ ಒಳಗಾಗಬೇಕು) ಅವನು ದೇವರ ರಾಜ್ಯದೊಳಗೆ ಅಥವಾ ದೇವರ ಕುಟುಂಬದೊಳಗೆ ಅಥವಾ ಕರ್ತನ ಸಭೆಯಲ್ಲಿ ಹುಟ್ಟಿದವನಾಗಿರುವನು.

ಮತ್ತೇ ನಾವು ಒಂದೇ ದೇಹವಾಗುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ ಎಂದು ಪೌಲನು ಹೇಳಿದ್ದಾನೆ (1ಕೊರಿಂಥ 12:13). ಹಾಗಾದರೆ ದೇಹವೆಂದರೇನು? ಅದೇ ಸಭೆ (ಕೊಲೊಸ್ಸೆ 1:18). ಹಾಗದಾರೆ ಅವು ಎಷ್ಟು ಇವೆ? ಒಂದೇ ಒಂದು (ಎಫೆಸ 4:4; 1:22,23). ಒಬ್ಬನು ಅದರಲ್ಲಿ ಹೇಗೆ ಪ್ರವೇಶಿಸುವನು? ದೀಕ್ಷಾಸ್ನಾನ ಮಾಡಿಸಿಕೊಳ್ಳುವದರ ಮೂಲಕ. ಆದರೆ ಒಬ್ಬನು ರಕ್ಷಣೆ ಹೊಂದಬೇಕಾದರೆ ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಯೇಸು ಹೇಳಿದ್ದಾನೆ (ಮಾರ್ಕ 16:16). ಕೊರಿಂಥದಲ್ಲಿರುವವರು ಅದನ್ನೇ ಮಾಡಿದರು (ಅ.ಕೃ.18:8). ಆದ್ದರಿಂದ ಒಬ್ಬನು ಸಭೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅವನು ಅದರಲ್ಲಿ ಒಂದು ಭಾಗವಾಗುವನು ಅಥವಾ ಸೇರಿಸಲ್ಪಡುವನು.

ನಾವು ಇಲ್ಲಿಯವರೆಗೆ ನೋಡಿದ ಪ್ರಕಾರ ಒಬ್ಬನು ರಕ್ಷಣೆ ಹೊಂದಲು ಒಂದೇ ಒಂದು ಮಾರ್ಗವಿದೆ. ರಕ್ಷಣೆ ಹೊಂದಿದವರನ್ನು ಕರ್ತನು ತನ್ನ ಸಭೆಯಲ್ಲಿ ಸೇರಿಸುವನು. ನೀನು ಬೈಬಲ್‌ನಲ್ಲಿರುವ ಸಭೆಯ ಸದಸ್ಯನಾಗಿರುವೆಯಾ? ಇಲ್ಲಾವಾದರೆ ನೀನು ರಕ್ಷಣೆ ಹೊಂದಿಲ್ಲ. ಬೈಬಲನ್ನು ಪರಿಶೋಧಿಸಿ, ಧ್ಯಾನಿಸಿ ಕರ್ತನಿಗೆ ವಿಧೇಯನಾಗು ಆಗಲೇ ಆತನು ನಿನ್ನನ್ನು ತನ್ನ ಸಭೆಯಲ್ಲಿ ಸೇರಿಸುವನು.

## ಪಾಠ – 8
# ಸಭೆಯ ಆರಾಧನೆ
# (Worship of the Church)

ಸಭೆಯು ರಕ್ಷಣೆ ಹೊಂದಿದವರ ಸಮೂಹವಾಗಿದೆ. ಯೇಸು ಕ್ರಿಸ್ತನ ಮೂಲಕ ದೇವರನ್ನು ಸೇವಿಸಿ ಆರಾಧಿಸುವುದೇ ಅದರ ಪ್ರಮುಖ ಉದ್ದೇಶವಾಗಿದೆ. ಪೌಲನು ಹೀಗೆ ಹೇಳಿದ್ದಾನೆ "ನೀವು ನುಡಿಯಿಂದಾಗಲಿ, ನಡೆಯಿಂದಾಗಲಿ ಏನು ಮಾಡಿದರು ಅದೆಲ್ಲವನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ" (ಕೊಲೊಸ್ಸೆ 3;17).

ಹೊಸ ಒಡಂಬಡಿಕೆಯಲ್ಲಿ ಮೂರು ವಿಧವಾದ ಆರಾಧನೆ ಕಾಣಿಸುತ್ತವೆ. ಮೊದಲನೆಯದು **'ತಿಳಿಯದ ಆರಾಧನೆ'** ಪೌಲನು ಅಥೇನೆ ಪಟ್ಟಣದಲ್ಲಿರುವ ಅನೇಕ ವಿಗ್ರಹಗಳನ್ನು ನೋಡಿ ಹೀಗೆ ಹೇಳಿದ್ದಾನೆ "ಅಥೇನೆಯ ಜನರೇ, ನೀವು ಎಲ್ಲಾದರಲ್ಲೂ ಅತಿ ಭಕ್ತಿವಂತರೆಂದು ನನಗೆ ತೋರುತ್ತದೆ. ನಾನು ನಿಮ್ಮ ಪಟ್ಟಣದಲ್ಲಿ ತಿರುಗಾಡುತ್ತಾ ನೀವು ಪೂಜಿಸುವ ದೇವತಾ ಪ್ರತಿಮೆಗಳನ್ನು ಚೆನ್ನಾಗಿ ನೋಡುತ್ತಾ ಇದ್ದಾಗ ಒಂದು ಬಲಿಪೀಠವು ನನ್ನ ಕಣ್ಣಿಗೆ ಬಿತ್ತು; ಅದರ ಮೇಲೆ ತಿಳಿಯದ ದೇವರಿಗೆ ಎಂದು ಬರೆದಿತ್ತು. ಆದಕಾರಣ ನೀವು ಯಾವುದನ್ನು ತಿಳಿಯದೆ ಪೂಜಿಸುತ್ತೀರೋ ಅದನ್ನೇ ನಿಮಗೆ ತಿಳಿಯಪಡಿಸುತ್ತೇನೆ" (ಅ.ಕೃ.17:23). ತಿಳಿಯದ ದೇವರಿಗೆ ಆರಾಧನೆ ಮಾಡುವವರು ಅಂದು, ಇಂದು ಸಹ ಕೆಲವರು ಇದ್ದಾರೆ. ಲಕ್ಷಗಟ್ಟಲೇ ಜನರು ವಿಗ್ರಹಗಳಿಗೆ, ಮೂರ್ತಿಗಳಿಗೆ ನಮಸ್ಕರಿಸುವುದು ಮಾತ್ರವಲ್ಲದೇ ಸಾವಿರಗಟ್ಟಲೇ ಜನರು ವಾಕ್ಯಗಳನ್ನು ತಿಳಿಯದೆ ಅನೇಕ ಮತ ಸಂಪ್ರದಾಯ ಪದ್ಧತಿಗಳನ್ನು ಮಾಡುವವರಿದ್ದಾರೆ.

ಎರಡನೆಯದು, **'ವ್ಯರ್ಥ ಆರಾಧನೆ'** ಯನ್ನು ಕುರಿತು ಬೈಬಲ್ ಬೋಧಿಸುತ್ತದೆ. "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬದೇ" (ಮತ್ತಾಯ 15:9) ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ. ಪ್ರಜೆಗಳಲ್ಲಿ ಅನೇಕರು ಇಂದು ದೇವರನ್ನು ವ್ಯರ್ಥವಾಗಿ ಆರಾಧಿಸುತ್ತಿದ್ದಾರೆ. ಅವರು ಕರ್ತನನ್ನೇ ಆರಾಧಿಸುವರು ಎಂಬ ಮಾತು ಸತ್ಯವಾಗಿದ್ದರು, ಅವರ ಆರಾಧನೆ ದೇವರ ಚಿತ್ತಾನುಸಾರವಾಗಿ ಇಲ್ಲವಾದ್ದರಿಂದ, ಮನುಷ್ಯ ಕಲ್ಪಿತ ಸಿದ್ಧಾಂತಗಳ ಅನುಗುಣವಾಗಿ ಬೋಧಿಸುವದು, ಅದರ ಪ್ರಕಾರ ಮಾಡುವುದೆಲ್ಲಾ ವ್ಯರ್ಥ. ಅಂತಹುದರ ಪ್ರಯೋಜನ ಕೇವಲ ಶೂನ್ಯ.

ಮೂರನೆಯದು **'ಸತ್ಯ ಆರಾಧನೆಯನ್ನು'** ಕುರಿತು ಬೈಬಲ್ ಹೇಳುತ್ತದೆ. ಅದು

ಆತ್ಮದಿಂದಲೂ, ಸತ್ಯದಿಂದಲೂ ಮಾಡುವಂತದ್ದು. "ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ, ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು" (ಯೋಹಾನ 4:24) ಎಂದು ಯೇಸು ಹೇಳಿದ್ದಾನೆ. ದೇವರು ಅಂಗೀಕರಿಸುವ ಆರಾಧನೆ ಇಂತಹದ್ದು ಮಾತ್ರವೇ. ಆತ್ಮದಿಂದ ದೇವರ ಕಡೆಗೆ ನಡೆಸುವ ಆರಾಧನೆ ಇದು. ವಿನಯದಿಂದಲೂ, ಭಕ್ತಿಭಾವದಿಂದಲೂ ಸತ್ಯವಾಕ್ಯವನ್ನು ಅನುಸರಿಸಿ ಮಾಡುವ ಆರಾಧನೆ ಇದು. ಆರಾಧನೆ ಮಾಡಬೇಕೆಂದು ದೇವರು ಯಾರನ್ನೂ ಬಲವಂತ ಮಾಡುವದಿಲ್ಲ. ಆದರೆ ಆತನನ್ನು ಆರಾಧಿಸುವವರು ಆತನು ಕೋರುವ ರೀತಿಯಲ್ಲಿ ಆರಾಧಿಸಬೇಕೆಂದು ಅಪೇಕ್ಷಿಸುತ್ತಿದ್ದಾನೆ.

ಕ್ರಿಸ್ತನ ಸಭೆಯು ಎಂತಹ ಆರಾಧನೆ ಮಾಡಬೇಕು? ಅದು ತಿಳಿಯದ ಆರಾಧನೆ? ಅಲ್ಲವೇ ಅಲ್ಲ. ಮನುಷ್ಯ ಕಲ್ಪಿತ ಬೋಧನೆಗಳನ್ನು ಅನುಸರಿಸುವ ಆರಾಧನೆ? ಖಂಡಿತ ಅಲ್ಲ. ಆದರೆ ಅದು ಆತ್ಮದಿಂದಲೂ, ಸತ್ಯದಿಂದಲೂ ಇದ್ದು ದೇವರು ಅಂಗೀಕರಿಸುವಂತಹದ್ದು. ನಾವು ಹೊಸ ಒಡಂಬಡಿಕೆಯನ್ನು ಓದುತ್ತಿರುವಾಗ ಅದರಲ್ಲಿರುವ ಆಜ್ಞೆಗಳ ಪ್ರಕಾರ, ಮಾದರಿಯ ಪ್ರಕಾರ, ಪ್ರಾರಂಭದ ಕ್ರೈಸ್ತರು ಈ ಕೆಳಗಿನ 5 ಅಂಶಗಳನ್ನು ಆರಾಧನೆಯಲ್ಲಿ ಮಾಡಿದರೆಂದು ನಾವು ಕಾಣುತ್ತೇವೆ.

**1.ವಾಕ್ಯವನ್ನು ಓದುವುದಕ್ಕೆ ಅವರು ಸೇರಿಬಂದಿದ್ದರು :**

ದೇವರ ವಾಕ್ಯಗಳನ್ನು ತಿಮೊಥೆಯನು ಮೊದಲಿನಿಂದಲೂ ಕೇಳಿದನು "ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು" (2ತಿಮೊಥೆ 2:15) ಎಂದು ಪೌಲನು ತಿಮೊಥೆಯನ್ನು ಎಚ್ಚರಿಸುತ್ತಾನೆ. ಇದು ಎಲ್ಲಾ ಕ್ರೈಸ್ತರಿಗೂ ಮುಖ್ಯವಾಗಿ ಆರಾಧನೆಗೆ ಸೇರಿಬಂದವರಿಗೆ ಅನ್ವಯಿಸುತ್ತದೆ. ವಾಕ್ಯದ ಮೂಲಕ ದೇವರು ತನ್ನ ಮಕ್ಕಳೊಂದಿಗೆ ಮಾತನಾಡುವ ಸಮಯವಿದು. ಅಪೊಸ್ತಲರ ಕೃತ್ಯಗಳು 20:7ರಲ್ಲಿ ಸಭೆಯವರಿಗೆ ಪೌಲನು ಪ್ರಸಂಗ ಮಾಡುವದರ ಮೂಲಕ ವಾಕ್ಯವನ್ನು ಬೋಧಿಸಿದಂತೆ ನಾವು ಗ್ರಹಿಸಬಹುದು.

**2.ಅವರು ಪ್ರಾರ್ಥನೆ ಮಾಡಿದರು :**

ಪಂಚಾಶತ್ತಮ ದಿನದಂದು ಸುವಾರ್ತೆಗೆ ಒಳಗಾದವರು "ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿಮುರಿಯುವುದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅ.ಕೃ.2:42). ಪ್ರಾರ್ಥನೆಯ ಮೂಲಕ ದೇವರ ಮಕ್ಕಳು ಪರಲೋಕದಲ್ಲಿರುವ

ತಂದೆಯೊಂದಿಗೆ ಮಾತನಾಡುವ ಅವಕಾಶ ದೊರೆಯುತ್ತದೆ. ಕ್ರೈಸ್ತರು ಆರಾಧನೆಗೆ ಕೂಡಿಬಂದಾಗ ಪ್ರಾರ್ಥನೆ ಇಲ್ಲದೆಯೇ ಅಥವಾ ಮಾಡದೆಯೇ ಏನನ್ನು ಮಾಡುವುದಿಲ್ಲ.

**3.ಅವರು ಕೀರ್ತನೆಗಳನ್ನು ಹಾಡಿದರು :**

ಪೌಲನು ತನ್ನ ಸಹೋದರರಿಗೆ ಹೀಗೆ ಬರೆದನು "ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ..." (ಎಫೆಸ 5:19). ಮತ್ತು ಕೊಲೊಸ್ಸೆ 3:16, ಇಬ್ರಿಯ 13:15 ಗಳನ್ನು ಓದು. ಸಂಗೀತದಲ್ಲಿ ಎರಡು ವಿಧ ಇದೆ. ಒಂದು ಗಾತ್ರ ಸಂಗೀತ, ಮತ್ತೊಂದು ವಾದ್ಯ ಸಂಗೀತ. ಆದರೆ ದೇವರು ಕೋರುವ ಸಂಗೀತ ಯಾವುದು? ನಾವು ಹೃದಯಲ್ಲಿ ಕರ್ತನಿಗೆ ಗಾನ ಮಾಡಬೇಕೆಂದು ವಾಕ್ಯವು ಹೇಳುತ್ತದೆ. ಆದ್ದರಿಂದ ವಾದ್ಯ ಸಂಗೀತವನ್ನು ಪ್ರಾರಂಭದ ಕ್ರೈಸ್ತರು ಉಪಯೋಗಿಸಿಲ್ಲ, ಅವರು ಕೇವಲ ತಮ್ಮ ಬಾಯಿಂದ ದೇವರಿಗೆ ಸ್ತುತಿಗಾನ ಮಾಡಿದರು. ಅನೇಕ ಶತಮಾನಗಳ ನಂತರ ಮನುಷ್ಯರು ಆರಾಧನೆಯಲ್ಲಿ ವಾದ್ಯಗಳನ್ನು ಉಪಯೋಗಿಸುವುದನ್ನು ಪ್ರಾರಂಭಿಸಿದರು. ಇದನ್ನು ದೇವರು ಏರ್ಪಡಿಸಿಲ್ಲ. ದೇವರು ಅದನ್ನು ಅಂಗೀಕರಿಸುವದಿಲ್ಲ. ಕ್ರೈಸ್ತರು ವಾದ್ಯ ಸಂಗೀತದಿಂದ ಆರಾಧನೆ ಮಾಡಿ ದೇವರನ್ನು ಸ್ತುತಿಸಲಿಲ್ಲ.

**4.ಅವರು ಕರ್ತನ ಭೋಜನದಲ್ಲಿ ಪಾಲುಗಾರರಾಗಲು ಕೂಡಿಬಂದಿದ್ದರು :**

ಅ.ಕೃ.20:7ರಲ್ಲಿ ಇದರ ಮಾದರಿ ನಮಗೆ ಕಾಣುತ್ತದೆ. ಮತ್ತಾಯ 26:26–28; 1ಕೊರಿಂಥ 11ನೇ ಅಧ್ಯಾಯದಲ್ಲಿ ರೊಟ್ಟಿಯನ್ನು ಯೇಸು ಕ್ರಿಸ್ತನ ದೇಹಕ್ಕೆ ಸಾದೃಶ್ಯವಾಗಿಯೂ, ದ್ರಾಕ್ಷಾರಸವು ಆತನ ರಕ್ತಕ್ಕೆ ಸಾದೃಶ್ಯವಾಗಿಯೂ ಮಾಡಬೇಕೆಂದು ಬರೆಯಲ್ಪಟ್ಟಿದೆ. ಇಂದು ನಾವು ಸಹ ಇದನ್ನು ಹೀಗೆ ಮಾಡಬೇಕು.

**5.ಅವರು ಕಾಣಿಕೆಗಳನ್ನು ಕೊಟ್ಟರು :**

ಗಲಾತ್ಯದಲ್ಲಿಯೂ, ಕೊರಿಂಥದಲ್ಲಿಯೂ ಇರುವ ಸಹೋದರರಿಗೆ ಪೌಲನು ಹೀಗೆ ಬರೆದನು "ನಾನು ಬಂದಾಗ ಹಣ ವಸೂಲು ಮಾಡಬೇಕಾದ ಅವಶ್ಯವಾಗದಂತೆ ನಿಮ್ಮಲ್ಲಿ ಪ್ರತಿಯೊಬ್ಬನು ತನಗೆ ಬಂದ ಸಂಪಾದನೆಯ ಮೇರೆಗೆ ವಾರವಾರದ ಮೊದಲನೆಯ ದಿನದಲ್ಲಿ ಗಂಟುಮಾಡಿ ತನ್ನ

ಮನೆಯಲ್ಲಿಟ್ಟುಕೊಂಡಿರಬೇಕು" (1ಕೊರಿಂಥ 16:2). 2ಕೊರಿಂಥ 9:7ನ್ನು ಸಹ ಓದು.

ಪ್ರಾರಂಭದ ಕ್ರೈಸ್ತರು ದೇವರನ್ನು ಆರಾಧಿಸುವುದಕ್ಕೆ ವಾರದ ಮೊದಲನೆಯ ದಿನದಲ್ಲಿ ಕೂಡಿಬಂದಿದ್ದರು (ಅ.ಕೃ.20:7; 1ಕೊರಿಂಥ 16:2). "ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಡಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ" (ಇಬ್ರಿಯ 10:25). ಇಂದಿನ ಕ್ರೈಸ್ತರು ಸಹ ವಾರದ ಮೊದಲನೆಯ ದಿನ ಅಂದರೆ ಭಾನುವಾರದ ದಿನದಂದು ಆರಾಧನೆ ಮಾಡಬೇಕು ಆದ್ದರಿಂದ ಈ ಎಚ್ಚರಿಕೆ ಇಂದಿನ ಕ್ರೈಸ್ತರಾದ ನಮಗೂ ಅನ್ವಯಿಸುತ್ತದೆ.

ಸಭೆಯ ಆರಾಧನೆ ಬಹಳ ಸುಲಭವಾದದ್ದು, ಸೂಕ್ಷ್ಮವಾದದ್ದು. ಆದುದರಿಂದ ಅನೇಕರು ಪೂಜೆಗಳಿಂದಲೂ, ಪುನಸ್ಕಾರಗಳಿಂದಲೂ, ಮನುಷ್ಯ ಕಲ್ಪಿತ ಆಚರಣೆಗಳಿಂದಲೂ, ಆಡಂಬರದಿಂದಲೂ ಇರಬೇಕೆಂದು ಆಲೋಚಿಸಿಕೊಳ್ಳುತ್ತಾರೆ. ಆದರೆ ಅದು ಹೀಗೆ ಇಲ್ಲ. ಆರಾಧನೆಯನ್ನು ಕುರಿತು ದೇವರು ತನ್ನ ಚಿತ್ತವನ್ನು ತನ್ನ ಗ್ರಂಥದ ಮೂಲಕ ನಮಗೆ ತಿಳಿಸಿದ್ದಾನೆ. ಅದನ್ನು ನಾವು ಸ್ವಲ್ಪವಾದರೂ ಬದಲಾಯಿಸುವುದಕ್ಕೆ ಮಾನವನಿಗೆ ಅಧಿಕಾರವಿಲ್ಲ. ದೇವರ ಶಾಪಕ್ಕೆ ಗುರಿಯಾಗದಂತೆ ಅದಕ್ಕೆ ಸೇರಿಸುವುದಾಗಲಿ, ಅದರಿಂದ ತೆಗೆದು ಹಾಕುವುದಾಗಲಿ ಮಾಡಬಾರದು. ದೇವರು ಹೇಳಿರಿವುದರಿಂದ ಆತನ ಜನರು ಆತನಿಗೆ ವಿಧೇಯರಾಗಬೇಕು ಆಗ ಮಾತ್ರವೇ ನಾವು ದೇವರನ್ನು ಸ್ತುತಿಸಿ, ಮಹಿಮೆಪಡಿಸಿ ಆರಾಧಿಸಬಹುದು.

# ಪಾಠ – 9
# ಸಭೆಯ ಕೆಲಸ
# (Work of the Church)

ಸಭೆ ಯಾಕೆ ಸ್ಥಾಪಿಸಲ್ಪಟ್ಟದೆ? ಅದರ ಪ್ರಯೋಜನವೇನು? ಅದರ ಕೆಲಸವೇನು? ಇವುಗಳನ್ನು ತಿಳಿದುಕೊಳ್ಳುವುದಕ್ಕೆ ನಾವು ದೇವರ ವಾಕ್ಯದ ಬಳಿಗೆ ಹೊಗೋಣ.

ಸಭೆಯು ಈ ಲೋಕ ಸಂಬಂಧವಾದ ವ್ಯಾಪಾರದಲ್ಲಿ ಇಲ್ಲವೆಂದು ಗಮನಿಸು. ಆಸ್ಪತ್ರೆಗಳನ್ನು, ಪಾಠ ಶಾಲೆಗಳನ್ನು ನಡೆಸುವುದು ಅದರ ಕೆಲಸವಲ್ಲ. ಧನಾಪೇಕ್ಷೆಗಾಗಿ ಪುಸ್ತಕಗಳನ್ನು ಮಾರುವುದಕ್ಕೆ ವ್ಯಾಪಾರ ಮಾಡುವುದು ಅಲ್ಲ. ಆ ಕೆಲಸಗಳೆಲ್ಲ ಒಳ್ಳೆಯವೆ. ಕ್ರೈಸ್ತರು ವ್ಯಕ್ತಿಗತವಾಗಿ ಇವುಗಳನ್ನು ನಡೆಸುವ ಹಕ್ಕನ್ನು ಹೊಂದಿದ್ದರು, ಅವು ಮಾತ್ರ ಸಭೆಯ ಕೆಲಸವಲ್ಲ. ಇಂದಿನ ಕ್ರೈಸವ್ತ ಲೋಕ ಮೇಲೆ ಹೇಳಿದ ಕೆಲಸಗಳ ಮೇಲೆ ಹೆಚ್ಚಾಗಿ ಕೇಂದ್ರಿಕೃತವಾಗಿದ್ದು ದೇವರಿಂದಲೂ, ಬೈಬಲಿನಿಂದಲೂ, ಆತನ ಕಾರ್ಯಕ್ರಮಗಳಿಂದಲೂ ಮತ್ತಷ್ಟು ದೂರವಾಗಿದೆ.

ನಾವು ದೈವಗ್ರಂಥದ ಪುಟಗಳನ್ನು ತಿರುಗಿಸಿ ನೋಡಿದರೆ ಸಭೆಯ ಕೆಲಸ ಮೂರು ರೀತಿಯಲ್ಲಿ ಇದೆ ಎಂದು ಕಾಣಿಸುತ್ತದೆ. ಸುವಾರ್ತೆ ಪ್ರಕಟಿಸುವದು, ಕೊರೆತೆಯಲ್ಲಿರುವವರಿಗೆ (ಕಷ್ಟದಲ್ಲಿ) ಸಹಾಯ ಮಾಡುವುದು, ಸಭೆಯ ಅಭಿವೃದ್ಧಿ ಮಾಡುವುದು. ಇವುಗಳಲ್ಲಿ ಒಂದೊಂದಾಗಿ ಈಗ ನೊಡೋಣ.

**1.ಸುವಾರ್ತೆ ಪ್ರಕಟಿಸುವುದು :**

ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು ತಿರುಗಿ ಪರಲೋಕಕ್ಕೆ ಆರೋಹಣವಾಗುವುದಕ್ಕೆ ಮೊದಲು ತನ್ನ ಶಿಷ್ಯರಿಗೆ ಹೀಗೆ ಬೋಧಿಸಿದನು "ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ , ಮಗನ ಪವಿತ್ರತ್ಮಾನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು (ಮತ್ತಾಯ 28:19,20).

"ಆ ಮೇಲೆ ಅವರಿಗೆ ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು

ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16). ನಂತರ ಯೌವನಸ್ಥ ಬೋಧಕನಾದ ತಿಮೊಥೆಗೆ ಪೌಲನು ಹೀಗೆ ಎಚ್ಚರಿಸುತ್ತಾನೆ "ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ, ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸ, ಎಚ್ಚರಿಸು" (2ತಿಮೊಥೆ 4:2). ಇನ್ನೂ ಅಂತಹ ಅನೇಕ ವಚನಗಳನ್ನು ನಾವು ನೋಡಬಹುದು ಆದರೆ ಈ ಮೇಲೆ ಹೇಳಿದ ವಚನಗಳ ಮೂಲಕ ಸುವಾರ್ತೆ ಪ್ರಕಟನೆ ಮಾಡಬೇಕೆಂಬುದು ದೇವರ ಅಭಿಲಾಷೆ ಎಂದು ಇದರ ಮೂಲಕ ನಮಗೆ ವ್ಯಕ್ತವಾಗುತ್ತದೆ.

ಅಪೊಸ್ತಲರ ಕಾಲದಲ್ಲಿ ಸಭೆಯು ಏನು ಮಾಡಿತ್ತು? ಕರ್ತನು ಅವರನ್ನು ಏನು ಮಾಡಬೇಕೆಂದು ಅಪೇಕ್ಷಿಸಿದ್ದಾನೋ ಅದನ್ನೇ ಸಭೆಯ ಸದಸ್ಯರು ಮಾಡಿದರು. ಅವರು ಸುವಾರ್ತೆಯನ್ನು ಪ್ರಕಟಿಸಿದರು. ಅಪೊಸ್ತಲರ ಕೃತ್ಯಗಳು ಎಂಬ ಪುಸ್ತಕವು ಈ ಉದಾಹರಣೆಗಳಿಂದ ಬರೆಯಲ್ಪಟ್ಟಿದೆ. ವಾಕ್ಯವನ್ನು ಬೋಧಿಸುವುದರ ಮೂಲಕ ಜನರು ಮಾನಸಾಂತರ ಹೊಂದಿದ ಸಂದರ್ಭಗಳಿವೆ. ಅ.ಕೃ.2,8,9,10,16 ಅಧ್ಯಾಯಗಳನ್ನು ಓದು. ಯಾರು ಪ್ರಕಟಿಸಿ ಬೋಧಿಸಿದರು? ಯೆರೂಸಲೇಮಿನಲ್ಲಿರುವ ಸಭೆಗೆ ದೊಡ್ಡ ಹಿಂಸೆ ಉಂಟಾದ ನಂತರ "ಚದರಿ ಹೋದವರು ಅಲ್ಲಲ್ಲಿ ಹೋಗಿ ಸುವಾರ್ತೆ ವಾಕ್ಯವನ್ನು ಸಾರುತ್ತಿದ್ದರು" ಎಂದು ಬೈಬಲ್ ಹೇಳುತ್ತದೆ (ಅ.ಕೃ.8:4).

ಅವರು ಏನನ್ನು ಬೋಧಿಸಿದರು? ಇದನ್ನು ತಿಳಿದುಕೊಳ್ಳಬೇಕೆಂದು ಅ.ಕೃ.ಪುಸ್ತಕದಲ್ಲಿ ಮಾನಸಾಂತರ ಹೊಂದಿದ ಸಂದರ್ಭಗಳನ್ನು ಓದಿದರೆ ಸಾಕು. ಆದರೆ ಸಂಕ್ಷೇಪ್ತವಾಗಿ ಅವರು ಕ್ರಿಸ್ತನ ದೈವತ್ವವನ್ನು ಬೋಧಿಸಿದರು. ರಕ್ಷಣೆಯ ಮಾರ್ಗವನ್ನು, ಸಭೆಯ ಪ್ರಾಮುಖ್ಯತೆಯನ್ನು, ಆರಾಧನೆ ಅಂಶಗಳನ್ನು ಕ್ರೈಸ್ತವ ಜೀವಿತದ ಪ್ರಾಮುಖ್ಯತೆ ಮುಂತಾದವುಗಳನ್ನು ಬೋಧಿಸಿದರು. ಅದೆಲ್ಲವನ್ನು ಪೌಲನು ಸಂಕ್ಷೇಪ್ತವಾಗಿ ಹೀಗೆ ಬರೆದನು "ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ. ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ" (1ಕೊರಿಂಥ 1:18).

ತನ್ನ ವಾಕ್ಯವು ಪ್ರಕಟಿಸಲ್ಪಡಬೇಕೆಂದು ಕರ್ತನು ಆಜ್ಞಾಪಿಸುವುದು ಮಾತ್ರವಲ್ಲದೇ ದೇವರ ವಾಕ್ಯವನ್ನು ಕೇಳುವುದರ ಮೂಲಕ ನಂಬಿಕೆ ಉಂಟಾಗುತ್ತದೆ ಎಂದು ಪೌಲನು ಹೇಳಿದ್ದಾನೆ (ರೋಮಾ 10:17). "ನೀವು ನನ್ನ ವಾಕ್ಯದಲ್ಲಿ

ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ; ಸತ್ಯವು ನಿಮ್ಮನು ಬಿಡುಗಡೆ ಮಾಡುವುದು" (ಯೋಹಾನ 8:31,32). ಮತ್ತೆ "ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವುದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವುದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವುದೆಲ್ಲಿ?" (ರೋಮಾ 10:14). ಇದೆಲ್ಲದರ ಭಾವ ಏನೆಂದರೆ – ಮಾನವನು ನಾಶವಾಗಿ ಹೋಗುತ್ತಿದ್ದಾನೆ (ರೋಮಾ 3;23; 6:23). ಆದ್ದರಿಂದ ದೇವರ ಪ್ರೀತಿ ಪ್ರಕಟಿಸಲ್ಪಡಬೇಕು (ಯೋಹಾನ 3;16). ಮತ್ತು ದೇವರಿಗೆ ವಿಧೇಯತೆ ತೋರಿಸುವುದರ ಮೂಲಕ ಮಾನವನು ಪಾಪದಿಂದ ಬಿಡುಗಡೆ ಹೊಂದುವನು (ರೋಮಾ 1:16,17; ಮಾರ್ಕ 16:16). ದೇವರ ಚಿತ್ತವನ್ನು ಯಾರು ತಿಳುದು ಕೊಳ್ಳುವುದಿಲ್ಲವೋ, ಆತನಿಗೆ ಯಾರು ವಿಧೇಯತೆ ತೋರಿಸುವುದಿಲ್ಲವೋ ಅವರು ನಾಶವಾಗುವರು (2ಥೆಸಲೋನಿಕ 1:7–9). ಆದ್ದರಿಂದ ದೇವರ ವಾಕ್ಯವು ಪ್ರಕಟಿಸಲ್ಪಡಬೇಕು.

**2.ಬಡವರಿಗೆ ಸಹಾಯ ಮಾಡುವದು :**

ಕೊರೆತೆಯಲ್ಲಿರುವ ಬಡವರಿಗೆ ಸಹಾಯ ಮಾಡುವುದರಲ್ಲಿ ಸಭೆಯು ಆಸಕ್ತಿಯುಳ್ಳದಾಗಿತ್ತು, ಅಂತಹವರಿಗೆ ಶಕ್ತಿ ಮೀರಿ ಸಹಾಯ ಮಾಡಿದರೆಂದು ನಾವು ದೇವರ ಗ್ರಂಥದಲ್ಲಿ ನೋಡುತ್ತೇವೆ. ಅ.ಕೃ.2:44, 45ರಲ್ಲಿ ಹೀಗೆ ಹೇಳುತ್ತದೆ "ನಂಬಿದವರೆಲ್ಲರೂ ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮ ತಮ್ಮ ಚರಸ್ಥಿರಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು". ಇದನ್ನು ಅವರು ಮನಃಪೂರ್ವಕವಾಗಿ ಮಾಡಿದರು. ಆದರೆ ಅ.ಕೃ.6ನೇ ಅಧ್ಯಾಯದಲ್ಲಿ ಗ್ರೀಕ್ ಭಾಷೆಯವರು ಇಬ್ರಿಯ ಭಾಷೆಯವರ ಮೇಲೆ ದಿನದಿನದ ಉಪಾಚಾರದಲ್ಲಿ ನಮ್ಮ ವಿಧವೆಯರನ್ನು ಸರಿಯಾಗಿ ಪರಾಂಬರಿಸುವುದಿಲ್ಲವೆಂದು ಗುಣುಗುಟ್ಟಿದರು ಎಂದು ಕಾಣಿಸುತ್ತದೆ. ಆದ್ದರಿಂದ ಅಪೊಸ್ತಲರು ಶಿಷ್ಯರ ಮಂಡಳಿಯನ್ನು ಕೂಡಿಸಿ ಈ ಪ್ರತ್ಯೇಕವಾದ ಕೆಲಸಕ್ಕೆ 7ಮಂದಿಯನ್ನು ನೇಮಿಸಿದರು.

ಯೆರೂಸಲೇಮಿನಲ್ಲಿನ ಬಡಕ್ರೈಸ್ತರಿಗೆ ಸೇವೆಮಾಡುವುದಕ್ಕಾಗಿ ಪೌಲನು ಹೋಗಿದ್ದನೆಂದು ನಾವು ಓದುತ್ತೇವೆ "ಆದರೆ ಈಗ ನಾನು ದೇವಜನರಿಗೆ ಒಂದು

ಧರ್ಮಕಾರ್ಯವನ್ನು ಮಾಡುವವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಯಾಕೆಂದರೆ ಯೆರೂಸಲೇಮಿನಲ್ಲಿರುವ ದೇವಜನರೊಳಗೆ ಬಡವರಿಗೋಸ್ಕರ ಸ್ವಲ್ಪ ಹಣದ ಸಹಾಯವನ್ನು ಮಾಡಬೇಕೆಂಬದಾಗಿ ಮೆಕೆದೋನ್ಯ, ಅಖಾಯ ಸೀಮೆಗಳವರು ಇಷ್ಟಪಟ್ಟಿದ್ದಾರೆ" (ರೋಮಾ 15:25,26) ಎಂದು ಪೌಲನು ಬರೆದಿದ್ದಾನೆ. ಕೊರಿಂಥದಲ್ಲಿರುವ ಸಭೆಯವರಿಗೆ ಪೌಲನು ಹೀಗೆ ಬರೆದನು "ದೇವಜನರಿಗೋಸ್ಕರ ಹಣವಸೂಲು ಮಾಡುವುದನ್ನು ಕುರಿತು ನಾನು ಹೇಳುವದೇನೆಂದರೆ, ಗಲಾತ್ಯದ ಸಭೆಗಳಿಗೆ ನಾನು ಹೇಳಿಕೊಟ್ಟ ಕ್ರಮದಂತೆ ನೀವೂ ಮಾಡಿರಿ. ನಾನು ಬಂದಾಗ ಹಣವಸೂಲು ಮಾಡಬೇಕಾದ ಅವಶ್ಯವಾಗದಂತೆ ನಿಮ್ಮಲ್ಲಿ ಪ್ರತಿಯೊಬ್ಬನು ತನಗೆ ಬಂದ ಸಂಪಾದನೆಯ ಮೇರೆಗೆ ವಾರವಾರದ ಮೊದಲನೆಯ ದಿನದಲ್ಲಿ ಗಂಟುಮಾಡಿ ತನ್ನ ಮನೆಯಲ್ಲಿಟ್ಟುಕೊಂಡಿರಬೇಕು" (1ಕೊರಿಂಥ 16:1,2).

ಯಾರಿಗೆ ಸಹಾಯ ಮಾಡಬೇಕು? ಮೊದಲನೆಯದಾಗಿ ಸಭೆಯಲ್ಲಿ ಕೊರತೆಯಲ್ಲಿರುವವರಿಗೆ, ಕಷ್ಟದಲ್ಲಿರುವವವರಿಗೆ, ಬಡವರಿಗೆ, ವಿಧವೆಗೆ, ವೃದ್ಧರಿಗೆ, ಅನಾಥ ಮಕ್ಕಳಿಗೆ ಆಪತ್ತಿನಲ್ಲಿರುವವರಿಗೆ ಇನ್ನೂ ಮುಂತಾದವರಿಗೆ. "ಆದದರಿಂದ ಸಮಯವಿರಲಾಗಿ ಎಲ್ಲಾರಿಗೆ ಒಳ್ಳೆಯದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನ ನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6;10), ಯಾರಿಗೆ ಇಷ್ಟಬಂದರೆ ಅವರಿಗೆ ಅಲ್ಲ. 1ತಿಮೊಥೆ 5ನೇ ಅಧ್ಯಾಯವನ್ನು ನಾವು ನೋಡಿದಾಗ ನಿಸ್ಸಾಹಯಕರಿಗೆ, ಆಧಾರಿಸುವ ಬಂಧುಗಳಿಲ್ಲದವರಿಗೆ ನಂಬಿಗಸ್ಥರಾದ ಕ್ರೈಸ್ತರೆಂದು ತೋರಿಸಿಕೊಂಡ ನಿರಾಧಾರರಿಗೆ ಸಹಾಯ ಮಾಡಬೇಕೆಂದು ಗಮನಿಸಬೇಕು. ಆದ್ದರಿಂದ ದೇವರ ಹಣವನ್ನು ಜಾಗ್ರತೆಯಿಂದ ಉಪಯೋಗಿಸಿಕೊಳ್ಳಬೇಕು, ಕೇಳಿದವರಿಗೆಲ್ಲಾ ಹಂಚಿಕೊಡಬಾರದು.

ಸಹಾಯವನ್ನು ಸಭೆಯ ಸದಸ್ಯರಿಗೆ ಮಾತ್ರವಲ್ಲದೆ, ಸಭೆಯ ಬಲವನ್ನು ಆಧರಿಸಿ ಕೊರತೆಯಲ್ಲಿರುವ ಎಲ್ಲಾರಿಗೂ ಕೊಡಬೇಕು. ಯಾಕೋಬ 1:27; ಮತ್ತು 2ನೇ ಅಧ್ಯಾಯವನ್ನು ಓದು. ಆನ್ಯರಿಗೆ ಸುವಾರ್ತೆ ಪ್ರಕಟಿಸುವ ಮಾರ್ಗದಲ್ಲಿನ ಸತ್ಕಾರ್ಯಗಳಲ್ಲಿ ಇದು ಒಂದು.

ಇಂತಹ ಕೆಲಸವನ್ನು ಮಾಡುವುದಕ್ಕೆ ಧನವು ಎಲ್ಲಿಂದ ಬರುತ್ತದೆ? ಉತ್ತೇಜನಗೊಂಡು ಕಾಣಿಕೆ ಕೊಡುವ ಸದಸ್ಯರಿಂದ ಬರುವದು (1ಕೊರಿಂಥ 16:1,2;

2ಕೊರಿಂಥ 9:6,7). ಅಂದರೆ ಕ್ರೈಸ್ತರು ಕಾಣಿಕೆ ಕೊಟ್ಟಿಲ್ಲವಾದರೆ ಕೊರತೆಯಲ್ಲಿರುವವರಿಗೆ ಸಹಾಯ ಮಾಡುವುದಕ್ಕೆ ಸಭೆಗೆ ಅವಕಾಶವಿರುವದಿಲ್ಲ.

**3.ಸಭೆಯ ಕ್ಷೇಮಾಭಿವೃದ್ಧಿ :**

ಕ್ಷೇಮಾಭಿವೃದ್ಧಿ ಅಂದರೆ ಸಭೆಯನ್ನು ಸಮಾನತೆಗೊಳಿಸುವುದು, ಬಲವುಳ್ಳದನ್ನಾಗಿ ಮಾಡುವುದು, ಪ್ರೋತ್ಸಾಹಗೊಳಿಸುವುದು. ಸಭೆಯವರನ್ನೂ ಆಧ್ಯಾತ್ಮೀಕತೆಯಲ್ಲಿ ಬೆಳೆಸುವದು ಕ್ಷೇಮಾಭಿವೃದ್ಧಿಯನ್ನುಂಟು ಮಾಡುವವುಗಳು ಯಾವುವು? ದೇವರ ವಾಕ್ಯ, ಸಹವಾಸ, ಆರಾಧನೆ, ಪರಸ್ಪರ ಸಹಾಯ ಸತ್ಕ್ರಿಯೆಗಳು, ಪ್ರೀತಿ ಮುಂತಾದವುಗಳಾಗಿವೆ. ಅ.ಕೃ.9:31; ರೋಮಾ 14:19; 1ಕೊರಿಂಥ 8:1; 14:26, 1ಥೆಸಲೋನಿಕ 5:11; 2ಕೊರಿಂಥ 12:19; ಎಫೆಸ 4:12 ಗಳನ್ನು ಓದು.

ಈ ಎಲ್ಲಾ ಕೆಲಸಗಳನ್ನೆಲ್ಲಾ ಸಭೆಯು ಒಂದು ಆರ್ಗನೈಜೇಷನ್ ಇಲ್ಲದೆಯೂ, ಒಬ್ಬ ಮಾನವ ಅಧಿಕಾರಿ ಇಲ್ಲದೆಯೂ, ಹಣವನ್ನು ಪ್ರತ್ಯೇಕವಾಗಿ ಸಂಗ್ರಹಿಸದೆ ಹೇಗೆ ನಡೆಸುತ್ತದೆ ಎಂದು ಅನೇಕರು ಅಶ್ಚರ್ಯ ಪಡುತ್ತಾರೆ. ಆದರೆ ಕರ್ತನ ಮಾರ್ಗವೇ ಸರಿಯಾದ ಮಾರ್ಗ, ಆತನ ಕೆಲಸ ಮಾಡುವ ಮಾರ್ಗ, ಅದು ಒಂದೆ. ನಾವು ದೇವರ ಚಿತ್ತವನ್ನು ನೇರವೇರಿಸುತ್ತಾ, ಆ ಮೂಲಕ ಈ ಭೂಮಿಯ ಮೇಲೆ ನಮ್ಮ ಸತ್ಕಾರ್ಯಗಳು ಮಾಡುವುದರಿಂದ ಸ್ತುತಿ, ಘನ, ಮಾನ, ಮಹಿಮೆ ದೇವರಿಗೆ ಸಲ್ಲುತ್ತದೆ. ಕ್ರಿಸ್ತನೇ ಸಭೆಗೆ ಶಿರಸ್ಸಾಗಿದ್ದಾನೆ. ಪ್ರತಿ ಸ್ಥಳೀಯ ಸಭೆಯು ಪ್ರತಿ ಸದಸ್ಯನು ಅವರವರ ಜವಾಬ್ದಾರಿಯನ್ನು ನೇರವೇರಿಸಬೇಕು. ಸಭೆಯ ಸದಸ್ಯರು ಅಭಿವೃದ್ಧಿ ಹೊಂದಿದ ಪ್ರಕಾರ ದೇವರಿಗೆ ಕಾಣಿಕೆ ಕೊಡುವುದರ ಮೂಲಕವೇ ಸಭೆಯು ತನ್ನ ಕೆಲಸವನ್ನು ಮಾಡುವುದಕ್ಕೆ ಅವಕಾಶವಿರುತ್ತದೆ.

ಸುವಾರ್ತೆ ಪ್ರಕಟಿಸುವುದು, ಬಡವರಿಗೆ ಸಹಾಯ ಮಾಡುವುದು, ಸಭೆಯ ಕ್ಷೇಮಾಭಿವೃದ್ಧಿ ಮಾಡುವುದೆಲ್ಲವೂ ಮಾನವರ ಆತ್ಮಗಳನ್ನು ರಕ್ಷಿಸುವುದಕ್ಕೆ ಮಾತ್ರವೇ ಉದ್ದೇಶಿಸಲ್ಪಟ್ಟಿವೆ. ಅವುಗಳ ಮೂಲಕ ದೇವರು ಮಹಿಮೆ ಹೊಂದುವನು. ಸಭೆಗೆ ಇದು ಅಲ್ಲದೆ ಬೇರೊಂದು ಕೆಲಸವಿಲ್ಲ. ರಾಜಕೀಯ, ವ್ಯಾಪಾರ ಮುಂತಾದವುಗಳು ಸಭೆಯನ್ನು ಒಂದು ಸಾಮಾಜಿಕ ಸಂಸ್ಥೆಯನ್ನಾಗಿ ತಯಾರಿಮಾಡುತ್ತವೆ. ಅವು ದೇವರಿಂದ ಉಂಟಾಗಲಿಲ್ಲ. ಕ್ರಿಸ್ತನ ಸಭೆಯು ಒಂದು ಆತ್ಮೀಯ ಸಂಸ್ಥೆಯಾಗಿದೆ. ಅದು ಲೋಕದೊಳಗೆ ಇದೆಯಾದರೂ ಲೋಕಸಂಬಂಧವಾದದ್ದಲ್ಲ. ದೇವರಿಗೆ ಒಳಗಾಗಿ ಮಾನವನ ಸೇವೆಮಾಡುತ್ತಾ, ಸದಸ್ಯರ ಆತ್ಮಗಳ ರಕ್ಷಣಾರ್ಥವು, ಪವಿತ್ರತೆ, ಪರಿಶುದ್ಧರಾಗಿ ಇದ್ದು ಅದರ ಸೃಷ್ಟಿಕರ್ತನಿಗೆ ಮಹಿಮೆ ತರುವುದೇ ಅದರ ಜವಬ್ದಾರಿಯಾಗಿದೆ. ಇದು ಕ್ರಿಸ್ತನ ಸಭೆ, ಇದುವೇ ಅದರ ಮುಖ್ಯಧ್ಯೇಯ, ಇದುವೇ ಅದರ ಪ್ರಮುಖ ಕರ್ತವ್ಯ.

## ಪಾಠ – 10

# ಸಭೆಯ ಐಕ್ಯತೆ
# (Unity of the Church)

ಸಭೆಯ ಐಕ್ಯತೆಗಾಗಿ ಇಂದಿನ ಕ್ರೈಸ್ತವ ಲೋಕವು ಹಿಂದೆಂದಿಗೂ ಇಲ್ಲದಂತ ಬಲವಾದ ಕೆಲಸ ಮಾಡುತ್ತದೆ. ಪ್ರತಿ ಮನುಷ್ಯನು ಇದನ್ನು ತಿಳಿದುಕೊಂಡಿದ್ದಾನೆ. ಹೇಗಂದರೆ ಈ ಲೋಕವೆಲ್ಲಾ ಮತಶಾಖೆಗಳಿಂದ (ಡಿನಾಮಿನೇಷನ್) ತುಂಬಿಕೊಂಡಿದೆ. ಎಲ್ಲರು ಈ ರೀತಿಯ ವಿಭಜನೆಯಿಂದ ಬೇಸರಗೊಂಡಿದ್ದಾರೆ. ಆದರೆ ಮನುಷ್ಯ ಕಲ್ಪಿತ ಶಾಖೆಗಳಲ್ಲಿ ಐಕ್ಯತೆಯನ್ನು ಸಾಧಿಸುವುದು ಅಸಾಧ್ಯವಾದದ್ದು. ಯಾಕೆಂದರೆ ಲೋಕದಲ್ಲೆಲ್ಲಾ ಮನುಷ್ಯರು ವಿಭಜನೆಗಳು ಹೊಂದಿರುವುದಕ್ಕೆ ಐಕ್ಯವಾಗಿದ್ದಾರೆ! ಈ ಶಾಖೆಗಳಲ್ಲಿ ಒಂದು ವಿಧವಾದ ಐಕ್ಯತೆ ಇದ್ದರು ವಿಭೇದಗಳು ಇಲ್ಲದಿರಲು ಸಾಧ್ಯವಿಲ್ಲ. ಆದ್ದರಿಂದ ಅದು ಒಡಕು ಹಾಗುವುದೇನು? ಅದರ ಒಡಕು ಬೈಬಲಿನಲ್ಲಿಯೇ ಇದೆ. ನಿಜವಾದ ಐಕ್ಯತೆ ಸಾಧಿಸಲು ಮನುಷ್ಯರು ಅವರ ಸ್ವಂತ ಬೋಧನೆಗಳನ್ನು, ಸಿದ್ಧಾಂತಗಳನ್ನು, ಹೆಸರುಗಳನ್ನು, ಸಭೆಗಳನ್ನು, ಪ್ರಮಾಣ ಪುಸ್ತಕಗಳನ್ನು ತ್ಯಜಿಸಬೇಕು. ಅವರು ಬೈಬಲನ್ನು ಪರಿಗ್ರಹಿಸಿ, ಪಠಿಸಿ, ಅದನ್ನು ನಂಬಿ, ವಿಧೇಯತೆ ತೋರಿಸಬೇಕು. ಆಗ ಮಾತ್ರವೇ ಸರಿಯಾದ ಐಕ್ಯತೆ. ಯೇಸು ಕ್ರಿಸ್ತನು ಯೋಹಾನ 17ನೇ ಅಧ್ಯಾಯದಲ್ಲಿ ಪ್ರಾರ್ಥಿಸಿದ ಐಕ್ಯತೆ ಸಾಧ್ಯವಾಗುತ್ತದೆ. ಮನುಷ್ಯರು ಹೀಗೆ ಮಾಡುವದರಿಂದ ಅವರೆಲ್ಲರೂ ಒಂದೇ ನಂಬಿಕೆಯಲ್ಲಿ ಇರುವರು, ಒಂದೇ ಬೋಧನೆಗೆ ಒಳಗಾಗುವರು, ಒಂದೇ ಹೆಸರನ್ನು ಧರಿಸಿಕೊಳ್ಳುವರು, ಎಲ್ಲರು ಸೇರಿ ಕೆಲಸ ಮಾಡುವರು, ಒಂದೇ ಬೋಧನೆಯನ್ನು ಬೋಧಿಸುವರು, ಎಲ್ಲರು ಸೇರಿ ಪರಲೋಕವನ್ನು ಸಂಪಾದಿಸಿಕೊಳ್ಳುವರು. ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ಹಿಂಬಾಲಿಸುವದನ್ನು ಬಿಟ್ಟು ಕ್ರಿಸ್ತನನ್ನು ಹಿಂಬಾಲಿಸುವದಕ್ಕೆ ಪ್ರಯತ್ನಿಸಿದರೆ ಐಕ್ಯತೆಯನ್ನು ಸುಲಭವಾಗಿ ಸಾಧಿಸಬಹುದು.

ವಾಕ್ಯವು ವಿಭಜನೆಯನ್ನು ಖಂಡಿಸುತ್ತದೆ. ಸಹೋದರರಲ್ಲಿ ಜಗಳ, ಬೇಧಗಳನ್ನು ಹುಟ್ಟಿಸುವುದನ್ನು ದೇವರು ಅಸಹ್ಯಿಸಿಕೊಳ್ಳುವನೆಂದು ಬೈಬಲ್ ಹೇಳುತ್ತದೆ (ಜ್ಞಾನೋಕ್ತಿ 6:19). 1ಕೊರಿಂಥ 1ನೇ ಅಧ್ಯಾಯದಲ್ಲಿ ಕೊರಿಂಥದಲ್ಲಿರುವ ಸಭೆಯು ವಿಭಜನೆಗಳಿರುವದು ನಮಗೆ ಕಾಣಿಸುತ್ತದೆ. ಇಂತಹದನ್ನು ನೋಡಿ ಆನಂದಿಸುವುದಕ್ಕಿಂತಲೂ ಆ ವಿಭಜನೆಗಳನ್ನು ಬೇರಿನಿಂದಲೇ ನಾಶಮಾಡಬೇಕೆಂದು

ಪೌಲನು ತಕ್ಷಣವೇ ಸಿದ್ಧವಾಗಿ ಈ ರೀತಿ ಬರೆದನು "ಸಹೋದರರೆ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವೂ ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನು ಬೇಡಿಕೊಳ್ಳುತ್ತೇನೆ" (ಕೊರಿಂಥ 1:10). ಅವರು ಮಾಡಿದ ಕೆಲಸದಲ್ಲಿನ ಆ ಸಂಗತಿಗಳು ಅವರಿಗೆ ಕಾಣಿಸುವ ರೀತಿಯಲ್ಲಿ 3 ಪ್ರಶ್ನೆಗಳನ್ನು ಪೌಲನು ಅವರಿಗೆ ಕೇಳಿದನು ಅವು ಯಾವುವೆಂದರೆ: ಕ್ರಿಸ್ತನು ವಿಭಾಗವಾಗಿದ್ದಾನೋ? ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೊ? ಪೌಲನ ಹೆಸರಿನಲ್ಲಿ ದೀಕ್ಷಾ ಸ್ನಾನಮಾಡಿಸಿಕೊಂಡಿರೊ? ಈ 3 ಪ್ರಶ್ನೆಗಳಿಗೆ ಅವರು ಅಲ್ಲವೆಂದು ಉತ್ತರಕೊಡಬೇಕಾಗಿ ಬಂತು. ಆದ್ದರಿಂದ ವಿಭಾಗಿಸಲ್ಪಟ್ಟ ಸ್ಥಿತಿಯಲ್ಲಿರುವ ಅವರ ಬುದ್ಧಿಹೀನತೆಯನ್ನು ಪೌಲನು ಅವರಿಗೆ ತಿಳಿಸಿದನು.

ಅದೇ ಅಪೊಸ್ತಲನಾದ ಪೌಲನು ರೋಮಾಪುರದಲ್ಲಿರುವ ಸಹೋದರರಿಗೆ ಹೀಗೆ ಬರೆದನು "ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ, ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಅಂಥವರು ನಮ್ಮ ಕರ್ತನಾದ ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿ ನಯದ ನುಡಿಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕಪಟಿಗಳ ಹೃದಯಗಳನ್ನು ಮೋಸಗೊಳಿಸುತ್ತಾರೆ" (ರೋಮಾ 16:17,18). ಕೊಲೊಸ್ಸೆ 2:20–22ರಲ್ಲಿ ಹೀಗೆ ಹೇಳಿದ್ದಾನೆ "ಪ್ರಾಪಂಚಿಕ ಬಾಲಬೋಧನೆಯ ಪಾಲಿಗೆ ನೀವು ಕ್ರಿಸ್ತನೊಂದಿಗೆ ಸತ್ತವರಾಗಿದ್ದ ಮೇಲೆ ಇನ್ನೂ ಪ್ರಾಪಂಚಿಕರಾಗಿ ಬದುಕುವವರಂತೆ ಮನುಷ್ಯ ಕಲ್ಪಿತ ಆಜ್ಞೆಗಳನ್ನೂ, ಉಪದೇಶಗಳನ್ನೂ, ಅನುಸರಿಸಿ ಇದನ್ನು ಹಿಡಿಯಬೇಡ, ಇದನ್ನು ರುಚಿನೋಡಬೇಡ, ಇದನ್ನು ಮುಟ್ಟಬೇಡ ಎನ್ನುವ ನಿಬಂಧನೆಗಳಿಗೆ ನೀವು ಒಳಗಾಗುವುದೇಕೆ? ಆ ಪದಾರ್ಥಗಳೆಲ್ಲ ಬಳಸುವದರಲ್ಲಿ ನಾಶವಾಗುತ್ತವೆ".

ಇದೆಲ್ಲದರ ಭಾವ ಏನೆಂದರೆ ಮನುಷ್ಯರ ಪದ್ಧತಿಗಳು, ಆಜ್ಞೆಗಳು, ಬೋಧನೆಗಳು ಮನುಷ್ಯರಿಗೆ ಘನತೆಯನ್ನು ತರುತ್ತವೆ, ಬೈಬಲಿಗೆ ಭಿನ್ನವಾಗಿರುವ ಪುಸ್ತಕಗಳನ್ನು ಅನುಸರಿಸುವಂತೆ ಮಾಡಿ ವಿಭಜನೆಗಳನ್ನು ಕಲ್ಪಿಸುತ್ತಿದ್ದಾರೆ. ಕ್ರಿಸ್ತನು ಹೀಗೆ

ಪ್ರಾರ್ಥಿಸಿದನು "ಆದರೆ ಇವರಿಗೋಸ್ಕರ ಮಾತ್ರವಲ್ಲದೇ ಇವರ ವಾಕ್ಯದಿಂದ ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದಿ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ" (ಯೋಹಾನ 17:20,21). ಅಸಾಧ್ಯವಾದದಕ್ಕಾಗಿ ಕ್ರಿಸ್ತನು ಪ್ರಾರ್ಥಿಸಿದನ? ಇಲ್ಲ. ಆದ್ದರಿಂದ ಐಕ್ಯತೆ ಸಾಧಿಸುವುದು ಖಂಡಿತವಾಗಿಯೂ ಸಾಧ್ಯ. ಆದರೆ ಯಾವಾಗ? ನಾವು ಕ್ರಿಸ್ತನನ್ನು ಅನುಸರಿಸಿದಾಗ ಮಾತ್ರವೇ. ಮನುಷ್ಯ ಕಲ್ಪಿತ ಸಿದ್ಧಾಂತಗಳು ನಮ್ಮನ್ನು ವಿಭಾಗಿಸುತ್ತವೆಯಾಗಲಿ ಬೈಬಲ್ ಬೋಧನೆ ನಮ್ಮನು ಐಕ್ಯಪಡಿಸುತ್ತದೆ.

ಎಫೆಸ 4:1–6ರಲ್ಲಿ ಐಕ್ಯತೆಯನ್ನು ಸಾಧಿಸುವದಕ್ಕೆ ಸೂತ್ರಗಳು ನಮಗಿವೆ. ಅದನ್ನು ಈಗ ಓದು "ನೀವು ದೇವರಿಂದ ಕರೆಯಲ್ಪಟ್ಟ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು ನಿಮ್ಮನು ಪ್ರಬೋಧಿಸುತ್ತೇನೆ. ನೀವು ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ, ದೀರ್ಘಶಾಂತಿಯಿಂದಲೂ, ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ. ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನದೀಕ್ಷೆ ಒಂದೇ, ಎಲ್ಲಾರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯನಡೆಸುವವನೂ ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ" ಇದು ಐಕ್ಯತೆಗಾಗಿ ವಿಜ್ಞಾಪನೆ ಎಂದು ಗಮನಿಸು. ಹೇಳಿದವುಗಳೆಲ್ಲವೂ ಒಂದೇಯಾಗಿವೆ ಎಂದು ಸಹ ಗಮನಿಸು. ಒಂದಕ್ಕಿಂತಲೂ ಹೆಚ್ಚಾಗಿವೆ ಎಂದು ಆಲೋಚಿಸುವವರು ಯಾರು?

ಸಭೆಯ ಐಕ್ಯತೆ ಕ್ರಿಸ್ತನ ಮಾತುಗಳಲ್ಲಿ ಅಡಕವಾಗಿದೆ. ನನ್ನ ಸಭೆಯನ್ನು ನಾನು ಕಟ್ಟುವೆನೆಂದು ಕ್ರಿಸ್ತನು ಹೇಳಿದ ಮಾತುಗಳಲ್ಲಿ ಏಕತ್ವವಿದೆ (ಮತ್ತಾಯ 16:18). ಅದು ಆತನ ಆತ್ಮೀಯ ಶರೀರವಾಗಿದೆ (1ಕೊರಿಂಥ 12:27). ಅದಕ್ಕೆ ಆತನೇ ಶಿರಸ್ಸು (ಕೊಲೊಸ್ಸೆ 1:18). ಕ್ರಿಸ್ತನಿಗೆ ಎರಡು ಶರೀರಗಳು, ಎರಡು ತಲೆಗಳು ಇವೆ ಎಂದು

ಯಾರು ಹೇಳುವುದಿಲ್ಲ. ಸಭೆಯು ದೇವರ ಮನೆಯೆಂದು, ಆತನ ಕುಟುಂಬವೆಂದು ಸಹ ಕರೆಯಲ್ಪಟ್ಟಿದೆ (1ತಿಮೊಥೆ 3:15). ಆದರೆ ಎಷ್ಟು ಮನೆಗಳಿವೆ? ಒಂದು ಮಾತ್ರ ಅಲ್ಲವೇ. ಕ್ರಿಸ್ತನು ರಾಜನಾಗಿರುವಾಗ ಕ್ರಿಸ್ತನ ರಾಜ್ಯವನ್ನು ಕುರಿತು ಅಥವಾ ದೇವರ ರಾಜ್ಯವನ್ನು ಕುರಿತು ನಾವು ಓದಬಹುದು (ಯೋಹಾನ 3:3–5; ಕೊಲೊಸ್ಸೆ 4:11; 1ತಿಮೊಥೆ 6:15). ದೇವರಿಗೆ ಎಷ್ಟು ರಾಜ್ಯಗಳಿವೆ? ರಾಜರು ಎಷ್ಟುಮಂದಿ ಇದ್ದಾರೆ? ಈ ಎರಡು ಸಂದರ್ಭಗಳಲ್ಲಿಯೂ ಇರುವುದು ಒಂದು ಮಾತ್ರವೇ.

ಇನ್ನೂ ಅನೇಕ ಸಂಗತಿಗಳನ್ನು ನಾವು ಹೇಳಿಕೊಳ್ಳಬಹುದು, ಡಿನಾಮಿನೇಷನ್, ಆ ಮೂಲಕ ಬಂದ ವಿಭಜನೆಗಳನ್ನು ಬೈಬಲ್ ಖಂಡಿತವಾಗಿಯೂ ದ್ವೇಷಿಸುತ್ತದೆ ಮತ್ತು ವಿರೋಧಿಸುತ್ತದೆ. ಹಾಗೂ ಅದು (ಬೈಬಲ್) ಐಕ್ಯತೆಯನ್ನು, ಏಕತ್ವವನ್ನು, ಪರಿಪೂರ್ಣತೆಯನ್ನು, ಪವಿತ್ರತೆಯನ್ನು ವರ್ಣಿಸುತ್ತದೆ. ಸಭೆ ಅಂದರೆ ವಿವಿಧ ನಂಬಿಕೆಗಳಿಂದಲೂ, ಆಚಾರಗಳಿಂದಲೂ ತುಂಬಿರುವ ಸಂಸ್ಥೆಯೆಂದು ಬೈಬಲ್ ವರ್ಣಿಸುವುದಿಲ್ಲ. ಅದು ಕ್ರಿಸ್ತನಿಗೆ ಸಂಬಂಧಿಸಿದ್ದು, ಕರೆಯಲ್ಪಟ್ಟವರಿಂದ ಕೂಡಿರುವಂತದ್ದಾಗಿದೆ. ಕ್ರಿಸ್ತನನ್ನು ಅನುಸರಿಸಿ ಆತನ ಬೋಧನೆಗೆ ವಿಧೇಯರಾಗಿ ರಕ್ಷಣೆ ಹೊಂದಿದವರೊಂದಿಗೆ ಅದು ತುಂಬಿಕೊಂಡಿದೆ ಎಂದು ವರ್ಣಿಸುತ್ತದೆ. ಕ್ರಿಸ್ತನು ವಿಭಾಗಿಸಲ್ಪಟ್ಟಿಲ್ಲ, ಆತನ ಸಭೆಯು ಸಹ ವಿಭಾಗಿಸಲ್ಪಟ್ಟಿಲ್ಲ. ವಿಭಾಗಿಸಲ್ಪಟ್ಟು, ವಿಭಾಗಿಸಲ್ಪಟ್ಟದ್ದನ್ನು ಯೇಸು ಕ್ರಿಸ್ತನು ಮಾಡಿದ ಪ್ರಾರ್ಥನೆಯನ್ನು ವಿರೋಧಿಸುತ್ತದೆ.

ಪಾಠ – 11

# ಸಭೆಯ ನಂಬಿಕೆ
# (Creed of the Church)

credo ಎಂಬ ಲ್ಯಾಟಿನ್ ಪದದಿಂದ creed ಎಂಬ ಆಂಗ್ಲ ಪದವು ಉಂಟಾಗಿದೆ. ಕ್ರೀಡ್ ಎಂಬ ಆಂಗ್ಲ ಪದವನ್ನು ಹೀಗೆ ವ್ಯಾಖ್ಯಾನಿಸಲಾಗಿದೆ "ಅಧಿಕಾರ ಪೂರ್ವಕವಾದ ಭಕ್ತಿಸೂತ್ರ, ಒಂದು ನಂಬಿಕೆ. ನಂಬಿಕೆಯನ್ನು ಒಪ್ಪಿಕೊಳ್ಳುವ ಯಾವುದಾದರೂ ಒಂದು ಸೂತ್ರ, ಅನುಸರಿಸುವ ಸಿದ್ಧಾಂತದಗಳ ಅಭಿಪ್ರಾಯಗಳ ಸಂಗ್ರಹಣೆ". ನಂಬಿಕೆಯ ಪ್ರಮಾಣ ಅಂದರೆ ಕೆಲವರು "ಅಪೊಸ್ತಲರ ನಂಬಿಕೆ ಪ್ರಮಾಣ ಸೂತ್ರವು" ಇಲ್ಲವೇ "ನೈಸಿನ್ ಪ್ರಮಾಣ" ಎಂದು ಅಂದು ಕೊಳ್ಳುವರು. ಆದರೆ ಅವುಗಳಲ್ಲಿ ಯಾವ ಒಂದನ್ನೂ ಕುರಿತು ಬೈಬಲ್‌ನಲ್ಲಿ ಇಲ್ಲ. ಆದರೆ ಪ್ರತಿ ಮನುಷ್ಯ ಕಲ್ಪಿತ ಸಭೆ ಮನುಷ್ಯ ಕಲ್ಪಿತ ಪ್ರಮಾಣ ಪುಸ್ತಕವನ್ನು ಒಳಗೊಂಡಿವೆ ಅಂತಹವುಗಳೆಲ್ಲವೂ ದೇವರ ವಾಕ್ಯಕ್ಕೆ ವಿರೋಧವಾಗಿವೆ.

ಬೈಬಲ್‌ನಲ್ಲಿ ಇರುವುದಕ್ಕಿಂತ ಹೆಚ್ಚಿನ ಸಂಗತಿಗಳನ್ನು ಒಳಗೊಂಡಿರುವ ಪ್ರಮಾಣ ಪುಸ್ತಕವು ಯಾವುದಾದರೂ ಇದ್ದರೆ ಅದು ಬೈಬಲನ್ನು ಮೀರಿಸುತ್ತದೆ. ಬೈಬಲ್‌ನಲ್ಲಿ ಇರುವುದಕ್ಕಿಂತ ಕಡಿಮೆ ಸಂಗತಿಗಳನ್ನು ಒಳಗೊಂಡಿರುವ ಪ್ರಮಾಣ ಪುಸ್ತಕವು ಯಾವುದಾದರೂ ಇದ್ದರೆ ಅದು ಬೈಬಲ್‌ಗಿಂತ ಕಡಿಮೆವುಳ್ಳದ್ದಾಗಿರುತ್ತದೆ. ಬೈಬಲ್ ನಲ್ಲಿರುವ ಸಂಗತಿಗಳನ್ನೇ ಒಳಗೊಂಡಿರುವ ಪ್ರಮಾಣ ಪುಸ್ತಕವು ಇದ್ದರೆ, ಈಗಾಗಲೇ ನಮ್ಮ ಬಳಿಯಲ್ಲಿ ಬೈಬಲ್ ಇರುವುದರಿಂದ ಅದು ಪ್ರಯೋಜನವಿಲ್ಲದ್ದು. ನಾವು ದೇವರ ವಾಕ್ಯಕ್ಕೆ ಸೇರಿಸುವುದಾಗಲಿ, ತೆಗೆದು ಹಾಕುವುದಾಗಲಿ ಇಲ್ಲವೇ ಮತ್ತೊಂದನ್ನು ಅದರೊಂದಿಗೆ ಇಡುವುದಾಗಲಿ ಮಾಡಬಾರದೆಂದು ಪ್ರಕಟನೆ 22:18,19; ಗಲಾತ್ಯ 1:6–9 ಹೇಳುತ್ತವೆ. ಮತ್ತೊಂದು ಮಾತಿನಲ್ಲಿ ವಾಕ್ಯವು ಪರಿಪೂರ್ಣವಾಗಿವೆ, (2ತಿಮೊಥೆ 3:16,17; ಯಾಕೋಬ 1:25). ನಾವು ದೈವೋಕ್ತಿಗಳನ್ನು ಬೋಧಿಸಬೇಕು (1ಪೇತ್ರ 4:11). ಆದ್ದರಿಂದ ಇತರ ಗ್ರಂಥಗಳ ಅವಶ್ಯಕತೆ ಇಲ್ಲ.

ಇಂದು ಕ್ರೈಸ್ತವ ಲೋಕವೆಲ್ಲ ಮನುಷ್ಯ ಕಲ್ಪಿತ ಪ್ರಮಾಣಗಳಿಂದ ವಿಭಜನೆಗೊಂಡಿವೆಯೇ ಹೊರತು ಬೈಬಲನ್ನು ಅನುಸರಿಸುವದರಿಂದ ಅಲ್ಲ. ಪ್ರತಿ ಸಭೆಯು ಅದರ ಪ್ರತ್ಯೇಕ ನಿಯಮಗಳನ್ನು ಹೊಂದಿರಬೇಕು ಎಂದು ಕೆಲವರು

ವಾದಿಸುತ್ತಾರೆ. ಹಾಗೆ ಅನ್ನುವುದರಲ್ಲಿ ಅವರು ಬೈಬಲನ್ನು ವಿಸರ್ಜಿಸಿದ್ದಾರೆ ಎಂದು ಅರ್ಥ. ಎಂತ ವಿಚಾರ! ಆದ್ದರಿಂದಲೇ ಮನುಷ್ಯ ಕಲ್ಪಿತ ಗ್ರಂಥಗಳನ್ನು ತಿರಸ್ಕರಿಸಿದ್ದಾರೆ, ದೇವರ ವಾಕ್ಯವಾಗಿರುವ ಬೈಬಲಿನ ಬಳಿಗೆ ಹಿಂತಿರುಗಬೇಕೆಂದು ನಾವು ಎಲ್ಲಾರನ್ನು ಕೇಳಿಕೊಳ್ಳುತ್ತೇವೆ. ಬೈಬಲ್ ನಮ್ಮನ್ನು ಯೇಸು ಕ್ರಿಸ್ತನಲ್ಲಿ ಒಗ್ಗೂಡಿಸುತ್ತದೆ ಆಗಲಿ ವಿಭಜಿಸುವದಿಲ್ಲ.

ಕ್ರಿಸ್ತನ ಸಭೆಯ ನಂಬಿಕೆಯ ಪ್ರಮಾಣ ಯಾವುದು? ಕ್ರಿಸ್ತನಲ್ಲದೆ ಬೇರೊಬ್ಬ ರಕ್ಷಕನು ನಮಗೆ ಇಲ್ಲ, ಬೈಬಲ್ ಅಲ್ಲದೆ ಬೇರೊಂದು ಪ್ರಮಾಣ ನಮಗೆ ಇಲ್ಲ. ಭೂ ಸಂಬಂಧವಾದ ನಮ್ಮ ಅಭಿಪ್ರಾಯಗಳು, ಆಲೋಚನೆಗಳು ನಿಷ್ಪ್ರಯೋಜನ. ಬೈಬಲ್ ಅನ್ನು ಕುರಿತು ಸ್ವಂತ ವಿವರಣೆ ನಮಗೆ ಇಲ್ಲ. ನಮಗೆ ಇರುವುದೆಲ್ಲಾ ಬೈಬಲ್ ಮಾತ್ರ. ಅದರ ಬೋಧನೆಗೆ ವಿಧೇಯರಾಗುತ್ತೇವೆ, ಮತ್ತು ಇತರರಿಗೆ ಅದನ್ನು ಕುರಿತು ಸೂಚಿಸುತ್ತೇವೆ. ಎಲ್ಲರು ಅದನ್ನು ಗ್ರಹಿಸಬೇಕೆಂದು ಕೋರಿಕೊಳ್ಳುತ್ತೇವೆ (ಯೋಹಾನ 5:39;2ತಿಮೊಥೆ2:15). ಎಲ್ಲಾ ಮನುಷ್ಯರು ಬೈಬಲ್ ಬೋಧಿಸುವುದನ್ನೇ ಮಾಡಬೇಕೆಂದು ಅಪೇಕ್ಷಿಸುತ್ತೇವೆ.

ನಾವು ಅನುಸರಿಸುವ ಇತರ ಗ್ರಂಥಗಳು ಅಥವಾ ಪುಸ್ತಕಗಳು ಯಾವು ಇಲ್ಲ. ಯಾವ ಮನುಷ್ಯನು ಬೈಬಲಿಗೆ ಸರಿಸಮಾನವಾದ ನಿಯಮಾವಳಿಗಳನ್ನು ಬರೆಯುವುದಿಲ್ಲವೆಂದು ನಮ್ಮ ನಂಬಿಕೆ. ಅಂತಹ ಗ್ರಂಥವನ್ನು ಬರೆಯುವದಕ್ಕೆ ಕರ್ತನು ಯಾರಿಗೂ ಅಧಿಕಾರ ಕೊಟ್ಟಿಲ್ಲ. ಅಂತಹ ಗ್ರಂಥವು ಬರೆಯುವದಕ್ಕೆ ಯಾರನ್ನು ಪ್ರೇರೆಪಿಸುವುದಿಲ್ಲ ಎಂದು ನಮ್ಮ ನಂಬಿಕೆ.

ದೇವರ ಬಳಿಯಿಂದ, ದೇವರಾತ್ಮ ಪ್ರೇರೇಪಣೆಯಿಂದ ಬರೆಯಲ್ಪಟ್ಟ ವಾಕ್ಯವು ಮಾತ್ರ ನಮ್ಮನು ರಕ್ಷಿಸುತ್ತದೆ. ಹಾಗೂ ಆ ದೇವರ ವಾಕ್ಯವೇ ಅಂತ್ಯದಿನದಲ್ಲಿ ನಮಗೆ ನ್ಯಾಯ ತೀರ್ಪುಮಾಡುತ್ತದೆ (ಯೋಹಾನ 12:48). ಇಂತಹ ಅನೇಕ ಕಾರಣಗಳಿಂದ ಮತ ಸಂಬಂಧವಾದ ಸಂಗತಿಗಳಲ್ಲಿ ಅದನ್ನು ನಾವು ಮಾರ್ಗದರ್ಶಿಯಾಗಿ ಅಂಗೀಕರಿಸುತ್ತಾ, ಇತರರು ಸಹ ಅದೇ ರೀತಿಯಲ್ಲಿ ಮಾಡಬೇಕೆಂದು ಪ್ರೋತ್ಸಾಹಿಸುತ್ತಿದ್ದೇವೆ.

ಬೈಬಲ್ ಸತ್ಯವಾಗಿರುವದರಿಂದ ಆ ಸತ್ಯವನ್ನು ತಿಳಿದುಕೊಳ್ಳುವದಕ್ಕೆ ನಾವು ಅದರ ಬಳಿಗೆ ಹೋಗಬೇಕು. ಸತ್ಯಸ್ಥಾವರದ ಬಳಿಗೆ ಹೋಗದಿದ್ದರೆ ನಾವು ಸತ್ಯವನ್ನು

ತಿಳಿದುಕೊಳ್ಳುವುದಿಲ್ಲ. ಆದ್ದರಿಂದ ಸತ್ಯವನ್ನು ನಂಬುವುದಕ್ಕೆ ಮೊದಲು ನಾವು ಸತ್ಯವನ್ನು ಕುರಿತು ಕೇಳಬೇಕು (ರೋಮಾ 12:17). ಮತ ಸಂಬಂಧವಾದ ಸಂಗತಿಗಳನ್ನು ಕುರಿತು ಇಂದು ಅನೇಕರು ಮೋಸ ಹೋಗುತ್ತಿದ್ದಾರೆ ಅಂದರೆ ಅದರಲ್ಲಿ ಆಶ್ಚರ್ಯವಿಲ್ಲ. ಇಂದಿನ ಕ್ರೈಸ್ತವ ಲೋಕದಲ್ಲಿ ಭೇದಗಳು, ಕಳವಳ ಪಡಿಸುವ ಬೋಧನೆಗಳು ಇವೆ ಅಂದರೆ ಅದೂ ಆಶ್ಚರ್ಯವಲ್ಲ. ಸಹಾಯಕ್ಕಾಗಿ ಮಾನವರು ದೇವರ ಬಳಿಗೆ ಬರುವದಕ್ಕಿಂತಲೂ ಮನುಷ್ಯರ ಬೋಧನೆಗಳ ಬಳಿಗೆ ಹೋಗುತ್ತಿದ್ದಾರೆ. ಮನುಷ್ಯನು ರಕ್ಷಣೆ ಹೊಂದಬೇಕಾದರೆ ಅವನು ತಪ್ಪದೇ ಬೈಬಲಿನ ಬಳಿಗೆ ಬರಬೇಕು.

ಸಭೆಯನ್ನು ಕುರಿತು ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಮನುಷ್ಯರು ಬೈಬಲಿನ ಬಳಿಗೆ ಹೋಗಬೇಕೆಂದು ನಾವು ಪ್ರೋತ್ಸಾಹಿಸುತ್ತೇವೆ. ಮನುಷ್ಯ ಕಲ್ಪಿತ ಸಭೆಗಳು ಇಂದು ಲೋಕದಲ್ಲಿ ಅನೇಕವಿವೆ, ಆದರೆ ಯಾವುದು ಸರಿಯಾದದ್ದು? ಪ್ರತಿಯೊಂದು ಸಭೆಯನ್ನು ಪ್ರತಿಯೊಬ್ಬರು ಪರಿಶೋಧಿಸಬೇಕಾ? ಹಾಗೆ ಅಲ್ಲ, ಆದರೆ ಸಭೆಯನ್ನು ಕುರಿತು ಸತ್ಯವನ್ನು ಬೋಧಿಸುವ ಗ್ರಂಥವಾದ ಬೈಬಲನ್ನು ಪರಿಶೋಧಿಸಬೇಕು. ಬೈಬಲಿನಲ್ಲಿರುವ ಸಭೆಯನ್ನು ಕುರಿತ ಸತ್ಯವನ್ನು ತಿಳಿದುಕೊಂಡ ನಂತರ, ಬೈಬಲ್ ಬೋಧನೆಯನ್ನು ಅನುಸರಿಸಿ ನಡೆಯುವ ಸಭೆಯನ್ನು ಕಂಡುಕೊಳ್ಳುವುದು ಕಷ್ಟವಲ್ಲ.

ರಕ್ಷಣೆಹೊಂದುವದಕ್ಕೆ ಮನುಷ್ಯನು ಏನು ಮಾಡಬೇಕು ಎಂಬ ಸತ್ಯವನ್ನು ತಿಳಿದುಕೊಳ್ಳಲು ಬೈಬಲಿನ ಬಳಿಗೆ ಹೋಗಬೇಕೆಂದು ನಾವು ಪ್ರೋತ್ಸಾಹಿಸುತ್ತೇವೆ. ರಕ್ಷಣೆಹೊಂದುವದಕ್ಕೆ ಅನೇಕ ಮಾರ್ಗಗಳಿವೆ ಎಂದು ಬೋಧಿಸುವವರಿದ್ದಾರೆ. ಆದರೆ ದೇವರ ವಾಕ್ಯದ ಬಳಿಗೆ ಬಂದಾಗ, ಒಬ್ಬನು ಸತ್ಯವನ್ನು (ವಾಕ್ಯವನ್ನು) ಕೇಳಬೇಕು, ನಂಬಿಕೆ ಇಡಬೇಕು, ತನ್ನ ಪಾಪಗಳ ವಿಷಯದಲ್ಲಿ ಮಾನಸಾಂತರ ಹೊಂದಬೇಕೆಂದು ಮತ್ತು ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ತಿಳಿದು ಕೊಳ್ಳುತ್ತೇವೆ (ಮಾರ್ಕ 16:16; ಅ.ಕೃ. 2:38). ಮನುಷ್ಯರು ಬೋಧಿಸುವುದರಲ್ಲಿ ಏನು ಇಲ್ಲ. ರಕ್ಷಿಸುವವನು ಕರ್ತನಾಗಿರುವುದರಿಂದ ಒಬ್ಬನು ಆತನ ವಾಕ್ಯಗಳನ್ನು ಕೇಳಿ ಆತನಿಗೆ ವಿಧೇಯತೆ ತೋರಿಸುವುದಾದರೆ ರಕ್ಷಣೆಹೊಂದುವನು.

ದೇವರನ್ನು ಆರಾಧಿಸುವುದು ಹೇಗೆಂಬ ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಮಾನವನು ಬೈಬಲಿನ ಬಳಿಗೆ ಹೋಗಬೇಕೆಂದು ನಾವು ಪ್ರೋತ್ಸಾಹಿಸುತ್ತೇವೆ. ಮನುಷ್ಯರು ಎಷ್ಟು ಹೇಳಿದರು, ಆರಾಧನೆ ಮಾರ್ಗಗಳು ಅನೇಕವಿಲ್ಲ. ಒಂದೇ ಒಂದು ಮಾರ್ಗವಿದೆ. ಮಾರ್ಗವು ಎಂತಹದಾಗಿದೆಯೋ ಎಂದು ಸಹ ಕರ್ತನು ತನ್ನ ವಾಕ್ಯದಲ್ಲಿ ವಿವರಿಸಿದ್ದಾನೆ.

ಈ ವಿಷಯಗಳನ್ನು ಕುರಿತು ಮಾತ್ರವಲ್ಲದೇ ಜೀವವನ್ನು ಕುರಿತು, ಭಕ್ತಿಯನ್ನು ಕುರಿತು ಇರುವ ಪ್ರತಿ ಅಂಶವನ್ನು ಕುರಿತು ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಎಲ್ಲರೂ ಬೈಬಲಿನ ಬಳಿಗೆ ಹೋಗಬೇಕೆಂದು ನಾವು ಕೋರಿಕೊಳ್ಳುತ್ತೇನೆ. ಬೈಬಲನ್ನು ನಾವು ಅರ್ಥಮಾಡಿ ಕೊಳ್ಳಲಾಗುವುದಿಲ್ಲವೆಂದೂ, ಎಲ್ಲರೂ ಒಂದೇ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲಾರರು ಎಂದು ಮನುಷ್ಯರು ನಮ್ಮನು ಒಪ್ಪಿಸಲು ಪ್ರಯತ್ನಿಸುತ್ತಿದ್ದರು, ಅದು ಸತ್ಯವಲ್ಲ. ಮನುಷ್ಯರು ನಾಶವಾಗುವಂತೆ ಬೈಬಲಿಗೆ ಅವನು ದೂರವಾಗಿರಬೇಕೆಂದು ಸೈತಾನನು ಕೋರುತ್ತಿದ್ದಾನೆ. ಆದರೆ ರಕ್ಷಣೆ ಹೊಂದಬೇಕೆಂದು ಅವನು ಬೈಬಲಿನ ಬಳಿಗೆ ಬಂದು ಅದನ್ನು ನಂಬಿ, ಭಕ್ತಿಯ ವಿಷಯದಲ್ಲಿ ಅದನ್ನು ಮಾತ್ರವೇ ಮಾರ್ಗದರ್ಶನವಾಗಿ ಅವನು ಇಟ್ಟುಕೊಳ್ಳಬೇಕು. ಆಗ ಮಾತ್ರವೇ ಅವನು ಸರಿಯಾಗುವನು ಮತ್ತು ರಕ್ಷಣೆ ಹೊಂದುವನು.

ನಮ್ಮ ನಂಬಿಕೆ ಪ್ರಮಾಣ ಯಾವುದು? ಯೇಸು ಕ್ರಿಸ್ತನು, ಆತನ ವಾಕ್ಯಗಳು. ಆತನಲ್ಲದೇ ಬೇರೊಬ್ಬರಿಲ್ಲ. ಯೇಸು ಕ್ರಿಸ್ತನು ದೇವರ ಮಗನೆಂದು ನಾವು ನಂಬುತ್ತೇವೆ. ಆತನ ವಾಕ್ಯವೇ ಸರ್ವಸತ್ಯ. ನಾವು ಅದನ್ನು ಅಂಗೀಕರಿಸಿ ನಡೆದುಕೊಳ್ಳುತ್ತೇವೆ. ಎಲ್ಲರೂ ಹಾಗೆ ಮಾಡಬೇಕೆಂದು ನಾವು ಕೋರಿಕೊಳ್ಳುತ್ತೇವೆ. ಮನುಷ್ಯ ಕಲ್ಪಿತ ಪ್ರಮಾಣಗಳೆಲ್ಲಾ ಒಂದೇ ಒಂದು ಸ್ಥಳಕ್ಕೆ ಸೇರಿಸುತ್ತವೆ ಅದು ನರಕ. ಯೇಸು "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6) ಎಂದು ಹೇಳಿದ್ದಾನೆ.

## ಪಾಠ – 12

# ಸಭೆಯ ಕರ್ತನ ಭೋಜನ
# (Supper of the Church)

ಕ್ರಿಸ್ತನ ಜನ್ಮದಿನವನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಿರಿ ಎಂದಾಗಲಿ, ಅಥವಾ ಆತನ ಮರಣ, ಪುನರುತ್ಥಾನವನ್ನು ವರ್ಷಕ್ಕೆ ಒಂದು ಸಾರಿ, ಪ್ರತಿ ವರ್ಷ ಆಚರಿಸಿರಿ ಎಂದು ಕ್ರೈಸ್ತರಿಗೆ ಆಜ್ಞಾಪಿಸಿಲ್ಲ. ಸಭೆಯೆಲ್ಲಾಗಲಿ ಅಥವಾ ವ್ಯಕ್ತಿಗತ ಕ್ರೈಸ್ತವನಾಗಲಿ ಮತ ಸಂಬಂಧವಾದ ಹಬ್ಬಗಳನ್ನು ಆಚರಿಸಬೇಕೆಂದು ಎಂದಿಗೂ ದೇವರು ಕೋರಿಕೊಂಡಿಲ್ಲ. ಕ್ರೈಸ್ತರಿಗೆ ಜ್ಞಾಪಕಾರ್ಥವಾಗಿ ಕೊಡಲ್ಪಟ್ಟ ಸಂಸ್ಥೆ ಅಥವಾ "ಹಬ್ಬ" ಒಂದೇ ಒಂದು ಇದೆ ಅದು ಕರ್ತನ ಭೋಜನ ಅಥವಾ ರೊಟ್ಟಿ ಮುರಿಯುವ ನಿಯಮ.

ಕರ್ತನ ಭೋಜನ ಅಂದರೆ ಏನು? ಅದನ್ನು ಯಾರು ಪ್ರಾರಂಭಿಸಿದರು? ಅದರ ಪ್ರಯೋಜನವೇನು? ಅದರಲ್ಲಿ ಪಾಲುಗಾರರಾಗಲು ಕ್ರೈಸ್ತರಿಗೆ ಒಂದು ಪ್ರತ್ಯೇಕವಾದ ಸಮಯ ಅಥವಾ ದಿನವಾಗಲಿ ಕೊಟ್ಟಿದೆಯಾ? ಈ ಪಾಠದಲ್ಲಿ ಈ ಎಲ್ಲಾ ಪ್ರಶ್ನೆಗಳಿಗೆ, ಇನ್ನೂ ಅನೇಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳೋಣ.

ಕರ್ತನ ಭೋಜನವನ್ನು ಯೇಸು ಕ್ರಿಸ್ತನು ಪ್ರಾರಂಭಿಸಿದನು. ಅದರ ವಿಷಯದಲ್ಲಿ ಸಂಪೂರ್ಣವಾಗಿ ತಿಳಿದುಕೊಳ್ಳಲು ವಾಕ್ಯಭಾಗಗಳನ್ನು ಈಗ ಓದು: ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ ದಿವಸದಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು– ಪಸ್ಕದ ಊಟ ಮಾಡುವುದಕ್ಕೆ ನಾವು ನಿನಗೆ ಎಲ್ಲಿ ಸಿದ್ಧಮಾಡಬೇಕನ್ನುತ್ತೀ ಎಂದು ಕೇಳಲು ಆತನು– ನೀವು ಪಟ್ಟಣದೊಳಕ್ಕೆ ಇಂಥವನ ಬಳಿಗೆ ಹೋಗಿ ಅವನಿಗೆ ನನ್ನ ಕಾಲ ಸಮೀಪವಾಯಿತು, ನಿನ್ನ ಮನೆಯಲ್ಲಿ ನನ್ನ ಶಿಷ್ಯರ ಸಂಗಡ ಪಸ್ಕಹಬ್ಬ ಮಾಡುತ್ತೇನೆಂದು ಬೋಧಕನು ಹೇಳುತ್ತಾನೆ ಎಂಬುದಾಗಿ ಹೇಳಿರಿ ಅಂದನು. ಶಿಷ್ಯರು ಯೇಸು ತಮಗೆ ಅಪ್ಪಣೆಕೊಟ್ಟಂತೆ ಮಾಡಿ ಪಸ್ಕಕ್ಕೆ ಸಿದ್ಧ ಮಾಡಿದರು.

ಸಂಜೆಯಾದಾಗ ಆತನು ಹನ್ನೆರಡು ಮಂದಿ ಶಿಷ್ಯರ ಸಂಗಡ ಊಟಕ್ಕೆ ಕೂತುಕೊಂಡನು. ಅವರು ಊಟ ಮಾಡುತ್ತಿರುವಾಗ ಆತನು– ನಿಮ್ಮಲ್ಲಿ ಒಬ್ಬನು ನನ್ನನು ಹಿಡುಕೊಡುವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. ಆಗ ಅವರು ಬಹಳ ದುಃಖಪಟ್ಟು – ಸ್ವಾಮೀ, ನಾನವನಲ್ಲ ಎಂದು ಪ್ರತಿಯೊಬ್ಬರು

ಕೇಳತೊಡಗಿದರು, ಅದಕ್ಕಾತನು– ಬಟ್ಟಲಲ್ಲಿ ನನ್ನ ಸಂಗಡ ಕೈ ಅದ್ದಿದವನೇ ನನ್ನನು ಹಿಡುಕೊಡುವನು. ಮನುಷ್ಯ ಕುಮಾರನು ಹೊರಟು ಹೋಗುತ್ತಾನೆ ಸರಿ; ಹಾಗೆ ಆತನ ವಿಷಯವಾಗಿ ಬರೆದದೆಯಲ್ಲಾ. ಆದರೆ ಯಾವನು ಮನುಷ್ಯಕುಮಾರನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು ಅಂದನು. ಆಗ ಆತನನ್ನು ಹಿಡುಕೊಡಬೇಕೆಂದಿದ್ದ ಯೂದನು– ಗುರುವೇ, ನಾನವನಲ್ಲ? ಅನ್ನಲಾಗಿ ಯೇಸು ಅವನಿಗೆ –ನೀನೇ ಹೇಳಿದ್ದೀ ಎಂದು ಹೇಳಿದನು. ಅವರು ಊಟ ಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು– ತಕ್ಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹ ಅಂದನು. ಆ ಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು– ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ. ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವುದೇ ಇಲ್ಲ ಎಂದು ನಿಮಗೆ ಹೇಳುತ್ತೇನೆ ಅಂದನು (ಮತ್ತಾಯ 26:17–30).

ಕೊರಿಂಥದಲ್ಲಿರುವ ಕ್ರೈಸ್ತರಿಗೆ ಪೌಲನು ಹೀಗೆ ಹೇಳಿದನು "ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೆ. ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೆ. ರೊಟ್ಟಿಯು ಒಂದೇಯಾಗಿರುವದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕೆಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲು ತಕ್ಕೊಂಡು ತಿನ್ನುತ್ತೇವೆ (1ಕೊರಿಂಥ 10: 16,17). ವಿಗ್ರಹಗಳನ್ನು, ಕರ್ತನನ್ನು ಒಂದೇಸಾರಿ ಕೆಲವರು ಆರಾಧಿಸುವದಕ್ಕೆ ಪ್ರಯತ್ನಿಸುವ ವಿಗ್ರಹಾರಾಧಿಕರ ಕಾಲದಲ್ಲಿ ಜೀವಿಸುತ್ತಿದ್ದ ಪೌಲನು ಹೀಗೆಂದನು "ನೀವು ಕರ್ತನ ಪಾತ್ರೆ ಮತ್ತು ದೆವ್ವಗಳ ಪಾತ್ರೆ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಕುಡಿಯಲಾರಿರಿ; ಕರ್ತನ ಪಂಕ್ತಿ ಮತ್ತು ದೆವ್ವಗಳ ಪಂಕ್ತಿ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಊಟ ಮಾಡಲಾರಿರಿ (1ಕೊರಿಂಥ 10:21).

ಪೌಲನು ಮತ್ತೆ ಕೊರಿಂಥದಲ್ಲಿರುವವರಿಗೆ ಹೀಗೆ ಬರೆಯುತ್ತಾನೆ "ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನಂದರೆ– ಕರ್ತನಾದ ಯೇಸು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು– ಇದು ನಿಮಗೋಸ್ಕರವಾಗಿರುವ ನನ್ನ ದೇಹ; ನನ್ನನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು– ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನಸಿ ಕೊಳ್ಳುವದಕ್ಕೋಸ್ಕರ ಪಾನ ಮಾಡಿರಿ ಅಂದನು. ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನ ಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿ ಪಡಿಸುತ್ತೀರಿ. ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೇ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹ ಮಾಡಿದವನಾಗಿರುವನು. ಪ್ರತಿ ಮನುಷ್ಯನು ತನ್ನನು ಪರೀಕ್ಷಿಸಿ ಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕೆಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯತೀರ್ಪಿಗೊಳಗಾಗುವನು" (1ಕೊರಿಂಥ 11:23–29). ಮೇಲೆ ಹೇಳಿದ ವಚನಗಳಿಂದ ನಾವು ಈ ಕೆಳಗಿನ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ.

1. ಯೇಸು ಕ್ರಿಸ್ತನು ತನ್ನ ಮರಣದ ಜ್ಞಾಪಕಾರ್ಥವಾಗಿ ರೊಟ್ಟಿಮುರಿಯುವ ನಿಯಮವನ್ನು ಸ್ಥಾಪಿಸಿ, ಅದರಲ್ಲಿ ನಾವು ಪಾಲುಗಾರರಾಗುವಾಗೆಲ್ಲಾ ನಮ್ಮೊಂದಿಗೆ ಆತನಿರುವನೆಂದು ವಾಗ್ದಾನ ಮಾಡಿದ್ದಾನೆ.

2. ರೊಟ್ಟಿಯನ್ನು ಯೇಸು ಕ್ರಿಸ್ತನ ದೇಹಕ್ಕೆ ಜ್ಞಾಪಕಾರ್ಥವಾಗಿ ತೆಗೆದುಕೊಳ್ಳಬೇಕು. ಅದು ಕ್ರಿಸ್ತನ ನಿಜ ಶರೀರವಲ್ಲ, ಅದು ಕ್ರಿಸ್ತನ ಶರೀರದ ಮಾಂಸವಾಗಿ ಬದಲಾಗದು. ಆದರೆ ಸೂಕ್ಷ್ಮವಾಗಿ ಕ್ರಿಸ್ತನ ಶರೀರಕ್ಕೆ ಗುರುತಾಗಿ, ಅಂದರೆ ಜ್ಞಾಪಕಾರ್ಥವಾಗಿ ಕೊಡಲ್ಪಟ್ಟಿದೆ. ರೊಟ್ಟಿ ಮಾತ್ರ ಹುಳಿಯಿಲ್ಲದ್ದು ಆಗಿರಬೇಕು. ಲೋಕದಲೆಲ್ಲಾ ಇದು ಸುಲಭವಾಗಿ ದೊರೆಯುತ್ತದೆ.

3. ದ್ರಾಕ್ಷಾರಸವು ಕ್ರಿಸ್ತನ ರಕ್ತಕ್ಕೆ ಜ್ಞಾಪಕಾರ್ಥವಾಗಿ ಸೇವಿಸಬೇಕು. ಅದು ನಿಜವಾದ ರಕ್ತವಲ್ಲ. ಅದು ರಕ್ತವಾಗಿಯೂ ಬದಲಾಗದು ಆದರೆ ಅದು ನಮಗಾಗಿ ಸುರಿಸಲ್ಪಟ್ಟ ಕ್ರಿಸ್ತನ ರಕ್ತಕ್ಕೆ ಜ್ಞಾಪಕಾರ್ಥವಾಗಿ ಇದೆ. ಇದು ನಮಗೆ ಕ್ರಿಸ್ತನ ರಕ್ತವನ್ನು ನೆನಪಿಗೆ ತರುತ್ತದೆ. ಒಂದೇ ಪಾತ್ರೆಯನ್ನು ಅಥವಾ ಅನೇಕ ಪಾತ್ರೆಗಳನ್ನು ತೆಗೆದುಕೊಳ್ಳಬಹುದು (ಅದು ಜನಸಂಖ್ಯೆಗೆ ತಕ್ಕಂತೆ). ನಾವು ಪಾತ್ರೆಯನ್ನು ಕುರಿತು ಅಲ್ಲ, ಪಾತ್ರೆಯಲ್ಲಿರುವುದನ್ನು ಕುರಿತು ಆಲೋಚಿಸಿಕೊಳ್ಳಬೇಕು. ದ್ರಾಕ್ಷಾರಸವು ಸಹ ಎಲ್ಲಾಕಡೆಯಲ್ಲಿ ದೊರೆಯುತ್ತದೆ ಅದನ್ನು ತಂದುಕೊಳ್ಳುವುದು ಸುಲಭ.

4. ಮನುಷ್ಯನು ಬೇಗನೆ ಮರೆತು ಹೋಗುವ ಗುಣಹೊಂದಿದವನು ಎಂದು ಕ್ರಿಸ್ತನಿಗೆ ಗೊತ್ತು. ಆದ್ದರಿಂದ ಈ ಲೋಕ ಪಾಪಗಳ ಪರಿಹಾರಕ್ಕಾಗಿ ನಡೆದ ಬಲಿಯನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕೆಂದು ಆತನು ಈ ರೊಟ್ಟಿ ಮುರಿಯುವ ನಿಯಮವನ್ನು ಆಜ್ಞಾಪಿಸಿದನು.

5. ಅದರಲ್ಲಿ ಪಾಲುಗಾರರಾಗುವುದರಿಂದ ನಾವು ಕ್ರಿಸ್ತನ ಮರಣ, ಸಮಾಧಿ, ಪುನರುತ್ಥಾನಗಳನ್ನು ನಂಬುತ್ತೇವೆ ಎಂದು, ಆತನು ಎರಡನೆಯ ಸಾರಿ ಬರುವವನಾಗಿದ್ದಾನೆಂದು ಲೋಕಕ್ಕೆ ತಿಳಿಯಪಡಿಸಬೇಕು.

6. ಪ್ರತಿಯೊಬ್ಬನು ಕ್ರೈಸ್ತವನಾಗಿರಬೇಕಾದ ರೀತಿಯಲ್ಲಿ ತಾನು ಇರುವನೋ ಅಥವಾ ಇಲ್ಲವೋ ಎಂದು ತನ್ನನು ಪರೀಕ್ಷಿಸಿ ಕೊಳ್ಳುವ ಸಮಯ ಈ ರೊಟ್ಟಿ ಮುರಿಯುವ ನಿಯಮ ಅಥವಾ ಕರ್ತನ ಭೋಜನ. ಅದರಲ್ಲಿ ಯಾರು ಪಾಲುಗಾರರಾಗಬೇಕು, ಯಾರು ಪಾಲುಗಾರರಾಗಬಾರದು ಎಂದು ನಾನು ಹೇಳುವದಿಲ್ಲ, ಒಂದು ವೇಳೆ ನಾನು ನಂಬಿಕೆಯುಳ್ಳ ಕ್ರೈಸ್ತವನಾಗಿರದಿದ್ದರೆ ಅದರಲ್ಲಿ ಪಾಲುಗಾರನಾಗುವಾಗ ನನ್ನ ದೋಷಗಳನ್ನು ಸರಿಪಡಿಸಿಕೊಳ್ಳಬೇಕು. ಅದರಲ್ಲಿ ಕೈ ಹಾಕುವುದಕ್ಕೆ ಮೊದಲು ನಾನು ಪಾಪವಿಲ್ಲದವನಾಗಿ ಇರಬೇಕೆಂದು ಕರ್ತನು ಅಪೇಕ್ಷಿಸುತ್ತಾನೆ ಎಂದು ಇದರ ಉದ್ದೇಶವಲ್ಲ, ಆದರೆ ನಾನು ಆತನಿಗೆ ನಂಬಿಗಸ್ತನಾಗಿ ಇರಬೇಕೆಂದು ಆತನ ಉದ್ದೇಶವಾಗಿದೆ. ನಂಬಿಗಸ್ತನಾಗಿ ಇರಬೇಕಾದರೆ ಆತನು ಆಜ್ಞಾಪಿಸಿದ ರೀತಿಯಲ್ಲಿ ಅದರಲ್ಲಿ ನಾನು ಪಾಲುಗಾರನಾಗಬೇಕು. ನಾನು ಹೀಗೆ ಮಾಡದೆ, ಅಯೋಗ್ಯವಾಗಿ

ತೆಗೆದುಕೊಂಡರೆ ನನ್ನ ಆತ್ಮವನ್ನು ನಾನೇ ನಾಶನಕ್ಕೆ ಗುರಿಮಾಡಿಕೊಳ್ಳುವುದಕ್ಕೆ ಆ ಪಾತ್ರೆಯಲ್ಲಿ ಪಾಲುಗಾರನಾಗುತ್ತೇನೆ.

7. ನಾವು ಕರ್ತನ ಪಾತ್ರೆಯಲ್ಲಿಯೂ, ದೆವ್ವದ ಪಾತ್ರೆಯಲ್ಲಿಯೂ ಪಾಲುಗಾರರಾಗಲು ಸಾಧ್ಯವಿಲ್ಲ. ಹಾಗೆ ಕರ್ತನ ಪಂಕ್ತಿ ಮತ್ತು ದೆವ್ವಗಳ ಪಂಕ್ತಿ ಈ ಎರಡರಲ್ಲಿಯೂ ಊಟ ಮಾಡಲು ಸಾಧ್ಯವಿಲ್ಲ ಎಂದು ಪೌಲನು ತೋರಿಸಿದ್ದಾನೆ. ಕ್ರೈಸ್ತವನು ಕರ್ತನ ಭೋಜನವನ್ನು ಕ್ರಿಸ್ತನಿಗೆ ಅಂಗೀಕಾರ ಯೋಗ್ಯವಾಗಿ ತೆಗೆದುಕೊಳ್ಳಬೇಕಾದರೆ ಅವನು ವಿಗ್ರಹಗಳ ಬಳಿಗೂ, ಸುಳ್ಳು ಬೋಧನೆಗಳಿಂದಲೂ ತನ್ನನು ತಾನು ಪ್ರತ್ಯೇಕಿಸಿಕೊಳ್ಳಬೇಕೆಂದು ಇದರ ಅರ್ಥ. ಕರ್ತನ ಭೋಜನವನ್ನು ಅವರು ಸಾಮಾನ್ಯ ಭೋಜನದಂತೆ ಎಣಿಸಬಾರದೆಂದು ಕೊರಿಂಥದಲ್ಲಿರುವ ಕ್ರೈಸ್ತರಿಗೆ ಪೌಲನು ನೆನಪಿಗೆ ತಂದನು. ಅವರು ತಮ್ಮ ತಮ್ಮ ಭೋಜನವನ್ನು ಮನೆಯಲ್ಲಿಯೇ ಮಾಡಿ, ಕರ್ತನ ಭೋಜನವನ್ನು ಭಕ್ತಿಪೂರ್ವಕಾಗಿ ಸಭೆಯಲ್ಲಿ ಮಾಡಬೇಕೆಂದು ಎಚ್ಚರಿಸಲ್ಪಟ್ಟರು.

ಆದರೆ ಈ ಭೋಜನವನ್ನು ಯಾವಾಗ ಮಾಡಬೇಕು? ಅದನ್ನು ನಾವು ನಮಗೆ ಇಷ್ಟಬಂದಾಗಲೆಲ್ಲಾ ಆಚರಿಸಬೇಕಾ? ಕೆಲವರು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ, ಮತ್ತೆ ಕೆಲವರು ವರ್ಷಕ್ಕೆ ಒಂದು ಸಾರಿ ಮಾಡುವರೆಂದು ನಮಗೆ ಗೊತ್ತು. ಆದರೆ ವಾಕ್ಯವು ಏನ್ನನ್ನು ಬೋಧಿಸುತ್ತದೆ? ಕ್ರಿಸ್ತನು ಭಾನುವಾರದಂದು ಪುನರುತ್ಥಾನ ಹೊಂದಿದನೆಂದು ವಾಕ್ಯವು ನಮಗೆ ಬೋಧಿಸುತ್ತದೆ. ಆತನು ತನ್ನ ಶಿಷ್ಯರಿಗೆ ಒಂದಕ್ಕಿಂತ ಹೆಚ್ಚಾಗಿ ಭಾನುವಾರದಂದು ಕಾಣಿಸಿಕೊಂಡನು ಎಂದು, ಸಭೆಯು ಪಂಚಾಶತ್ತಮ ಹಬ್ಬದ ದಿನದಂದು ಅಂದರೆ ಭಾನುವಾರದ ದಿನದಂದು ಸ್ಥಾಪಿಸಲ್ಪಟ್ಟಿತು ಎಂದು ವಾಕ್ಯಗಳು ಬೋಧಿಸುತ್ತವೆ. ಇದು ನಿಜವಾಗಲೂ ಪ್ರಾಮುಖ್ಯವಾದದ್ದು. ತ್ರೋವದಲ್ಲಿ ಇರುವ ಕ್ರೈಸ್ತವರೊಂದಿಗೆ ಸೇರಿ ಭಾನುವಾರದ ದಿನದಂದು ಆರಾಧಿಸುವುದಕ್ಕೆ ಅಲ್ಲಿ ಸೇರಿಬಂದಿದ್ದರೆಂದು ವಾಕ್ಯವು ಹೇಳುತ್ತದೆ "ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನವರೆಗೂ ಉಪನ್ಯಾಸವನ್ನು ನಡೆಸಿದನು" (ಅ.ಕೃ.20:7). ಭಾನುವಾರ ಕ್ರಿಸ್ತನ ಶಿಷ್ಯರು ರೊಟ್ಟಿ ಮುರಿಯುವುದಕ್ಕೆ ಪ್ರತ್ಯೇಕವಾಗಿ ಕೂಡಿಕೊಂಡರೆಂದು, ಆ

ಸಂದರ್ಭದಲ್ಲಿ ಪೌಲನು ಅವರಿಗೆ ಪ್ರಸಂಗಿಸಿದನೆಂದು ದಯಾಮಾಡಿ ಗಮನಿಸು. ಆದರೆ ಈ ವಚನದಲ್ಲಿ "ಪ್ರತಿ ಭಾನುವಾರದಂದು" ಎಂದು ಹೇಳುತಿಲ್ಲ ಎಂದು ಕೆಲವರು ಹೇಳುತ್ತಾರೆ. ಹಾಗಾದರೆ ಧರ್ಮಶಾಸ್ತ್ರದ ಪ್ರಕಾರ ಜನರು "ಪ್ರತಿ ಸಬ್ಬತ್" ದಿನವನ್ನು ಆಚರಿಸಬೇಕೆಂದು ದೇವರು ಅವರಿಗೆ ಆಜ್ಞಾಪಿಸಿಲ್ಲ. ಆದರೆ ಅವರು ಪ್ರತಿ ಸಬ್ಬತ್ ದಿನವನ್ನು ಆಚರಿಸಬೇಕೆಂದು ಅವರಿಗೆ ತಿಳಿದಿದೆ. ಅದೇರೀತಿ ಪ್ರತಿ ವಾರದಲ್ಲಿ ಒಂದೇ ಒಂದು ಭಾನುವಾರವಿದೆ. ಆದ್ದರಿಂದ ಕ್ರೈಸ್ತರು ದೇವರನ್ನು ಆರಾಧಿಸುವ ನಿಮಿತ್ತ, ಆರಾಧನೆಯಲ್ಲಿ ಒಂದು ಭಾಗವಾದ ಕರ್ತನ ಭೋಜನವನ್ನು ಆಚರಿಸುವ ನಿಮಿತ್ತ ಪ್ರತಿ ಭಾನುವಾರ ಕೂಡಿಕೊಳ್ಳುತ್ತಿದ್ದರು. ಹಾಗೆ ಅಲ್ಲವೆಂದು ಹೇಳುವುದಕ್ಕೆ ಯಾರಿಗೆ ಅಧಿಕಾರವಿದೆ? ಭಾನುವಾರದ ದಿನದಂದು ಕರ್ತನ ಭೋಜನವನ್ನು ತೆಗೆದು ಹಾಕಲು ಅವರು ಯಾವ ವಾಕ್ಯಭಾಗವನ್ನು ತೋರಿಸುವರು?

ನಮ್ಮ ಕಾಲದಲ್ಲಿ ಕರ್ತನ ಭೋಜನವು ಒಂದು ದೊಡ್ಡ ಸ್ಮರಣೆಗೆ ಚಿಹ್ನೆಯಾಗಿತ್ತು. ಕ್ರಿಸ್ತನನ್ನು, ಆತನ ಸಭೆಯನ್ನು ಒಂದಾಗಿ ಮಾಡುತ್ತದೆ. ಸಭೆಯನ್ನು ಜೀವಂತವಾಗಿರಿಸಿ ಆ ಮೂಲಕ ಕ್ರಿಸ್ತನನ್ನು ಈ ಲೋಕಕ್ಕೆ ಪ್ರಕಟಿಸುವ ಒಂದು ಮಾರ್ಗವಾಗಿದೆ. ನಮ್ಮ ಮನಸ್ಸುಗಳನ್ನು ಕ್ರಿಸ್ತನ ಮೇಲೆ ಕೇಂದ್ರೀಕರಿಸುತ್ತದೆ. ಅದು ನಮ್ಮನು ಐಕ್ಯಪಡಿಸುತ್ತದೆ. ಆದ್ದರಿಂದ ನಾವು ಕರ್ತನ ಭೋಜನವನ್ನು ಮಾಡಲು ಭಾನುವಾರದಂದು ಸಭೆಯಾಗಿ ಕೂಡಿಕೊಳ್ಳೋಣ. ಆದ್ದರಿಂದಲೇ ಸಭೆಗೆ ಕರ್ತನ ಭೋಜನವು ಅಥವಾ ರೊಟ್ಟಿ ಮುರಿಯುವ ನಿಯಮವು ಬಹಳ ಪ್ರಾಮುಖ್ಯವಾದದ್ದು.

## ಪಾಠ – 13

# ಸಭೆಯ ಸಂಗೀತ
# (Music in the Church)

ಸಭೆಯ ಆರಾಧನೆಯನ್ನು ಕುರಿತು ಇದಕ್ಕೆ ಮೊದಲೇ ಓದಿದ್ದೇವೆ. ಅದರಲ್ಲಿ ಪ್ರಾರ್ಥನೆ ಮಾಡುವುದು, ಹಾಡುಗಳನ್ನು ಹಾಡುವುದು, ವಾಕ್ಯೋಪದೇಶ, ಕರ್ತನ ಭೋಜನ, ಮತ್ತು ಕಾಣಿಕೆ ಕೊಡುವದನ್ನು ಒಳಗೊಂಡಿರುವುದನ್ನು ಗಮನಿಸಿದ್ದೇವೆ. ಆದರೆ ಈಗ ದೇವರು ಸಭೆಯಲ್ಲಿ ಅಪೇಕ್ಷಿಸುವ ಸಂಗೀತವಾದ ಹಾಡುಗಳನ್ನು ಹಾಡುವುದರ ಕುರಿತು ಸ್ವಲ್ಪ ವಿವರವಾಗಿ ಕಲಿತುಕೊಳ್ಳೋಣ. ಈ ಅಂಶವನ್ನು ನಾವು ವಿವರವಾಗಿ ಯಾಕೆ ಓದಬೇಕು ಅಂದರೆ ಸಂಗೀತದಲ್ಲಿ 2 ವಿಧವಾದ ಸಂಗೀತವಿದೆ: ಅದು ಗಾತ್ರ ಸಂಗೀತ (Vocal Music) ಮತ್ತು ವಾದ್ಯ ಸಂಗೀತ (Instrumental Music). ಅದ್ದರಿಂದ ನಾವು ದೇವರನ್ನು ಆರಾಧಿಸುವಾಗ ದೇವರು ನಮ್ಮಿಂದ ಯಾವ ರೀತಿಯ, ಯಾವ ವಿಧವಾದ ಸಂಗೀತವನ್ನು ದೇವರು ಅಪೇಕ್ಷಿಸುತ್ತಿದ್ದಾನೆ? ಅಥವಾ 2 ವಿಧವಾದ ಸಂಗೀತವನ್ನು ಆರಾಧನೆಯಲ್ಲಿ ಉಪಯೋಗಿಸಬಹುದ ? ಎಂದು ನಾವು ಈ ಪಾಠದಲ್ಲಿ ನಿರ್ಣಯಿಸಬಹುದು.

ಮೊದಲನೆಯದಾಗಿ ಕ್ರಿಸ್ತನ ಸಭೆಯಲ್ಲಿ ಪ್ರಾರಂಭದ (ಮೊದಲ ಶತಮಾನದ) ಕ್ರೈಸ್ತರು ವಾದ್ಯ ಸಂಗೀತವನ್ನು ಉಪಯೋಗಿಸಿದಂತಾಗಲಿ ಅಥವಾ ಉಪಯೋಗಿಸಬೇಕೆಂಬ ಆಜ್ಞೆಯನ್ನಾಗಲಿ ವಾಕ್ಯಭಾಗದಲ್ಲಿ ಎಲ್ಲಿಯೂ ನಮಗೆ ಕಾಣಿಸುವದಿಲ್ಲ. ಅಷ್ಟೇ ಅಲ್ಲದೆ ಮೊದಲ ಶತಮಾನದ ಕ್ರೈಸ್ತರು ಆರಾಧನೆಯಲ್ಲಿ ವಾದ್ಯಗಳನ್ನು ಉಪಯೋಗಿಸಿದಂತೆ ಚಾರಿತ್ರತ್ಮಾಕ ಆಧಾರವು ಇಲ್ಲ. ಆದರೆ ಕ್ರೈಸ್ತರು ಹಾಡುಗಳನ್ನು ಹಾಡಬೇಕೆಂದು ಆಜ್ಞೆ ಹೊಂದಿದರೆಂದು ವಾಕ್ಯವು ನಮಗೆ ತಿಳಿಸುತ್ತವೆ. ಅಂತಹ ಕೆಲವು ವಚನಗಳನ್ನು ಈಗ ಗಮನಿಸು.

**1.ಅ.ಕೃ.16:25** :– "ಮಧ್ಯರಾತ್ರಿಯಲ್ಲಿ ಪೌಲನು, ಸೀಲನು, ಪ್ರಾರ್ಥನೆ ಮಾಡುವ ವರಾಗಿ ದೇವರಿಗೆ ಸ್ತುತಿಪದಗಳನ್ನು ಹಾಡುತ್ತಿದ್ದರು".

**2.ರೋಮಾ15:9** :– "ಈ ಕಾರಣದಿಂದ ಅನ್ಯಜನಗಳ ಮಧ್ಯದಲ್ಲಿ ನಿನ್ನನ್ನು ಸ್ತುತಿಸುವೆನು; ನಿನ್ನ ನಾಮವನ್ನು ಸಂಕೀರ್ತಿಸುವೆನು".

**3.1ಕೊರಿಂಥ14:15** :– "ಹಾಗಾದರೇನು? ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು, ಬುದ್ಧಿಯಿಂದಲೂ ಹಾಡುವೆನು."

**4.ಎಫೆಸ5:19** :– "ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ".

**5.ಕೊಲೊಸ್ಸೆ3:16** :– "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ, ಬುದ್ಧಿಹೇಳಿಕೊಳ್ಳಿರಿ; ಕರ್ತನ ಕೃಪೆಯನ್ನು ನೆನಸಿಕೊಳ್ಳುವವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ".

**6.ಇಬ್ರಿಯ2:12** :– "ನಿನ್ನ ನಾಮ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು; ಸಭಾ ಮಧ್ಯದಲ್ಲಿ ನಿನಗೆ ಸ್ತುತಿಪದಗಳನ್ನು ಹಾಡುವೆನು"

**7.ಯಾಕೋಬ5:13** :– "ನಿಮ್ಮಲ್ಲಿ ಬಾಧೆಪಡುವವನು ಇದ್ದಾನೋ? ಅವನು ದೇವರನ್ನು ಪ್ರಾರ್ಥಿಸಲಿ. ನಿಮ್ಮಲ್ಲಿ ಸಂತೋಷ ಪಡುವವನಿದ್ದಾನೋ? ಅವನು ಕೀರ್ತನೆ ಹಾಡಲಿ".

ಮೇಲೆ ಹೇಳಿದ ವಚನಗಳಲ್ಲಿ ವಾದ್ಯಗಳನ್ನು ಕುರಿತು ಏನೂ ಹೇಳಿಲ್ಲ ಎಂಬುದನ್ನು ದಯವಿಟ್ಟು ಗಮನಿಸು.

**ಯಾಕೆ ಹೇಳಿಲ್ಲ?**

ಇದೊಂದು ಒಳ್ಳೇ ಪ್ರಶ್ನೆ. ಈ ವಚನಗಳಲ್ಲಿ ಏನು ಹೇಳಲ್ಪಟ್ಟಿದೆಯೋ ಅದನ್ನೇ ಕರ್ತನು ತನ್ನ ಮಕ್ಕಳಾದ ಸಭೆಯವರಿಗೆ ಮಾಡಬೇಕೆಂದು ಅಪೇಕ್ಷಿಸುತ್ತಾನೆಂದು ಇದರಿಂದ ತಿಳಿಯುತ್ತದೆ. ಅದೇನೆಂದರೆ ನಾವು ಆತನನ್ನು ಆರಾಧಿಸುವಾಗ ಹಾಡುಗಳನ್ನು ಹಾಡಬೇಕು. ದೇವರು ಯಾಂತ್ರಿಕ (ವಾದ್ಯ) ಸಂಗೀತವನ್ನು ಆಜ್ಞಾಪಿಸಿಲ್ಲ. ಅದರ ವಿಷಯದಲ್ಲಿ ಲೇಖನ ಭಾಗಗಳು ಮೌನವಾಗಿರುವದರಿಂದ ಅವುಗಳನ್ನು ಉಪಯೊಗಿಸುವ ಸ್ವಾತಂತ್ರ್ಯ ನಮಗೆ ಇಲ್ಲವೆಂದು ಗೊತ್ತಾಗುತ್ತದೆ.

ಮಾನವನಿಂದ ಸೃಷ್ಟಿಯಾದ ವಾದ್ಯಗಳಿಂದ ನಾವು ದೇವರನ್ನು ಆರಾಧಿಸಬೇಕೆಂದು ನಮಗೆ ಹೇಳಿಲ್ಲ. ದೇವರ ಸೃಷ್ಟಿಯಾದ ಮನುಷ್ಯನು ಆತನನ್ನು ಆರಾಧಿಸಬೇಕೆಂದು ಕೋರುತ್ತಿದ್ದಾನೆ. ನಾವು ಹೃದಯಪೂರ್ವಕವಾಗಿ ಭಾವದಿಂದ ಕೂಡಿದ ಹಾಡುಗಳನ್ನು ಆತ್ಮದಿಂದ ಆತನನ್ನು ಆರಾಧಿಸಬೇಕೆಂದು ನಮ್ಮನ್ನು ಕೋರುತ್ತಿದ್ದಾನೆ. ಅದಕ್ಕಿಂತಲೂ ಕಡಿಮೆಯಾದದ್ದನ್ನು ಆತನು ಅಂಗೀಕರಿಸುವುದಿಲ್ಲ.

ಮೇಲೆ ಹೇಳಿದ ವಚನಗಳಲ್ಲಿ ಅನೇಕ ಪ್ರಾಮುಖ್ಯವಾದ ಸಂಗತಿಗಳನ್ನು ನೀನು ಗಮನಿಸಬಹುದು:

1. ಸುತ್ತಿಗಾನವನ್ನು ದೇವರಿಗೆ ಅರ್ಪಿಸಬೇಕು. ಸಂತೋಷ ಪಡಬೇಕಾದ್ದು ಆತನಾಗಲಿ ನೀನೂ ಅಲ್ಲ, ನಾನೂ ಅಲ್ಲ. ಅಥವಾ ಇತರರಲ್ಲ. ವಾದ್ಯ ಸಂಗೀತವನ್ನು ಉಪಯೋಗಿಸುವವರು ಅದು ಅವರಿಗೆ ಇಷ್ಟವಾಗಿರುವುದರಿಂದ ಉಪಯೋಗಿಸುತ್ತಾರೆ ಆದರೆ ಬೈಬಲ್ ಅದರ ವಿಷಯದಲ್ಲಿ ಬೋಧಿಸುತ್ತಿಲ್ಲ.

2. ಹಾಡುಗಳನ್ನು ದೇವರ ಹೆಸರಿನಲ್ಲಿ ಹಾಡಬೇಕು. ಅಂದರೆ ಆತನ ಅಧಿಕಾರ ಪ್ರಕಾರ (ಹೇಳಿದಂತೆ) ಮಾಡಬೇಕು.

3. ಪ್ರತಿಯೊಬ್ಬರು ಆತ್ಮದಿಂದ ಅಂದರೆ ವಿನಯದಿಂದ, ಭಕ್ತಿಯಿಂದ, ಯಥಾರ್ಥ ಹೃದಯದಿಂದ ಹಾಡಬೇಕು. ಪ್ರತಿಯೊಬ್ಬರು ಅರ್ಥದಿಂದ ಅಂದರೆ ಹಾಡುತ್ತಿರುವ ಹಾಡಿನ ಅರ್ಥವನ್ನು ಅದರ ಭಾವವನ್ನು ಗ್ರಹಿಸಿಕೊಂಡು ಹಾಡಬೇಕು.

4. ಗೀತೆಗಳು, ಕೀರ್ತನೆಗಳು, ಆತ್ಮಸಂಬಂಧವಾದ ಪದ್ಯಗಳನ್ನು ಉಪಯೋಗಿಸಬಹುದು. ವಿಧ ವಿಧವಾದ ಹಾಡುಗಳಿರಬಹುದು ಆದರೆ ಅವುಗಳೆಲ್ಲವೂ ವಾಕ್ಯನುಸಾರವಾಗಿ ಇರುವ ಆತ್ಮೀಯ ಹಾಡುಗಳಾಗಿರಬೇಕು.

5. ಈ ಹಾಡುಗಳಿಂದ ಒಬ್ಬರಿಗೊಬ್ಬರು ಉಪದೇಶ ಮಾಡುವಂತಿರಬೇಕು; ಅಂದರೆ ಪ್ರತಿ ಹಾಡಿನಲ್ಲಿ ಒಂದು ಸಂದೇಶವಿರಬೇಕು. ಅದ್ದರಿಂದ ಈ ಆರಾಧನೆ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರು ಪಾಲುಗಾರರಾಗುವದು ಬಹಳ ಪ್ರಾಮುಖ್ಯ.

6. ದೇವರನ್ನು ಕುರಿತು ಹೃದಯದಲ್ಲಿ ಗಾನಮಾಡಬೇಕು. ನಮ್ಮ ಧ್ವನಿ ಪೆಟ್ಟಿಗೆಯಿಂದ ಸ್ವರವು ಬಂದಾಗ ನಮ್ಮ ಹೃದಯದಲ್ಲಿ ಅಥವಾ ಮನಸ್ಸಿನಲ್ಲಿ ಗಾನಮಾಡಬೇಕು.

7. ಸಭೆಯವರೆಲ್ಲಾ ಸೇರಿ ಹಾಡಬೇಕು. ಎಲ್ಲರು ಸೇರಿ ಒಂದೇ ಸ್ವರದಿಂದ ಲಯಬದ್ಧವಾಗಿ ಹಾಡಬೇಕು.

ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನ ಬರಹವನ್ನು ಮನಸ್ಸಿನಲ್ಲಿ ಇಟ್ಟುಕೊ "ಆದದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸರ್ಮಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ" (ಇಬ್ರಿಯ 13:15). ವಾದ್ಯ ಸಂಗೀತವನ್ನು ಉಪಯೋಗಿಸುವವರು ಅನೇಕ ರೀತಿಯಲ್ಲಿ ವಾದಿಸುತ್ತಾರೆ ಆದರೆ ಅವರ ವಾದದಲ್ಲಿ ಯಾವದು ಬೈಬಲಿನ ಮುಂದೆ ನಿಲ್ಲದು. ಪ್ರತಿಯೊಬ್ಬರು ತಮಗೆ ಇಷ್ಟಬಂದಂತೆ ಆರಾಧಿಸಬಹುದು ಎಂದು ಅವರು ವಾದಿಸುವದರಲ್ಲಿ ಅವರ ಬಳಿಯಲ್ಲಿರುವ ಬಲವನ್ನೆಲ್ಲಾ ಕಳೆದುಕೊಳ್ಳುತ್ತಾರೆ. ವಾದ್ಯಗಳಿಲ್ಲದೇಯೂ ಸಹ ದೇವರನ್ನು ಆರಾಧಿಸಬಹುದೆಂದು ಅವರು ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ಒಬ್ಬನು ವಾದ್ಯಗಳಿಲ್ಲದೆ ಆರಾಧಿಸಬಹುದಾದರೆ ವಾದ್ಯಗಳನ್ನು ಯಾಕೆ ಬಿಡಬಾರದು? ಹಾಗೆ ಮಾಡಿ ಈ ಅಂಶದ ಮೇಲೆ ವಿಭಜನೆ ಇಲ್ಲದಂತೆ ಯಾಕೆ ಪ್ರಯತ್ನಿಸಬಾರದು?

ದೇವರನ್ನು ಆರಾಧಿಸುವುದರಲ್ಲಿ ವಾದ್ಯಗಳಿಗೆ ಯಾವ ಅವಕಾಶವು ಇಲ್ಲವೆಂದು ಅನೇಕ ಮತಶಾಖೆಗಳವರ ನಾಯಕರಾದ ಮಾರ್ಟಿನ್ ಲೂಥರ್, ಜಾನ್‌ವೆಸ್ಲಿ, ಮೊದಲಾದವರು ಬಹಿರಂಗವಾಗಿ ಪ್ರಕಟಿಸಿದರು. ಈ ಅಂಶದ ಮೇಲೆ ಬೈಬಲ್ ಏನು ಹೇಳುತ್ತದೆ ಎಂಬುದನ್ನು ಇಂದಿನ ಮತಶಾಖೆಗಳ ಪ್ರಪಂಚ ಕೇಳದೇ ಹೋದರು ಕನಿಷ್ಟಪಕ್ಷ ಅವರ ಮತಶಾಖ ಅಧಿಕಾರಿಗಳು ವಾದ್ಯಗಳನ್ನು ಕುರಿತು ಏನು ಹೇಳಿದ್ದಾರೋ ಎಂದು ಕೇಳಬಹುದಲ್ಲವೆ?

ಆದ್ದರಿಂದ ಸಭೆಯ ಸಂಗೀತ, ಗಾತ್ರ ಸಂಗೀತ ಮಾತ್ರವೇ (Vocal Music). ದೇವರು ಮಾತಾಡಿದನು, ಆತನು ಅಪೇಕ್ಷಿಸುವುದು ಯಾವುದೆಂದು ಪ್ರಕಟಿಸಿದ್ದಾನೆ. ಇದಲ್ಲದೆ ಬೇರೊಂದು ನಿರ್ಣಯಕ್ಕೆ ನಾವು ಬರಲಾರೆವು. ಈ ಅಂಶದ ಮೇಲೆ ನಾವು ಆತನ ವಾಕ್ಯಕ್ಕೆ ಸೇರಿಸುವುದಾಗಲ್ಲಿ, ತೆಗೆದು ಹಾಕುವುದಾಗಲಿ, ಅಥವಾ ಅದನ್ನು ಬದಲಾಯಿಸುವುದಾಗಲಿ ಮಾಡಬಾರದೆಂದು ಕರ್ತನು ನಮ್ಮನು ಎಚ್ಚರಿಸಿದ್ದಾನೆ (ಪ್ರಕಟಣೆ 22:18,19; ಗಲಾತ್ಯ 1:6–9). ನಾವು ದೇವರ ವಾಕ್ಯಗಳನ್ನು ಅತಿಕ್ರಮಿಸಬಾರದು (2ಯೋಹಾನ :9). ಆದ್ದರಿಂದ ದೇವರು ಆರಾಧನೆಯಲ್ಲಿ ಯಾವುದನ್ನು ಕೋರುತ್ತಿದ್ದಾನೋ ಅದನ್ನೇ ನೆರವೇರಿಸುವುದರಲ್ಲಿ ತೃಪ್ತಿಪಡಬೇಕು.

## ಪಾಠ – 14

# ಸಭೆಯ ಅಸ್ತಿವಾರ (ಬುನಾದಿ)

# (Foundation of the Church)

ಈ ಪಾಠದಲ್ಲಿ ನಾವು ಸಭೆಯ ಅಸ್ತಿವಾರವನ್ನು ಕುರಿತು ಆಲೋಚಿಸೋಣ. ಅದು ಆತ್ಮೀಯ ಮಂದಿರವಾಗಿದ್ದರೂ ಎಲ್ಲಾದರಂತೆ ಅದು ಸಹ ಒಂದರ ಮೇಲೆ ನಿರ್ಮಿಸಲ್ಪಟ್ಟಿದೆ. ಅದು ಯಾವುದು? ಅದು ಮನುಷ್ಯನ? ಮಾನುಷ್ಯ ಸಿದ್ಧಾಂತಗಳ? ಅಪೊಸ್ತಲರ ಅಥವಾ ಕ್ರಿಸ್ತನ? ಯಾವುದರ ಬಲವಾದರೂ ಅದರ ಅಸ್ತಿವಾರದ ಮೇಲೆ ಆಧಾರಪಟ್ಟಿರುವುದರಿಂದ ಈ ಪ್ರಶ್ನೆಗೆ ನಾವು ಉತ್ತರ ಕಂಡುಕೊಳ್ಳುವದು ಅವಶ್ಯಕ.

ಮೊದಲು ನಾವು ಹಳೆ ಒಡಂಬಡಿಕೆಯ ಕೆಲವು ವಚನಗಳನ್ನು ಗಮನಿಸೋಣ: ದಾವೀದನು ಹೀಗೆಂದನು "ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು" (ಕೀರ್ತನೆ 118:22). "ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ ಇಗೋ, ಪರೀಕ್ಷಿತವಾಗಿಯೂ ಮಾನ್ಯವಾಗಿಯೂ ಇರುವ ಮೂಲೆಗಲ್ಲನ್ನು ಚೀಯೋನಿನಲ್ಲಿ ಸ್ಥಿರವಾದ ಅಸ್ತಿವಾರವನ್ನಾಗಿ ಇಡುತ್ತೇನೆ; ಭರವಸವಿಡುವವನು ಆತುರಪಡನು" (ಯೆಶಾಯ 28:16). ಈಗ ನಾವು ಮತ್ತಾಯನ ಸುವಾರ್ತೆಯಲ್ಲಿ ನೋಡಿದಾಗ ಹೀಗೆ ಕಾಣಿಸುತ್ತದೆ: "ಯೇಸು ಅವರಿಗೆ ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು; ಇದು ಕರ್ತನಿಂದಲೇ ಆಯಿತು; ನಮಗೆ ಆಶ್ಚರ್ಯವಾಗಿ ತೋರುತ್ತದೆ ಎಂಬ ಮಾತನ್ನು ನೀವು ಶಾಸ್ತ್ರದಲ್ಲಿ ಓದಲಿಲ್ಲವೋ?" (ಮತ್ತಾಯ 21:42). ಇದಕ್ಕೆ ಸಮಾಂತರವಾಗಿ ಇರುವ ಮಾರ್ಕ 12:10, ಲೂಕ 20:11 ಅನ್ನು ಸಹ ಓದಿ.

ಪೌಲನು ಹೀಗೆ ಬರೆದನು "ಆದರೆ ಇಸ್ರಾಯೇಲರು ನೀತಿಯನ್ನು ದೊರಕಿಸುವ ಧರ್ಮವನ್ನು ಹಿಡಿಯಬೇಕೆಂದು ಪ್ರಯತ್ನಿಸಿದರೂ ಆ ಧರ್ಮವನ್ನು ಹಿಡಿಯಲಾರದೆ ಹೋದರೆಂದು ಹೇಳಬೇಕು. ಅದಕ್ಕೆ ಕಾರಣವೇನು? ಅವರು ನಂಬಿಕೆಯನ್ನು ಆಧಾರಮಾಡಿಕೊಳ್ಳದೆ ನೇಮನಿಷ್ಠೆಗಳನ್ನು ಆಧಾರ ಮಾಡಿಕೊಂಡದ್ದೇ ಕಾರಣ. ಇಗೋ, ಚೀಯೋನಿನಲ್ಲಿ ಎಡವುವ ಕಲ್ಲನ್ನೂ ಮುಗ್ಗರಿಸುವ ಬಂಡೆಯನ್ನೂ ಇಡುತ್ತೇನೆಂತಲೂ ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವುದಿಲ್ಲವೆಂತಲೂ ಶಾಸ್ತ್ರದಲ್ಲಿ ಬರೆದದೆಯಲ್ಲಾ. ಆ ಎಡವುವ ಕಲ್ಲಿಗೆ

ಅವರು ಎಡವಿಬಿದ್ದರು" (ರೋಮಾ 9:31–33). ಪೇತ್ರನು ಹೀಗೆ ಹೇಳಿದ್ದಾನೆ "ಆದಕಾರಣ ಎಲ್ಲಾ ಕೆಟ್ಟತನವನ್ನೂ ಎಲ್ಲಾ ವಂಚನೆಯನ್ನೂ ಕಪಟವನ್ನೂ ಹೊಟ್ಟೆಕಿಚ್ಚನ್ನೂ ಎಲ್ಲಾತರದ ನಿಂದೆಯನ್ನೂ ವಿಸರ್ಜಿಸಿ ಹಸು ಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ; ಕರ್ತನು ದಯಾಳುವೆಂದು ನೀವು ಅನುಭವದಿಂದ ತಿಳಿದುಕೊಂಡಿದ್ದೀರಲ್ಲವೋ ನೀವು ಜೀವವುಳ್ಳ ಕಲ್ಲಾಗಿರುವ ಆತನನ್ನು ಸೇರಿಕೊಂಡಿದ್ದೀರಿ. ಆ ಕಲ್ಲನ್ನು ಮನುಷ್ಯರು ನಿರಾಕರಿಸಿದರೂ ದೇವರು ಅದನ್ನು ಆಯಲ್ಪಟ್ಟದ್ದೂ ಮಾನ್ಯವಾದದ್ದೂ ಎಂದು ಎಣಿಸಿದನು. ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದಿರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವುದಕ್ಕೆ ಪವಿತ್ರ ಯಾಜಕ ವರ್ಗದವರಾಗಿದ್ದೀರಿ. ಇಗೋ ಚಿಯೋನಿನಲ್ಲಿ ಮೂಲೆಗಲ್ಲನ್ನು ಇಡುತ್ತೇನೆ; ಅದು ಆಯಲ್ಪಟ್ಟದ್ದು, ಮಾನ್ಯವಾದದ್ದು; ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವುದೇ ಇಲ್ಲ" (ಪೇತ್ರ 2:1–6).

ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಹೀಗೆ ನುಡಿಯುತ್ತಿದ್ದಾನೆ "ಮನೆಗಿಂತ ಮನೆಕಟ್ಟಿದವನಿಗೆ ಹೆಚ್ಚಾದ ಮಾನವಿರುವುದರಿಂದ ಮೋಶೆಗಿಂತ ಯೇಸು ಹೆಚ್ಚಾದ ಮಾನಕ್ಕೆ ಯೋಗ್ಯನೆಂದೆಣಿಸಲ್ಪಟ್ಟಿದ್ದಾನೆ. ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು; ಸಮಸ್ತವನ್ನು ಕಟ್ಟಿದಾತನು ದೇವರೇ. ಮೋಶೆಯು ಸೇವಕನಾಗಿ ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದನು; ಅವನು ಮುಂದೆ ಪ್ರಕಟವಾಗಬೇಕಾಗಿದ್ದ ಸಂಗತಿಗಳಿಗೆ ಸಾಕ್ಷಿಯಾಗಿದ್ದನು. ಕ್ರಿಸ್ತನಾದರೋ ಮಗನಾಗಿ ದೇವರ ಮನೆಯ ಮೇಲೆ ಅಧಿಕಾರಿಯಾಗಿದ್ದಾನೆ; ನಾವು ನಮ್ಮ ಧೈರ್ಯವನ್ನೂ ನಮ್ಮ ನೀರಿಕ್ಷೆಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ಧೃಡವಾಗಿ ಹಿಡಿದುಕೊಂಡವರಾದರೆ ನಾವೇ ದೇವರ ಮನೆಯವರು" (ಇಬ್ರಿಯ 3:3–6). ಆ ಮನೆಯೇ ಸಭೆ ಎಂದು ಪೌಲನು ಹೇಳುತ್ತಿದ್ದಾನೆ. ಆತನು ಹೀಗೆ ಹೇಳುತ್ತಾನೆ "ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ" (1ತಿಮೊಥೆ 3:15). ಸಭೆಯಾದ ಈ ಮನೆಯನ್ನು ಕುರಿತು "ಯೆಹೋವನು ಮನೆ ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ" ಎಂಬ ವಿಷಯವನ್ನು ಜ್ಞಾಪಕದಲ್ಲಿಟ್ಟುಕೋ (ಕೀರ್ತನೆ 127:1).

ಸಭೆಯು ಯಾವುದರ ಮೇಲೆ ನಿರ್ಮಾಣವಾಗಿದೆಯೋ ಆ ಕಲ್ಲನು ಕುರಿತು ನಾವು ಓದಿದ ನಂತರ, ನಾವು ಸಹಜವಾಗಿ ಅದು ಯಾವ ಅಸ್ತಿವಾರ ಎಂದು ಕೇಳಬಹುದು? ನಮಗೆ ಸಂಶಯವಿಲ್ಲದೇ ದೇವರ ವಾಕ್ಯಗಳು ಇದನ್ನು ವಿವರವಾಗಿ ಉತ್ತರಿಸುತ್ತವೆ. ಕೊರಿಂಥದಲ್ಲಿರುವ ಸಭೆಗೆ ಹೇಳುತ್ತಾ ಪೌಲನು ಹೀಗೆಂದನು: "ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವು ದೇವರ ಕಟ್ಟಡವು ಆಗಿದ್ದೀರಿ. ದೇವರು ನನಗೆ ಕೃಪೆಯಿಂದ ಒಪ್ಪಿಸಿದ ಕೆಲಸವನ್ನು ನಾನು ಪ್ರವೀಣಶಿಲ್ಪಿಯಂತೆ ಅಸ್ತಿವಾರ ಹಾಕಿದೆನು, ಮತ್ತೊಬ್ಬನು ಅದರ ಮೇಲೆ ಕಟ್ಟುತ್ತಾನೆ. ಪ್ರತಿಯೊಬ್ಬನು ತಾನು ಅದರ ಮೇಲೆ ಎಂಥದ್ದನ್ನು ಕಟ್ಟುತ್ತಾನೋ ಎಚ್ಚರಿಕೆಯಾಗಿರಬೇಕು, ಹಾಕಿರುವ ಅಸ್ತಿವಾರವು ಯೇಸು ಕ್ರಿಸ್ತನೇ; ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ" (1ಕೊರಿಂಥ 3:9–11). ಈ ಸಹೋದರರಿಗೆ ಈತನು ಬರೆಯುತ್ತಾ ಇಸ್ರಾಯೇಲರು ಸಹ ಅವರೆಲ್ಲರೂ ದೈವಿಕವಾದ ಒಂದೇ ಆಹಾರವನ್ನು ತಿಂದರು, ಅವರೆಲ್ಲರೂ ದೈವಿಕವಾದ ಒಂದೇ ನೀರನ್ನು ಕುಡಿದರು; ಅದು ಯೇಸು ಕ್ರಿಸ್ತನೇ ಎಂದು ಆತನು ತಿಳಿಸಿದನು. "ಹೇಗೆಂದರೆ ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು; ಆ ಬಂಡೆ ಕ್ರಿಸ್ತನೇ" (1ಕೊರಿಂಥ 10:3,4).

ಈ ಸಂಗತಿ ತಿಳಿದ ನಂತರ, ಯೇಸು ತನ್ನ ಸಭೆಯನ್ನು ಕಟ್ಟುವೆನು ಎಂದು ವಾಗ್ದಾನವನ್ನು ನಾವು ಸಂಪೂರ್ಣವಾಗಿ ಗ್ರಹಿಸಿಕೊಳ್ಳಬಹುದು. ಪೇತ್ರನಿಗೂ, ಉಳಿದ ಅಪೊಸ್ತಲರಿಗೂ, ಆತನೇ ಜೀವಸ್ವರೂಪನಾದ ದೇವರ ಮಗನಾದ ಕ್ರಿಸ್ತನೆಂದು ಅವರು ಒಪ್ಪಿಕೊಂಡ ನಂತರ, ಯೇಸು ಹೀಗೆ ಹೇಳಿದನು; "ಅದಕ್ಕೆ ಯೇಸು– ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು. ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳಿತ್ತೇನೆ, ಅದೇನೆಂದರೆ– ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:17,18). ಆ ಬಂಡೆ ಕ್ರಿಸ್ತನೇ ಎಂದು, ಆತನು ಸ್ಥಿರವಾದ ಅಸ್ಥಿವಾರವೆಂದು ನಾವು ತಿಳಿದುಕೊಳ್ಳುವುದಾದರೆ, ನಿಜಕ್ಕೂ ಸಭೆಯನ್ನು ಆತನ ಮೇಲೆ ಅಥವಾ ಪೇತ್ರನು ಒಪ್ಪಿಕೊಂಡ ರೀತಿಯಾಗಿ ಆತನು ದೇವ ಕುಮಾರನಾಗಿದ್ದಾನೆಂಬ ಮಹಾ ಸತ್ಯದ ಮೇಲೆ ನಿರ್ಮಿಸಲಿಕ್ಕಿದ್ದಾನೆ ಎಂದು ತಿಳಿದುಕೊಳ್ಳಬಹುದು. ಪೇತ್ರನು ಒಬ್ಬ ದೊಡ್ಡ ನಾಯಕನಾಗಿದ್ದರೂ ಕರ್ತನ

ಸಭೆಯನ್ನು ಆತನ ಮೇಲಾಗಲಿ ಅಥವಾ ಮತ್ತೊಬ್ಬ ಮನುಷ್ಯನ ಮೇಲಾಗಲಿ ನಿರ್ಮಿಸಲ್ಲಿಲ. ಆತನು ಹಾಗೆ ಮಾಡಿದ್ದೇ ಆದರೆ ಪೇತ್ರನು ಬಿದ್ದುಹೋದಾಗ, ಸಭೆಯು ಸಹ ಬಿದ್ದುಹೋಗುವುದು ಆದರೆ ಸಭೆಯು ಈ ಯಾವುದಕ್ಕೂ ಅವಕಾಶ ಕೊಡದೆ ಬಿದ್ದುಹೋಗದ ಕ್ರಿಸ್ತನ ಅಸ್ತಿವಾರದ (ಬುನಾದಿ) ಮೇಲೆ ನಿರ್ಮಿಸಲ್ಪಟ್ಟಿದೆ, ಅದು ಇಂದಿಗೂ ಕ್ರಿಸ್ತನ ಮೇಲೆ ಆಧಾರಗೊಂಡಿದೆ.

ಚಿಯೋನಿನಲ್ಲಿ ಅಂದರೆ ಯೆರೂಸಲೇಮಿನಲ್ಲಿ ಮುಖ್ಯವಾದ ಮೂಲೆಗಲ್ಲು ಇಡುತ್ತೇನೆ ಎಂದು ಹೇಳಿದ ಪ್ರವಾದನೆಯನ್ನು ನಾವು ಮೊದಲೇ ಓದಿದ್ದೇವೆ. ಇದಕ್ಕೆ ಮೊದಲು ಓದಿದ ಪಾಠದಲ್ಲಿ ಸಭೆಯು ಯೆರೂಸಲೇಮಿನಲ್ಲಿ ಹೇಗೆ ಪ್ರಾರಂಭವಾಯಿತೆಂದು ತಿಳಿದುಕೊಂಡೆವು (ಅ.ಕೃ.2). ಅದರ ನಂತರ ಪೇತ್ರನು ಯೆರೂಸಲೇಮಿನ ನಾಯಕರೊಂದಿಗೆ ಮಾತನಾಡುತ್ತಾ ಆ ಮೂಲೆಗಲ್ಲು ಕ್ರಿಸ್ತನೇ ಎಂದು ಹೇಳಿ ಹೀಗೆಂದನು "ಇಸ್ರಾಯೇಲ್ ಜನರೆಲ್ಲರಿಗೂ ತಿಳಿಯಬೇಕಾ ದದ್ದೇನೆಂದರೆ– ನೀವು ಶಿಲುಬೆಗೆ ಹಾಕಿಸಿದಂಥ ಮತ್ತು ದೇವರು ಸತ್ತವರೊಳಗಿಂದ ಎಬ್ಬಿಸಿದಂಥ ನಜರೇತಿನ ಯೇಸು ಕ್ರಿಸ್ತನ ಹೆಸರಿನಿಂದಲೇ ಈ ಮನುಷ್ಯನು ನಿಮ್ಮೆದುರಿನಲ್ಲಿ ಸ್ವಸ್ಥನಾಗಿ ನಿಂತಿರುತ್ತಾನೆ. ಮನೆ ಕಟ್ಟುವವರಾದ ನೀವು ಹೀನೈಸಿದ ಕಲ್ಲು ಆತನು; ಆತನೇ ಮುಖ್ಯವಾದ ಮೂಲ್ಲೆಗಲ್ಲಾದನು. ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ ಎಂದು ಹೇಳಿದನು" (ಅ.ಕೃ.4:10–12). ಕ್ರಿಸ್ತನು ಅಸ್ತಿವಾರ ಮಾತ್ರವಲ್ಲದೇ ಅತೀ ಪ್ರಾಮುಖ್ಯವಾದ ಮೂಲೆಗಲ್ಲು ಆಗಿದ್ದಾನೆ ಎಂದು ಪೇತ್ರನು ಹೇಳುವದನ್ನು ಗಮನಿಸು. ದೇವರ ಮಂದಿರವಾದ ಸಭೆಗೆ ಮುಖ್ಯವಾದ ಮೂಲೆಗಲ್ಲಾಗಿ ಕ್ರಿಸ್ತನು ಇರಲು, ಪ್ರವಾದಿಗಳು, ಅಪೊಸ್ತಲರು, ಅವರು ಮಾಡಿದ ಬೋಧನೆಗಳಿಂದ ಆ ಅಸ್ತಿವಾರದಲ್ಲಿ ಹೇಗೆ ಪಾಲುಗಾರರಾಗಿದ್ದಾರೋ ಪೌಲನು ಹೇಳಿದ್ದಾನೆ: "ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ, ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು; ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ

ನೀವು ಸಹ ದೇವರಿಗೆ ನಿವಾಸಸ್ಥಾನವಾಗುವುದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:19–22).

ಸರಿಯಾದ ಅಸ್ತಿವಾರದ ಪ್ರಮುಖ್ಯತೆಯನ್ನು ಒತ್ತಿ ಹೇಳುತ್ತಾ ಕ್ರಿಸ್ತನು ಹೀಗೆ ಬೋಧಿಸಿದ್ದಾನೆ: "ಆದದರಿಂದ ಈ ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು. ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಗಳಿಂದ ಗಾಳಿಬೀಸಿ ಆ ಮನೆಗೆ ಬಡಿಯಿತು. ಆದಾಗ್ಯೂ ಅದರ ಅಸ್ತಿವಾರವೂ ಬಂಡೆಯ ಮೇಲಿದ್ದದರಿಂದ ಅದು ಬೀಳಲಿಲ್ಲ. ಆದರೆ ಈ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದ ಪ್ರತಿಯೊಬ್ಬನು ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಹೀನ ಮನುಷ್ಯನನ್ನು ಹೋಲುವನು. ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಹೊಡೆಯಿತು. ಆಗ ಅದು ಧಡಮ್ಮನೆ ಕಡುಕೊಂಡು ಬಿತ್ತು" (ಮತ್ತಾಯ 7:24–27). ನೀನು ಯಾವುದರ ಮೇಲೆ ಕಟ್ಟುತ್ತಿರುವಿ? ಕರ್ತನ ಸಭೆಗೆ ಬಂಡೆಯಾದ, ಮುಖ್ಯವಾದ ಮೂಲೆಗಲ್ಲಾದ, ಅಸ್ತಿವಾರವಾದ ಕ್ರಿಸ್ತನ ಮೇಲೆ ನಿರ್ಮಿಸ ಬೇಕೆಂದುಕೊಂಡಿದ್ದರೆ ಆತನ ಮಾತುಗಳನ್ನು ಕೇಳಿ ಅವುಗಳ ಪ್ರಕಾರ ಮಾಡಬೇಕು. ನೀನು ಹಾಗೆ ಮಾಡಿದಾಗ ಕರ್ತನು ನಿನ್ನನ್ನು ರಕ್ಷಿಸಿ ತನ್ನ ಸಭೆಯಲ್ಲಿ ಸೇರಿಸಿಕೊಳ್ಳುವನು. ದೃಢವಾದ ಕ್ರಿಸ್ತಯೇಸು ಎಂಬ ಅಸ್ತಿವಾರದ ಮೇಲೆ ಆಧಾರವಾದ ಕರ್ತನ ಮನೆಯಲ್ಲಿ ನಿನ್ನನು ಬಾಧ್ಯಸ್ಥನನ್ನಾಗಿ ಮಾಡುವನು (ಮಾರ್ಕ 16:16; ಅ.ಕೃ.2:47; 1ಪೇತ್ರ 2:5).

ಪಾಠ – 15

# ಸಭೆಯ ಆತ್ಮ

## (Spirit of the Church)

ಸಭೆಯ ಸಂಬಂಧವಾಗಿ ಪವಿತ್ರಾತ್ಮನ ಕೆಲಸವನ್ನು ಕುರಿತು ಅನೇಕರು ಇಂದು ಎಡುವುತ್ತಿದ್ದಾರೆ. ಈ ಅಂಶದ ಮೇಲೆ ಬೈಬಲ್ ಏನು ಹೇಳುತ್ತದೆ ಎಂದು ಈ ಪಾಠದಲ್ಲಿ ನಾವು ನೋಡೋಣ.

ನಾವು ಹಳೆ ಒಡಂಬಡಿಕೆಯಿಂದ ಪ್ರಾರಂಭಿಸೋಣ, ಯೋವೇಲನು ಹೀಗೆ ಪ್ರವಾದಿಸಿದನು: "ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು, ನಿಮ್ಮ ಯೌವನಸ್ಥರಿಗೆ ದಿವ್ಯ ದರ್ಶನಗಳಾಗುವವು; ಇದಲ್ಲದೆ ಆ ದಿನಗಳಲ್ಲಿ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು..... ಆದರೂ ಯೆಹೋವನ ನಾಮವನ್ನು ಹೇಳಿ ಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದು; ಯೆಹೋವನು ತಿಳಿಸಿದಂತೆ ಚೀಯೋನ್ ಪರ್ವತದಲ್ಲಿಯೂ ಯೆರೂಸಲೇಮಿನಲ್ಲಿಯೂ ಅನೇಕರು ಉಳಿದಿರುವರು; ಯೆಹೋವನ ಹೆಸರು ಹೇಳಿ ಆತನಿಗೆ ಪ್ರಾರ್ಥನೆ ಮಾಡುವವರೆಲ್ಲರೂ ರಕ್ಷಿಸಲ್ಪಡುವರು" (ಯೋವೇಲ 2:28,29,32).

"ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಬಲವಾಗಿ ಬಂದಿರುವದನ್ನು ನೋಡುವ ತನಕ ಮರಣ ಹೊಂದುವದಿಲ್ಲವೆಂದು ಹೇಳಿದನು" ಎಂದು ಕ್ರಿಸ್ತನು ತನ್ನ ಶಿಷ್ಯರ ಬಳಿ ಹೇಳಿದನು (ಮಾರ್ಕ 9:1). ಅಲ್ಲಿಯವರೆಗೂ ಅತಿ ಬೇಗನೆ ಸ್ಥಾಪಿಸಲ್ಪಡುತ್ತಿರುವ ಸಭೆಯೇ ಇಲ್ಲಿ ಹೇಳುತ್ತಿರುವ ರಾಜ್ಯವಾಗಿದೆ (ಮತ್ತಾಯ 16:18,19). ಅದು ಬಲದೊಂದಿಗೆ ಅಥವಾ ಪವಿತ್ರಾತ್ಮನ ಬಲದ ನಡೆಸುವಿಕೆಯಿಂದ ಬರುತ್ತದೆ ಎಂಬ ಸಂಗತಿಯನ್ನು ನೀನು ಸಹ ಗಮನಿಸು.

ತಾನು ಅತಿ ಬೇಗನೆ ಪರಲೋಕಕ್ಕೆ ಆರೋಹಣ ಆಗುವೆನೆಂದು ಕ್ರಿಸ್ತನಿಗೆ ತಿಳಿದಿತ್ತು. ಕ್ರಿಸ್ತನು ವ್ಯಯಕ್ತಿಕವಾಗಿ ಅಪೊಸ್ತಲನ್ನು ಆರಿಸಿಕೊಂಡು ಅವರಿಗೆ ಅನೇಕ ಸಂಗತಿಗಳನ್ನು ಬೋಧಿಸಿ, ತರಬೇತಿ ಕೊಟ್ಟರು ಸ್ವಲ್ಪ ಮುಂದಾಳತ್ವ ನಡೆಸುವವರು ಇಲ್ಲದೇ ಅವರು ಅನೇಕ ಸಂಗತಿಗಳನ್ನು ಮರೆತುಹೋಗಿ ತಾವು ಮಾಡಬೇಕಿದ್ದ

ಕೆಲಸವನ್ನು ಮಾಡಲಾರರು ಎಂದು ಕ್ರಿಸ್ತನು ತಿಳಿದಿದ್ದನು. ಆದ್ದರಿಂದ ಆತನು ಸಹಾಯಕನು ಅಂದರೆ ಸತ್ಯದ ಆತ್ಮನನ್ನು(ಪವಿತ್ರಾತ್ಮನು) ಅವರ ಬಳಿಗೆ ಕಳುಹಿಸುವೆನೆಂದು, ಆತನು ಅವರನ್ನು ನಡೆಸುವುದು ಮಾತ್ರವಲ್ಲದೇ ಯೇಸು ಕ್ರಿಸ್ತನು ಏನ್ನನ್ನು ಅವರಿಗೆ ಬೋಧಿಸಿದ್ದಾನೋ ಆ ಸಂಗತಿಗಳನ್ನು ಅವರಿಗೆ ಜ್ಞಾಪಕಮಾಡುವನೆಂದು ಕ್ರಿಸ್ತನು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದನು. ಈ ಶಿಷ್ಯರು ದೇವರ ಬಳಿಯಿಂದ ಬಂದವರೆಂದು ಜನರು ನಂಬಲು, ಅವರು ಅದ್ಭುತಗಳನ್ನು ಮಾಡುವದಕ್ಕೂ, ಅವರು ಎಲ್ಲಿಗೆ ಹೋದರು ಅಲ್ಲಿನ ಜನರ ಭಾಷೆಯಲ್ಲಿ ಬೋಧಿಸಲು, ಪ್ರಕಟಿಸಲು ಪವಿತ್ರಾತ್ಮನು ಅವರಿಗೆ ಶಕ್ತಿಕೊಡುವನು. "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರರು. ನೀವು ಆತನನ್ನು ಬಲ್ಲಿರಿ; ಹೇಗಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು" ಎಂದು ಯೇಸು ಅವರಿಗೆ ಹೇಳಿದನು (ಯೋಹಾನ 14:16,17). "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳಿಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 14:26). "ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿಹೇಳುವನು. ನೀವು ಮೊದಲಿನಿಂದಲೂ ನನ್ನ ಸಂಗಡ ಇದ್ದ ಕಾರಣ ನೀವೂ ಸಾಕ್ಷಿಗಳಾಗಿದ್ದಿರಿ" (ಯೋಹಾನ 15:26,27). "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು, ಮತ್ತು ಮುಂದಾಗುವ ಸಂಗತಿಗಳನ್ನು ತಿಳಿಸುವನು" (ಯೋಹಾನ 16:13).

ಯೇಸು ಪರಲೋಕದಲ್ಲಿರುವ ತಂದೆಯ ಬಳಿಗೆ ಹೋಗುವುದಕ್ಕೆ ಮೊದಲು ತನ್ನ ಶಿಷ್ಯರನ್ನು ಸುತ್ತಲು ಸೇರಿಸಿಕೊಂಡು "ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ ಪಾಪ ಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ

ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವಂತೆಯೂ ಬರೆದದೆ. ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ. ಇಗೋ ನನ್ನ ತಂದೆ ವಾಗ್ದಾನಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದು ಕೊಂಡಿರ್ರಿ ಎಂದು ಹೇಳಿದನು" (ಲೂಕ 24:46–49). "ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು" (ಅ.ಕೃ.1:8).

ಕೊನೆಯದಾಗಿ, ಸಭೆಯ ಸ್ಥಾಪನೆಯ ಕುರಿತು ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ನಾವು ಓದಬಹುದು. ಈ ಮಾತುಗಳನ್ನು ನೋಡಿರಿ: "ಪಂಚಾಶತ್ತಮ ಹಬ್ಬದ ದಿನವು ಬಂದಿರಲಾಗಿ ಅವರೆಲ್ಲರೂ ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ಧವುಂಟಾಗಿ ಅವರು ಕೂತಿದ್ದ ಮನೆಯನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವುದಕ್ಕೆ ಪ್ರಾರಂಭಿಸಿದರು" (ಅ.ಕೃ.2:1–4). ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದ ಈ ಮನುಷ್ಯರು ಯಾರು? ಸತ್ಯದ ಆತ್ಮನನ್ನು ಯಾರ ಬಳಿಗೆ ಕಳುಹಿಸುವೆನೆಂದು ಕ್ರಿಸ್ತನು ಹೇಳಿದ್ದನು? ಹೌದು, ಅಪೊಸ್ತಲರಿಗೆ, ಅಷ್ಟೆ ಅಲ್ಲದೆ ಕ್ರಿಸ್ತನು ಮಾರ್ಕ 9:1ರಲ್ಲಿ ಹೇಳಿದ ಬಲವು ಇದೆ. ಹೇಗಂದರೆ ಆ ಬಲದಿಂದ ಅವರು ಇತರ ಭಾಷೆಗಳನ್ನು ಮಾತಾಡುವವರಾದರು. ಇಂತಹ ಆಶ್ಚರ್ಯಕರವಾದ ವಿಷಯವನ್ನು ಪೇತ್ರನು ವಿವರಿಸುತ್ತಾ "ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ. ಅದೇನಂದರೆ– ಕಡೆ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು, ನಿಮ್ಮ ಯೌವನಸ್ಥರಿಗೆ ದಿವ್ಯ ದರ್ಶನಗಳಾಗುವವು" (ಅ.ಕೃ.2:16,17).

ಆ ದಿನದಲ್ಲಿ ಪೇತ್ರನು, ಉಳಿದ ಅಪೊಸ್ತಲರು ಸೇರಿ ಜನರಿಗೆ ಸುವಾರ್ತೆಯನ್ನು ಪ್ರಕಟಿಸಲು ಪ್ರಾರಂಭಿಸಿದರು. ಅದರ ವಿಷಯದಲ್ಲಿ ಲೇಖನಗಳು ಹೀಗೆ ಹೇಳುತ್ತವೆ: "ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ಪೇತ್ರನನ್ನೂ, ಉಳಿದ ಅಪೊಸ್ತಲರನ್ನೂ-ಸಹೋದರರೇ, ನಾವೇನು ಮಾಡಬೇಕು ಎಂದು ಕೇಳಲು ಪೇತ್ರನು ಅವರಿಗೆ ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ; ಆ ವಾಗ್ದಾನವೂ ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ.....ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿ ಕೊಂಡರು. ಆ ದಿವಸ ಸುಮಾರು ಮೂರುಸಾವಿರ ಜನರು ಅವರಲ್ಲಿ ಸೇರಿದರು..... ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಳಿಗೆ ಸೇರಿಸುತ್ತಿದ್ದನು" (ಅ.ಕೃ.2:37,38,39,41,47).

ಲೇಖನಗಳನ್ನು ಓದುವುದರ ಮೂಲಕ ಅಪೊಸ್ತಲರು, ಕೊರ್ನೇಲ್ಯನ ಮನೆಯವರು ಮಾತ್ರವೇ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದ್ದಾರೆಂದು ನಾವು ಗ್ರಹಿಸಬಹುದು. ಸುವಾರ್ತೆ ಬೋಧಿಸುವುದರಲ್ಲಿ, ಉಪದೇಶಿಸುವುದರಲ್ಲಿ ನಡೆಸುವ ಅಥವಾ ಮುಂದಾಳತ್ವ ವಹಿಸುವ ನಿಮಿತ್ತ, ಕ್ರಿಸ್ತನು ವಾಗ್ದಾನ ಮಾಡಿದ ರೀತಿಯಲ್ಲಿ ಸಭೆಯು ಪ್ರಾರಂಭವಾಗುವದಕ್ಕೆ ಅಪೊಸ್ತಲರು ಆ ಪವಿತ್ರಾತ್ಮನ ಬಲದ ದೀಕ್ಷಾಸ್ನಾನವನ್ನು ಹೊಂದಿದರು ಮತ್ತು ಇತರ ಭಾಷೆಗಳಿಂದ ಮಾತಾಡಿದರು, ಅದ್ಭುತಗಳು, ಮಹತ್ಕಾರ್ಯಗಳು ಮಾಡಿದರು. ಅಲ್ಲಿಯವರೆಗೆ ಹೊಸ ಒಡಂಬಡಿಕೆ ಲಿಖಿತ ಪೂರ್ವಕವಾಗಿ ಬರೆಯಲ್ಪಟ್ಟಿರಲಿಲ್ಲ. ಆದದರಿಂದ ಅಂತಹ ಅದ್ಭುತಗಳ ಸಹಾಯು ಅವಶ್ಯವಾಯಿತು. ಕೊರ್ನೇಲ್ಯನ ಮನೆಯವರ ಸಹಿತ ಅನ್ಯಜನರಾಗಿರುವವರೆಲ್ಲರೂ ಸಹ ಯೆಹೂದ್ಯರಂತೆ ದೇವರಿಗೆ ಅಂಗೀಕಾರಕ್ಕೆ ಯೋಗ್ಯರೆಂದು ನಿರೂಪಿಸಲು ಕೊರ್ನೇಲ್ಯನ ಮನೆಯವರು ಸಹ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದರು (ಅ.ಕೃ.10:11).

ಮಾಡಬೇಕಾದ ಕೆಲಸವನ್ನೆಲ್ಲಾ ಅಪೊಸ್ತಲರೇ ಮಾಡಲಾಗುವುದಿಲ್ಲವಾದ್ದರಿಂದ ಮತ್ತೆ ಕೆಲವರು ಸಹ ಅದ್ಭುತಗಳು ಮಾಡುವಂತೆ ಅವರ ಮೇಲೆ ಅಪೊಸ್ತಲರು

ಕೈಗಳನ್ನಿಡುವ ಅಧಿಕಾರ ಹೊಂದಿದ್ದರು. ಅಂತಹ ಸಂದರ್ಭದಲ್ಲಿ ಆರಿಸಲ್ಪಟ್ಟವರು ದೀಕ್ಷಾಸ್ನಾನ ಮಾಡಿಸಿಕೊಂಡು, ಪವಿತ್ರಾತ್ಮ ದಾನವನ್ನು ಹೊಂದಿ, ಸಭೆಯ ಸದಸ್ಯರಾಗಿರುವರು, ಆದರೆ ಅಪೊಸ್ತಲರು ಅವರ ಮೇಲೆ ಕೈಗಳನ್ನಿಡುವುದರ ಮೂಲಕ ಮಾತ್ರ ಪವಿತ್ರಾತ್ಮನ ಅದ್ಭುತ ಶಕ್ತಿಯನ್ನು ಹೊಂದಿಕೊಂಡರು. ಅ.ಕೃ.6:1–3; 8:5–25 ಅನ್ನು ಓದು. ಈ ಅದ್ಭುತ ಶಕ್ತಿಯನ್ನು ಇತರರು ಹೊಂದುವಂತೆ ಅಪೊಸ್ತಲರು ಮಾತ್ರವೇ ಅವರ ಮೇಲೆ ಕೈಗಳನ್ನಿಡುವ ಅಧಿಕಾರ ಹೊಂದಿಕೊಂಡಿದ್ದರು. ಆದ್ದರಿಂದ ಅಪೊಸ್ತಲರು ಮತ್ತು ಅವರು ಕೈಗಳನ್ನು ಇಡುವುದರ ಮೂಲಕ ಹೊಂದಿಕೊಂಡವರು ಮರಣ ಹೊಂದಿರುವದರಿಂದ ಅದ್ಭುತಗಳನ್ನು ಮಾಡುವ ಕಾಲ ಗತಿಸಿಹೋಗಿದೆ; ಹೇಗಂದರೆ ಅಪ್ಪೋಕ್ತಿಗೆ ಹೊಸ ಒಡಂಬಡಿಕೆ ಸಂಪೂರ್ಣವಾಗಿ ಬರೆಯಲ್ಪಟ್ಟಿತ್ತು. ಆದದರಿಂದ ಅದ್ಭುತಗಳು, ಅನ್ಯಭಾಷೆಗಳನ್ನು ಮಾತಾಡುವದು ಮುಂತಾದವುಗಳ ಅವಶ್ಯಕತೆ ಇನ್ನು ಇಲ್ಲದೇ ಹೋಯಿತು. ಹೇಗಂದರೆ ಸತ್ಯವನ್ನು ತಿಳಿದುಕೊಳ್ಳುವ ನಿಮಿತ್ತ ಬೋಧಿಸಲ್ಪಡುವ ಸಂಗತಿಗಳು ಹೌದೊ ಅಲ್ಲವೋ ಎಂಬ ನಿರ್ಧಾರಕ್ಕೆ ಬರುವ ನಿಮಿತ್ತ ಒಬ್ಬನು ದೇವರ ವಾಕ್ಯವನ್ನು ಪರಿಶೋಧಿಸಬಹುದು (1ಕೊರಿಂಥ 13; ಯಾಕೋಬ 1:25; ಯೋಹಾನ 20:30–31).

ಸಭೆಯು ಪ್ರಾರಂಭವಾದ ದಿನದಿಂದಲೂ ಅಪೊಸ್ತಲರನ್ನು ಬಿಟ್ಟರೇ ಕರ್ತನಿಗೆ ವಿಧೇಯತೆ ತೋರಿಸಿದವರೆಲ್ಲರೂ (ದೀಕ್ಷಾಸ್ನಾನ ಹೊಂದಿದವರು) ಪವಿತ್ರಾತ್ಮನ ದಾನವನ್ನು ಹೊಂದಿದರು. ಈ ವರವನ್ನು ಹೊಂದಿದ ಯಾರಿಗೂ ಅದ್ಭುತಗಳನ್ನು ಮಾಡುವ ಶಕ್ತಿಹೊಂದಿಲ್ಲ. ಅವರು ಆತ್ಮವನ್ನು ಹೊಂದಿದರು, ಆತ್ಮನು ಅವರಲ್ಲಿ ವಾಸಮಾಡುವನು. ಆದರೆ ಆತನು ಅವರಲ್ಲಿ ಆಗಲಿ ಅಥವಾ ಅವರ ಮೂಲಕವಾಗಲಿ ಅದ್ಭುತಗಳನ್ನು ಮಾಡಲಿಲ್ಲ. ಹಾಗೆ ಮಾಡುವ ಅವಶ್ಯಕತೆಯೂ ಇಲ್ಲ. ಕ್ರೈಸ್ತವರೆಲ್ಲರೂ ಅದ್ಭುತಗಳನ್ನು ಮಾಡುವ ಶಕ್ತಿಹೊಂದಿ, ಅವರೆಲ್ಲರೂ ಲೋಕದಲ್ಲಿ ಅದ್ಭುತಗಳನ್ನು ಮಾಡುವುದಾದರೆ ಲೋಕದಲ್ಲೆಲ್ಲ ಕಳವಳವನ್ನು ನೀನು ಊಹಿಸುವೆಯಾ? ಅದರಲ್ಲಿರುವ ಶಕ್ತಿಯಿಂದ ಅನೇಕರನ್ನು ಕ್ರೈಸ್ತತ್ವಕ್ಕೆ ಆಕರ್ಷಿಸಲ್ಪಡುವರು, ಆಗ ಕ್ರಿಸ್ತನ ಬಲಿಯಾಗವು ವ್ಯರ್ಥವಾಗುತ್ತದೆ. ದೇವರ ವರವನ್ನು ಹಣವನ್ನು ಕೊಟ್ಟು ಸಂಪಾದಿಸಬೇಕೆಂದು ಪ್ರಯತ್ನಿಸಿದ ಸೀಮೋನನು ನಿನಗೆ ಜ್ಞಾಪಕದಲ್ಲಿ ಇದ್ದಾನ?

## ಸಭೆಗೆ ಪವಿತ್ರಾತ್ಮನು ಇಂದು ಹೇಗೆ ಅನ್ವಯಿಸುತ್ತಾನೆ?

ಪ್ರತಿ ಸದಸ್ಯನು ಸಹ ದೀಕ್ಷಾಸ್ನಾನ ಹೊಂದಿದವನಾಗಿರುವದರಿಂದ ಪವಿತ್ರಾತ್ಮ ದಾನವನ್ನು ಹೊಂದಿಕೊಂಡಿರುವನು. ಅನೇಕರು ಬೋಧಿಸುವ ಉಪದೇಶಕ್ಕೆ ಭಿನ್ನವಾಗಿ ಇಂದು ಪವಿತ್ರಾತ್ಮನ ದೀಕ್ಷಾಸ್ನಾನವಿಲ್ಲ. ಆದ್ದರಿಂದ ಇಂದು ಅದ್ಭುತಗಳನ್ನು ಮಾಡುವ ಶಕ್ತಿಕೊಡಲ್ಪಟ್ಟಿಲ್ಲ. ಕ್ರೈಸ್ತರು, ಸಭೆಯು ಸಹ ಆತ್ಮನ ಮಾತುಗಳ (ಹೊಸ ಒಡಂಬಡಿಕೆ) ಪ್ರಕಾರ ನಡೆಸಲ್ಪಡುತ್ತಿದ್ದಾರೆ. ಆತನ ಚಿತ್ತವು ನೇರವೇರಿಸಲ್ಪಡುತ್ತಿರುವಾಗ ನಮ್ಮ ಜೀವಿತದಲ್ಲಿ ಉಂಟಾಗುವ ಪ್ರತಿಫಲ ಆತ್ಮನ ಫಲಗಳು (ಗಲಾತ್ಯ 5:21–25). ನಾವು ದೇವರ ಮಕ್ಕಳೆಂದು ಆತ್ಮನು ತಾನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ (ರೋಮಾ 8:16). ಪೌಲನು ಇನ್ನೂ ಹೀಗೆ ಹೇಳುತ್ತಾನೆ: "ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲವಾದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ" (ರೋಮಾ 8:26).

ಕ್ರೈಸ್ತವರಂತೆ ಸಭೆಯು ಸಹ ಆತ್ಮನ ಮೂಲಕ ಜೀವವುಳ್ಳದಾಗಿದೆ. ಆದ್ದರಿಂದಲೇ: "ಆತ್ಮನೂ ಮದಲಗಿತ್ತಿಯೂ – ಬಾ ಅನ್ನುತ್ತಾರೆ. ಕೇಳುವವನು – ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" ಎಂದು ಬರೆಯಲ್ಪಟ್ಟಿದೆ (ಪ್ರಕಟನೆ 22:17).

ಪಾಠ – 16

# ಸಭೆಯ ಪವಿತ್ರತೆ
# (Purity of the Church)

ಸಿದ್ಧಾಂತದಲ್ಲಿಯೂ, ನೈತಿಕತೆಯಲ್ಲಿಯೂ ಸಭೆಯ ಪವಿತ್ರತೆಯನ್ನು ಕುರಿತು ನಾವು ಈ ಪಾಠದಲ್ಲಿ ಗಮನಿಸೋಣ: ಸಭೆಯು ಜೀವವುಳ್ಳದ್ದಾಗಿ ಪ್ರತ್ಯೇಕವಾಗಿ ಇರಬೇಕಾದರೆ ಈ ಎರಡು ಅವಶ್ಯಕವಾಗಿವೆ.

**ಮೊದಲನೆಯದಾಗಿ ಸಿದ್ಧಾಂತಪರವಾದ ಸಭೆಯ ಪವಿತ್ರತೆಯನ್ನು ಗಮನಿಸು**

ಸಭೆಯನ್ನು ಕಟ್ಟುವೆನೆಂದು ಕ್ರಿಸ್ತನು ವಾಗ್ದಾನ ಮಾಡಿದನು. ಆ ಕೆಲಸ ಸರಿಯಾಗಿ ನೇರವೇರಿಸುವುದಕ್ಕೆ ಅಪೊಸ್ತಲರನ್ನು ನಡೆಸುವುದಕ್ಕೆ ಪವಿತ್ರಾತ್ಮನನ್ನು ಕಳುಹಿಸುವೆನೆಂದು ಕ್ರಿಸ್ತನು ವಾಗ್ದಾನ ಮಾಡಿದನು (ಮತ್ತಾಯ 16;18; ಯೋಹಾನ 16:13; ಅ.ಕೃ.2). ಪ್ರವಾದಿಸಲ್ಪಟ್ಟ ರೀತಿಯಲ್ಲಿ ಕರ್ತನು ವಾಗ್ದಾನ ಮಾಡಿದಂತೆ ಸಭೆಯು ಸ್ಥಾಪಿಸಲ್ಪಟ್ಟಿತ್ತು (ಯೆಶಾಯ 2:2.3; ಯೋವೇಲ 2:28,29: ಮಾರ್ಕ 9:1). ಅಪೊಸ್ತಲರನ್ನು ಅವರು ಕೈಗಳನ್ನಿಟ್ಟು ಶಕ್ತಿಹೊಂದಿದವರನ್ನು ಹೊಸ ಒಡಂಬಡಿಕೆ ಲಿಖಿತಪೂರ್ವಕವಾಗಿ ಕೊಡುವವರೆಗೂ ಪವಿತ್ರಾತ್ಮನು ನಡೆಸಿದನು. ಅಂದಿನಿಂದಲೂ ಸಭೆಯ ಮಾರ್ಗದರ್ಶನದಂತೆ ಹೊಸ ಒಡಂಬಡಿಕೆ ಕೆಲಸ ಮಾಡುತ್ತಿದೆ (ಅ.ಕೃ.2:1–4; 6:1–6; ಯಾಕೋಬ 1:25; 2ತಿಮೊಥೆ 3:16,17). ಕರ್ತನಿಗೆ ವಿಧೇಯರಾಗುವುದರಲ್ಲಿ ಆ ಮಾದರಿಯನ್ನು ಅನುಸರಿಸುವವರೇ ಕ್ರಿಸ್ತನ ಸಭೆಯಾಗಿದ್ದಾರೆ. ಅವರು ತಮ್ಮ ಆಚರಣೆಯಲ್ಲಿಯೂ ಬೋಧನೆಯಲ್ಲಿಯೂ ಅದನ್ನು ಮಾತ್ರವೇ ಅನುಸರಿಸಿ ನಡೆದುಕೊಂಡ ಕಾಲವೆಲ್ಲಾ, ಕರ್ತನು ತನ್ನ ಪ್ರಜೆಗಳಿಂದ ಎಂತಹ ಪವಿತ್ರತೆಯನ್ನು ಆಶಿಸುತ್ತಾನೋ ಅಂತಹ ಪವಿತ್ರತೆಯನ್ನು ಅವರು ಹೊಂದಿಕೊಂಡಿರುವರು.

ಸಭೆಯು ಸ್ಥಾಪಿಸಲ್ಪಟ್ಟ ಕೂಡಲೇ "ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿಮುರಿಯುವದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅ.ಕೃ. 2:42). ಅಂದರೆ ಅವರು ಅಪೊಸ್ತಲರ ಬೋಧನೆಯಲ್ಲಿ ಸ್ಥಿರವಾಗಿದ್ದರು. ಕ್ರಿಸ್ತನು ಅವರಿಗೆ ಬೋಧಿಸಿದ ಬೋಧನೆಯನ್ನು ಅಪೊಸ್ತಲರು ಬೋಧಿಸಬೇಕೆಂಬ ಅಪ್ಪಣೆಯನ್ನು ಹೊಂದಿದ್ದರು (ಮತ್ತಾಯ 28:19,20). ಉಪದೇಶದ,

ಸಿದ್ಧಾಂತದ(ಬೋಧನೆ) ಆರಂಭದ ಸ್ಥಾವರವನ್ನು ಪರಿಶೋಧಿಸಿ ಕಂಡುಕೊಂಡರೆ ಅದರ ಪವಿತ್ರತೆ ಸಾಧ್ಯವಾಗುತ್ತದೆ. ಅಪೊಸ್ತಲರು ಎಲ್ಲಾ ದೇಶಗಳ ಜನರಿಗೆ ಬೋಧಿಸಿ, ದೀಕ್ಷಾಸ್ನಾನ ಮಾಡಿಸಿ, ಯೇಸು ಅವರಿಗೆ ಯಾವ ಸಂಗತಿಗಳನ್ನು ಆಜ್ಞಾಪಿಸಿದ್ದಾನೋ ಆ ಸಂಗತಿಗಳನ್ನು ಅವರೂ ಕೈಗೊಳ್ಳಬೇಕೆಂದು ಬೋಧಿಸಿ ಎಂದು ಆತನು ಅವರಿಗೆ ಹೇಳಿದನು. ಪೌಲನು ಹೀಗೆ ಹೇಳಿದ್ದಾನೆ: "ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು (2ತಿಮೊಥೆ 2:2).

ಸ್ವಸ್ಥಬೋಧನೆಯನ್ನು ಬೋಧಿಸುವುದು ಬಹಳ ಪ್ರಾಮುಖ್ಯವೆಂದು ಹೇಳಲಾಗಿದೆ. ಪೌಲನು ಹೀಗೆ ಬರೆದಿದ್ದಾನೆ: "ತಾನು ಸ್ವಸ್ಥಬೋಧನೆಯಿಂದ ಜನರನ್ನು ಎಚ್ಚರಿಸುವುದಕ್ಕೂ ಎದುರಿಸುವವರ ಬಾಯಿಕಟ್ಟುವದಕ್ಕೂ ಶಕ್ತನಾಗಿರುವಂತೆ ಕ್ರಿಸ್ತನ ಬೋಧನಾನುಸಾರವಾದ ನಂಬತಕ್ಕ ವಾಕ್ಯವನ್ನು ಧೃಡವಾಗಿ ಹಿಡಿದುಕೊಂಡವನಾಗಿರಬೇಕು" (ತೀತ 1:9). "ನೀನಾದರೋ ಸ್ವಸ್ಥಬೋಧನೆಗೆ ಅನುಗುಣವಾಗಿ ಉಪದೇಶಮಾಡು" (ತೀತ 2:1). ಎಂದು ಆತನು ಮತ್ತೆ ಹೇಳಿದ್ದಾನೆ. ತಿಮೊಥೆಗೆ ಬರೆಯುತ್ತಾ ಹೀಗೆ ಎಚ್ಚರಿಸಿದ್ದಾನೆ: "ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯತೀರಿಸುವುದಕ್ಕೆ ಕ್ರಿಸ್ತಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯೂ ಆಣೆಯಿಟ್ಟು ನಾನು ನಿನಗೆ ಖಂಡಿತವಾಗಿ ಹೇಳುವುದೇನೆಂದರೆ– ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ, ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು (2ತಿಮೊಥೆ 4:1,2). "ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ ಕಾರ್ಯಗಳಲ್ಲಿ ನಿರತನಾಗಿರು; ಹೀಗಿರುವುದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ" (1ತಿಮೊಥೆ 4:16). ಮೊದಲ ಶತಮಾನದಲ್ಲಿರುವ ಕ್ರೈಸ್ತರಿಗೆ ಈ ಎಚ್ಚರಿಕೆ ಮಾತುಗಳು ಹೇಗೆ ಅನ್ವಯಿಸುತ್ತವೆಯೋ ಹಾಗೆಯೇ ಇವುಗಳು ನಮಗೂ ಅನ್ವಯಿಸುತ್ತವೆ.

ದೇವರ ವಾಕ್ಯಗಳಿಗೆ ನಾವು ಸೇರಿಸುವುದು, ತೆಗೆದು ಹಾಕುವುದು, ಬದಲಾಯಿಸುವುದು, ಅವುಗಳನ್ನು ಅತಿಕ್ರಮಿಸಬಾರದೆಂದು ನಾವು ಪದೇ ಪದೆ

ಎಚ್ಚರಿಕೆಯನ್ನು ಹೊಂದಿದ್ದೇವೆ (ಪ್ರಕಟನೆ 22:18,16; ಗಲಾತ್ಯ 1:6–9; 2ಯೋಹಾನ 1:9). ದೇವರು ಮಾತನಾಡಿದನು. ಆತನು ತನ್ನ ಚಿತ್ತವನ್ನು ನಮಗೆ ಪ್ರಕಟಿಸಿದ್ದಾನೆ. ನಾವು ಅದನ್ನು ಹೃದಯ ಪೂರ್ವಕವಾಗಿ, ಅಕ್ಷರಾರ್ಥವಾಗಿ ಅನುಸರಿಸಬೇಕೆಂದು ಆತನು ಕೋರುತ್ತಿದ್ದಾನೆ. ನಂಬಿಕೆಯಿಂದ ಕೆಲವರು ಬಿದ್ದುಹೋಗುವರು ಎಂದು ಪೌಲನು, ಇತರರು ನಮ್ಮನ್ನು ಎಚ್ಚರಿಸಿದ್ದಾರೆ. ಈ ಎಚ್ಚರಿಕೆಗಳನ್ನು ನಾವು ಲಕ್ಷ್ಯವಿಟ್ಟಿಲ್ಲ. ಆದ್ದರಿಂದ ಇಂದು ಕ್ರೈಸ್ತವ ಲೋಕವೆಲ್ಲ ವಿಭಜನೆಗೊಂಡಿದೆ ಎಂದು ನಾವು ತಿಳಿಯಬಹುದು. ನಮ್ಮ ಸುತ್ತಲು ಇರುವ ಕ್ರೈಸ್ತವ ಲೋಕವನ್ನು ನಾವು ಗಮನಿಸಿದ ನಂತರ ಕರ್ತನು ನಮ್ಮನು ಏನು ಮಾಡಬೇಕೆಂದು ಕೋರುತ್ತಿದ್ದನೋ ತಿಳಿದುಕೊಳ್ಳುವ ನಿಮಿತ್ತ ನಾವು ಪರಿಪೂರ್ಣವಾಗಿ ಬೈಬಲಿನ ಬಳಿಗೆ ಹಿಂತಿರುಗುವದು ಅತ್ಯವಶ್ಯಕ. ನಾವು ಆತನ ಸತ್ಯದ ಬಳಿಗೆ ಹಿಂತಿರುಗಬೇಕೆಂದು ಕ್ರಿಸ್ತನು ನಿಶ್ಚಯವಾಗಿ ನಮ್ಮನು ಅಹ್ವಾನಿಸುತ್ತಿದ್ದಾನೆ, ಎಚ್ಚರಿಸುತ್ತಿದ್ದಾನೆ, ವಿಜ್ಞಾಪನೆ ಮಾಡುತ್ತಿದ್ದಾನೆ. ನಾವೆಲ್ಲರೂ ಐಕ್ಯವಾಗಿರಬೇಕೆಂದು ಕ್ರಿಸ್ತನು ಪ್ರಾರ್ಥಿಸಿದನು (ಯೋಹಾನ 17:20–23). ಪೌಲನು ವಿಭಾಗಗಳನ್ನು ಖಂಡಿಸುವುದು ಮಾತ್ರವಲ್ಲದೇ ನಾವೆಲ್ಲರೂ ಐಕ್ಯಭಾವದಿಂದ ಇರಬೇಕೆಂದು ಎಚ್ಚರಿಸುತ್ತಾ ನಾವು ಹೇಗೆ ಐಕ್ಯತೆಯಿಂದಿರುವೆವೋ ಎಂದು ಸಹ ಹೇಳಿದ್ದಾನೆ.(ರೋಮಾ 16:17,18; 1ಕೊರಿಂಥ 1:10; ಎಫೆಸ 4:1–6).

ಪವಿತ್ರರಾಗಿರಬೇಕಾದರೆ, ಬೈಬಲಿನಲ್ಲಿರುವ ಸಭೆಯ ಸತ್ಯವನ್ನು ಅಂಗೀಕರಿಸಿ ಬೋಧಿಸಬೇಕು. ಸಭೆಯ ಹೆಸರನ್ನು ಕುರಿತು ಪರಿಪಾಲನೆಯ ಪದ್ಧತಿಯನ್ನು ಕುರಿತು, ಅದರಲ್ಲಿ ಪ್ರವೇಶಿಸಲು ಇರುವ ನಿಯಮಗಳನ್ನು ಕುರಿತು, ಸಭೆಯ ಆರಾಧನೆಯನ್ನು ಇನ್ನೂ ಮುಂತಾದವುಗಳನ್ನು ಕುರಿತ ಸತ್ಯವನ್ನು ಬೈಬಲಿನಲ್ಲಿ ಇರುವ ರೀತಿಯಲ್ಲಿ ಅನುಸರಿಸಿ ಬೋಧಿಸಬೇಕು. ನಾವು ನೈತಿಕವಾಗಿ ಎಷ್ಟು ಪವಿತ್ರವಾಗಿದ್ದರು ಕ್ರಿಸ್ತನ ಬೋಧನೆ ನಮ್ಮಲ್ಲಿ ಇಲ್ಲದೇ ಹೋದರೆ ನಾವು ದೇವರ ಮಕ್ಕಳಾಗಲು ಸಾಧ್ಯವಿಲ್ಲ.

ನಂತರ, ಸಭೆಯು ನೈತಿಕವಾಗಿ ಪವಿತ್ರತೆಯನ್ನು ಹೊಂದಿಕೊಂಡಿರಬೇಕು. ಮತ್ತೆ ಸಭೆಯ ಸಿದ್ಧಾಂತದ ಪ್ರಕಾರ ಎಷ್ಟು ಪವಿತ್ರವಾಗಿದ್ದರೂ ಅದು ನೈತಿಕ ಪವಿತ್ರತೆ ಹೊಂದಿಕೊಂಡಿರದಿದ್ದರೆ ದೇವರನ್ನು ಸಂತೋಷಪಡಿಸಲಾಗುವುದಿಲ್ಲ. ನಾವು ಭಕ್ತಿಯನ್ನು, ಪವಿತ್ರತೆಯನ್ನು ಬೋಧಿಸುವುದು ಮಾತ್ರವಲ್ಲದೇ ಅವುಗಳನ್ನು ಅಳವಡಿಸಿಕೊಳ್ಳಬೇಕು.

ಸಭೆಯಲ್ಲಿ ಪಾಪವನ್ನು ಕುರಿತು, ಲೌಕಿಕ ಅಭ್ಯಾಸಗಳನ್ನು ಕುರಿತು ಲೇಖನಗಳು ನಮ್ಮನು ಎಚ್ಚರಿಸುವುದು ಮಾತ್ರವಲ್ಲದೇ ಅವುಗಳನ್ನು ಖಂಡಿಸುತ್ತದೆ. ಕೊರಿಂಥದಲ್ಲಿರುವವರ ಭಕ್ತಿಹೀನತೆಯಿಂದ ಹೊರಬರಬೇಕೆಂದು ಪೌಲನು ಎಚ್ಚರಿಸುತ್ತಾನೆ (1ಕೊರಿಂಥ:5). ನಾವು ಈ ಲೋಕವನ್ನಾಗಲಿ, ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬಾರದೆಂದು ಯೋಹಾನನು ಬರೆದಿದ್ದಾನೆ (1ಯೋಹಾನ 2:15–17). ಪೌಲನು ತೀತನಿಗೆ ಹೀಗೆ ಬರೆಯುತ್ತಾನೆ: "ನಾವು ಭಕ್ತಿಹೀನತೆಯನ್ನು ಈ ಲೊಕದ ಆಶೆಗಳನ್ನೂ ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ" (ತೀತ 2:11,12). ಲೇಖನಗಳು ಸಭೆಯಲ್ಲಿರುವ ಪಾಪವನ್ನು ಖಂಡಿಸುತ್ತಾ ಆ ಮೂಲಕ ಉಂಟಾಗುವ ಪ್ರತಿಫಲವನ್ನು ಕುರಿತು ಹೇಳುವ ಅನೇಕ ವಚನಗಳನ್ನು ನಾವು ನೋಡಬಹುದು. ದೇವರ ಮಕ್ಕಳು ಹೃದಯದಲ್ಲಿಯೂ, ಜೀವಿತದಲ್ಲಿಯೂ ಪಾಪಕ್ಕೆ ಎಲ್ಲಿಯೂ ಸ್ಥಳಾವಕಾಶ ಮಾಡಿಕೊಡಬಾರದು.

ಕ್ರೈಸ್ತವನು ತಕ್ಕ ಜೀವಿತವನ್ನು ಜೀವಿಸುವುದಕ್ಕೆ ಆತನನ್ನು ಪ್ರೋತ್ಸಹಿಸುವ ಸಲುವಾಗಿ ವಾಕ್ಯವು ಪ್ರಾಮುಖ್ಯವಾಗಿ (ಪ್ರಾಥಮಿಕವಾಗಿ) ಬರೆಯಲ್ಪಟ್ಟಿವೆ. ಆದ್ದರಿಂದ ಅವನು ಸ್ವಸ್ಥಬುದ್ಧಿಯಿಂದಲೂ, ನೀತಿಯಿಂದಲೂ, ಭಕ್ತಿಯಿಂದಲೂ, ಜೀವಿಸಬೇಕು. ರಕ್ಷಣೆ ಹೊಂದಿದವರೊಂದಿಗೆ ಸಭೆ ಏರ್ಪಡಿಸಲ್ಪಟ್ಟಿದೆ. ತನ್ನ ಪ್ರಜೆಗಳು ಆತನಿಗೆ ನಂಬಿಗಸ್ತರಾಗಿ ಇರಬೇಕೆಂದು ಕರ್ತನು ಅಪೇಕ್ಷಿಸುತ್ತಾನೆ. ಕ್ರಿಸ್ತನು ಹೀಗೆ ಹೇಳಿದ್ದಾನೆ: "ನಿರ್ಮಲ ಚಿತ್ತರು ಧನ್ಯರು; ಅವರು ದೇವರನ್ನು ನೋಡುವರು" (ಮತ್ತಾಯ 5:8). ಮತ್ತು ಆತನು ಎಲ್ಲರೊಂದಿಗೆ ಹೀಗೆ ಹೇಳಿದ್ದಾನೆ: "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಲೂಕ 9:23). ಯಾಕೋಬನು ಹೀಗೆ ಹೇಳಿದ್ದಾನೆ: "ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವುದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ" (ಯಾಕೋಬ 1:27). ಪವಿತ್ರವಾದ ಸಭೆಗಾಗಿ ಕ್ರಿಸ್ತನು ಮತ್ತೆ ಹಿಂತಿರುಗಿ ಬರುವನೆಂದು ಪೌಲನು ಹೇಳಿದ್ದಾನೆ: "ಆತನು ಅದನ್ನು ಪ್ರತಿಷ್ಠೆಪಡಿಸುವುದಕ್ಕಾಗಿ ತನ್ನನು ಒಪ್ಪಿಸಿಕೊಟ್ಟನು.

ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು...." (ಎಫೆಸ 5:27).

ಆದರೆ ಕ್ರಿಸ್ತನ ಸಭೆಯು ನೈತೀಕವಾಗಿಯೂ ಆತ್ಮೀಯವಾಗಿಯೂ ಪವಿತ್ರವಾಗಿ ಹೇಗಿರುವುದು? ವಾಕ್ಯವನ್ನು ಅನುಸರಿಸುವದರ ಮೂಲಕ, ಪ್ರಾರ್ಥನೆಯ ಮೂಲಕ, ಕ್ರೈಸ್ತವರೊಂದಿಗೆ ಸಹವಾಸದಿಂದ ಇರುವುದರ ಮೂಲಕ, ದೇವರ ಕೆಲಸದಲ್ಲಿ ನಿರತರಾಗುವುದರ ಮೂಲಕ, ಇತರರಿಗೆ ಸಹಾಯ ಮಾಡುವುದರ ಮೂಲಕ, ಒಳ್ಳೆಯದನ್ನು ಯೋಚಿಸುವದರ ಮೂಲಕ. ದೇವರಿಗೆ ನಮ್ಮ ಹಣವನ್ನು, ನಮ್ಮ ಶರೀರವನ್ನು ಅರ್ಪಿಸುವದರ ಮೂಲಕ ಸಭೆಯು ಪವಿತ್ರತೆಯಿಂದ ಇರುತ್ತದೆ. ನಮ್ಮನು ನಾವು ಕರ್ತನಿಗಾಗಿ ಪ್ರತ್ಯೆಕೀಸಿಕೊಂಡಾಗ ಒಂದು ದಿನ ಆತನು ಬಂದು ಆತನು ಇರುವ ಸ್ಥಳದಲ್ಲಿ ನಾವು ಇರುವಂತೆ ಆತನು ನಮ್ಮನು ಕರೆದುಕೊಂಡು ಹೋಗುವನೆಂದು ವಾಗ್ದಾನ ಮಾಡಿದ್ದಾನೆ. ಅಷ್ಟರೊಳಗೆ ನಮ್ಮ ಜೀವಿತದಲ್ಲಿಯೂ, ಬೋಧನೆಯಲ್ಲಿಯೂ ನಾವು ತೋರಿಸುವ ಪವಿತ್ರತೆ ಇತರರನ್ನು ಸಹ ಅಕರ್ಷಿಸುತ್ತದೆ. ಹೇಗಂದರೆ ಪವಿತ್ರವಾದದಕ್ಕಿಂತಲೂ ಅಕರ್ಷಿಸುವ ಗುಣವು ಮತ್ತೊಂದು ಇಲ್ಲ. ದೇವರಲ್ಲಿಯೂ, ಆತನ ಚಿತ್ತದಲ್ಲಿಯೂ, ಮತ್ತೊಂದು ಸ್ಥಳದಲ್ಲಿ ಕಾಣಿಸದ ಪವಿತ್ರತೆ ನಮಗೆ ಕಾಣಿಸುತ್ತಿದೆ. ಆದದರಿಂದ ನಮ್ಮ ಜೀವಿತವನ್ನು ಶುದ್ಧಿ ಮಾಡಿಕೊಳ್ಳವುದರಲ್ಲಿ, ಪವಿತ್ರಮಾಡಿಕೊಳ್ಳುವುದರಲ್ಲಿ ನಾವು ಆತನಂತೆ ಸಿದ್ಧರಾಗೋಣ. ಒಂದು ಆಶ್ಚರ್ಯಕರವಾದ ಸಂಗತಿ ಏನೆಂದರೆ ಕ್ರಿಸ್ತನಿಗೆ ವಿಧೇಯರಾಗಿ ವಾಕ್ಯಗಳಲ್ಲಿ ಪ್ರಕಟಿಸಿದ ಆತನ ಹೆಜ್ಜೆಯಜಾಡನ್ನು ಅನುಸರಿಸಿ ನಡೆದುಕೊಂಡರೆ ಎಲ್ಲರೂ ಪವಿತ್ರರಾಗಿರುತ್ತಾರೆ.

## ಪಾಠ – 17

# ಸಭೆಯ ಅನ್ಯೋನ್ಯತೆ
# (Fellowship of the Church)

ಅನ್ಯೋನ್ಯತೆ ಅಂದರೆ ಸ್ನೇಹ, ಸಹೃದಯ, ಸಹಾಕಾರ, ಅಂಗೀಕಾರ, ಹಂಚಿಕೊಳ್ಳುವುದು, ಒಂದಾಗಿ ಸೇರಿ ಕೆಲಸ ಮಾಡುವುದು, ಏಕೀಭವಿಸುವುದು, ಒಂದೇ ನಂಬಿಕೆಯಿಂದ ಇರುವುದು ಮುಂತಾದವುಗಳು. ಸಭೆಯೊಳಗೆ ಸಭೆಯು ಯಾರನ್ನು ಅಂಗೀಕರಿಸುವುದೋ ಮತ್ತು ಯಾರನ್ನು ಅಂಗೀಕರಿಸುವುದಿಲ್ಲವೋ ಎನ್ನುವುದು ಸಭೆಗೆ ಅನ್ವಯಿಸುತ್ತದೆ.

ಕ್ರೈಸ್ತರಾಗಿಯೂ, ಕ್ರಿಸ್ತನ ಸಭೆಯವರಾಗಿಯೂ ಇರುವ ನಾವು ಈ ಲೋಕದೊಂದಿಗೂ, ಅದರಲ್ಲಿರುವ ಎಲ್ಲಾ ವಿಧವಾದ ಮತಸ್ಥರೊಂದಿಗೂ ಅನ್ಯೋನ್ಯತೆಯನ್ನು ಹೊಂದಿಕೊಂಡಿರಬಹುದಾ? ಇತರ ಮತಸ್ಥರನ್ನು ಅಂಗೀಕರಿಸಬಹುದಾ? ಅವರೊಂದಿಗೆ ಸೇರಿ ಆರಾಧನೆ ಮಾಡಬಹುದಾ? ಅವರನ್ನು ಪ್ರೋತ್ಸಾಹಿಸಬಹುದಾ? ಹಾಗೆ ಮಾಡುವುದಿಲ್ಲವಲ್ಲ. ಇನ್ನೂ ವಿವರವಾಗಿ ಹೇಳಬೇಕಾದರೆ ಈ ಕೆಳಗೆ ಹೇಳಿದವರೊಂದಿಗೆ ನಾವು ಸಹವಾಸ ಮಾಡಬಾರದು:

**1.ದೆವ್ವಗಳಿಗೆ ಬಲಿ ಕೊಡುವವರೊಂದಿಗೆ ನಾವು ಸಹವಾಸ ಮಾಡಬಾರದು :**

"ಆದರೆ ಅನ್ಯಜನರು ತಾವು ಅರ್ಪಿಸುವ ಬಲಿಗಳನ್ನು ದೇವರಿಗಲ್ಲ ದೆವ್ವಗಳಿಗೆ ಅರ್ಪಿಸುತ್ತಾರೆಂದು ನನ್ನ ಅಭಿಪ್ರಾಯವು" (1ಕೊರಿಂಥ 10:20).

**2.ಅವಿಶ್ವಾಸಿಗಳೊಂದಿಗೆ ನಾವು ಸಹವಾಸ ಹೊಂದಿರಬಾರದು :**

"ನೀವು ಕ್ರಿಸ್ತನ ನಂಬಿಕೆ ಇಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೋತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ. ಇದರ ಸಂಬಂಧವಾಗಿ ದೇವರು – ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು

ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ. ಆದ್ದರಿಂದ ಅನ್ಯಜನರ ಮಧ್ಯದಿಂದ ಹೊರಟು ಬಂದು ಪ್ರತ್ಯೇಕವಾಗಿರಿ; ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ. ಇದಲ್ಲದೆ ನಾನು ನಿಮ್ಮನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರೆಂದು ಸರ್ವಶಕ್ತನಾದ ದೇವರು ಹೇಳುತ್ತಾನೆ" (2ಕೊರಿಂಥ 6:14–18).

**3.ನಿಷ್ಪ್ರಯೋಜನವಾದ, ಅಂಧಕಾರ ಸಂಬಂಧವಾದ ಕ್ರಿಯೆಗಳನ್ನು ಮಾಡುವವರೊಂದಿಗೆ ನಾವು ಪಾಲುಗಾರರಾಗಬಾರದು :**

"ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವು ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ"(ಎಫೆಸ 5:11)."ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ" (1ಯೋಹಾನ 2:15). "ವ್ಯಭಿಚಾರಿಗಳು ನೀವು; ಇಹಲೋಕ ಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ; ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ" (ಯಾಕೋಬ 4:4).

**4.ಸುಳ್ಳು ಬೋಧಕರೊಂದಿಗೆ ನಾವು ಸಹವಾಸ ಹೊಂದಿರಬಾರದು :**

"ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು. ಈ ಉಪದೇಶಕ್ಕೆ ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ. ಅವನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗುತ್ತಾನೆ" (2ಯೋಹಾನ :9–11). "ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು

ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಅಂಥವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿ ನಯದ ನುಡಿಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕಪಟಿಗಳ ಹೃದಯಗಳನ್ನು ಮೋಸಗೊಳಿಸುತ್ತಾರೆ" (ರೋಮಾ 16:17,18).

**5.ಅಸತ್ಯ ಆರಾಧನೆಯನ್ನು ನಡೆಸುವವರೊಂದಿಗೆ ನಾವು ಸಹವಾಸ ಮಾಡಬಾರದು :**

ಅಥೇನೆಯದ ಜನರಿಗೆ ಪೌಲನು ಹೀಗೆ ಹೇಳಿದನು: "ನಾನು ನಿಮ್ಮ ಪಟ್ಟಣದಲ್ಲಿ ತಿರುಗಾಡುತ್ತಾ ನೀವು ಪೂಜಿಸುವ ದೇವತಾ ಪ್ರತಿಮೆಗಳನ್ನು ಚೆನ್ನಾಗಿ ನೋಡುತ್ತಾ ಇದ್ದಾಗ ಒಂದು ಬಲಿಪೀಠವು ನನ್ನ ಕಣ್ಣಿಗೆ ಬಿತ್ತು; ಅದರ ಮೇಲೆ ತಿಳಿಯದ ದೇವರಿಗೆ ಎಂದು ಬರೆದಿತ್ತು. ಆದಕಾರಣ ನೀವೂ, ಯಾವದನ್ನು ತಿಳಿಯದೆ ಪೂಜಿಸುತ್ತೀರೋ ಅದನ್ನೇ ನಿಮಗೆ ತಿಳಿಯಪಡಿಸುತ್ತೇನೆ" (ಅ.ಕೃ.17:23). "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬುದೇ" (ಮತ್ತಾಯ 15:9).

**6.ಅಪನಂಬಿಗಸ್ತರಾಗಿರುವ ಕ್ರೈಸ್ತವರೊಂದಿಗೆ ನಾವು ಸಹವಾಸ ಮಾಡಬಾರದು :**

ಅಂಥವರನ್ನು ಸಭೆಯ ಸಹವಾಸದಿಂದ ಹೊರಗೆ ಹಾಕಬೇಕೆಂದು ಹೇಳುತ್ತಾ ಪೌಲನು ಹೀಗೆ ಬರೆದನು:"ಆದರೆ ಕ್ರೈಸ್ತ ಸಹೋದರನೆನಿಸಿಕೊಂಡವನು ಜಾರನಾದರೂ ಲೋಭಿಯಾದರೂ ವಿಗ್ರಹಾರಾಧಕನಾದರೂ ಬೈಯುವವನಾದರೂ ಕುಡಿಕನಾದರೂ ಸುಲುಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು ಎಂದು ಬರೆದಿದ್ದೆನು" (1ಕೊರಿಂಥ 5:11).

ಮೇಲೆ ಹೇಳಿದಂತವರೊಂದಿಗೆ ಅಥವಾ ದೇವರನ್ನು ಎದುರಿಸುವವರೊಂದಿಗೆ ನಾವು ಸಹವಾಸ ಮಾಡಬಾರದು. ಅಂತವರನ್ನು ನಾವು ಪ್ರೋತ್ಸಹಿಸಲುಬಾರದು. ಅವರನ್ನು ಗುರುತಿಸುವುದಾಗಲಿ, ಅಂಗೀಕರಿಸುವುದಾಗಲಿ, ಅವರಿಗೆ ಸಹಾಯ ಮಾಡುವುದಾಗಲಿ ಮಾಡಬಾರದು. ಅವರೊಂದಿಗೆ ಸೇರಿ ಆರಾಧನೆ ಮಾಡಲಾರೆವು, ಅವರ ವಾದ್ಯಗಳಿಂದ ಸೇರಿ ಹಾಡಲಾಗದು, ಅವರು ಮಾಡುತ್ತಿರುವ ಕೆಲಸಕ್ಕೆ ಆರ್ಥಿಕ ಸಹಾಯ ಮಾಡಲಾರೆವು. ಮತ್ತು ನಾವು ಅವರನ್ನು ಎಚ್ಚರಿಸಬೇಕು, ಅವರನ್ನು

ಕುರಿತು ಇತರರಿಗೂ ಎಚ್ಚರಿಸಬೇಕು. ಬೇರೆಯಾಗಿರಬೇಕೆಂದು ನಮ್ಮ ಇಷ್ಟವಲ್ಲ, ನಾವು ಸ್ವನೀತಿವಂತರೆಂದು ಅಲ್ಲ, ಅವರನ್ನು ನಾವು ಪ್ರೀತಿಸುತ್ತಿಲ್ಲವೆಂದು ಅರ್ಥವಲ್ಲ, ನಾವು ಏನು ಮಾಡಿದರೂ ಬೈಬಲಿನ ಪ್ರಕಾರವೇ ಮಾಡಬೇಕು. ಈ ರೀತಿಯಲ್ಲಿ ನಾವು ಜನರಿಗೆ ಸಹಾಯ ಮಾಡಬೇಕು. ಮೊದಲು ಅವರು ಅದರ ಪ್ರಯೋಜನವನ್ನು ತಿಳಿಯದಿರಬಹುದು ಆದರೆ ಸಹವಾಸದಿಂದ ಹೊರಗೆ ಹಾಕುವುದರಿಂದ ಅವರಿಗೆ ಎಲ್ಲಕ್ಕಿಂತಲೂ ಕೊನೆಗೆ ಅದು ಪ್ರಯೋಜನವಾಗುತ್ತದೆ. ನಾವು ಅವರೊಂದಿಗೆ ಸಹವಾಸ ಮಾಡುತ್ತಿದ್ದರೆ ಅವರ ನಡವಳಿಕೆಯನ್ನು ನಾವು ಒಪ್ಪಿಕೊಂಡಂತಾಗುತ್ತದೆ. ಅವರು ತಮ್ಮ ದೃಷ್ಟಿಗೆ ಉನ್ನತಸ್ಥಿತಿಯಲ್ಲಿದೇವೆಂದು ಅಂದುಕೊಳ್ಳುವರು, ಅಂತವರೊಂದಿಗೆ ನಾವು ಸತ್ಯವನ್ನು ಹಂಚಿಕೊಳ್ಳಲಾಗದು.

ಸಭೆಯು ಪ್ರತ್ಯೇಕವಾದ ಜನರ ಸಮೂಹವಾಗಿದೆ. ಅವರು ರಕ್ಷಣೆ ಹೊಂದಿದವರು. ಕ್ರಿಸ್ತನ ಶರೀರವಾದವರು ಆಗಿರುವುದರಿಂದ ಈ ಭೂಮಿಯ ಮೇಲೆ ಕ್ರಿಸ್ತನನ್ನು ಸೂಚಿಸುವವರು. ಆದದರಿಂದ ಪ್ರತಿಯೊಂದನ್ನು ಅವರು ಅಂಗೀಕರಿಸುವದಿಲ್ಲ. ಅವರ ಸುತ್ತಲು ನಡೆಯುತ್ತಿರುವ ಪ್ರತಿಯೊಂದನ್ನು ಅವರು ಒಪ್ಪುವುದಿಲ್ಲ. ಅಸತ್ಯಕ್ಕೆ ಅವರು ಕೈಜೋಡಿಸುವುದಿಲ್ಲ, ಅದಕ್ಕೆ ಶುಭವೆಂದು ಹೇಳುವುದಿಲ್ಲ. ಮತ್ತು ಲೋಕದಿಂದಲೂ, ಕ್ರಿಸ್ತನನ್ನು ಸರಿಯಾಗಿ ಅನುಸರಿಸದವರಿಂದಲೂ ತಮ್ಮನ್ನು ತಾವು ಪ್ರತ್ಯೇಕಪಡಿಸಿಕೊಳ್ಳುವರು. ಅವರು ವಿಭಜನೆಯನ್ನು ತಿರಸ್ಕರಿಸಿ ಐಕ್ಯತೆಗಾಗಿ ಕೆಲಸಮಾಡುವರು. ಅವರು ಪ್ರತಿಷ್ಠಿಸಲ್ಪಟ್ಟವರು, ಪ್ರತ್ಯೇಕಿಸಲ್ಪಟ್ಟವರು ಅವರು ಕ್ರೈಸ್ತವರು ಮಾತ್ರವೇ. ಅವರು ದೇವರೊಂದಿಗೂ, ಕ್ರಿಸ್ತನೊಂದಿಗೂ, ಆತನ ಪ್ರಜೆಗಳೊಂದಿಗೆ ಮಾತ್ರವೇ ಸಹವಾಸ ಹೊಂದಿಕೊಂಡಿರುವರು. ಬೈಬಲ್ ಬೋಧಿಸುವುದು ಸಹ ಅದನ್ನೇ. ಈ ಕೆಳಗಿನವುಗಳನ್ನು ದಯಾಮಾಡಿ ಗಮನಿಸು:

**1.ನಾವು ದೇವರೊಂದಿಗೆ ಸಹವಾಸ ಹೊಂದಿರಬೇಕು :**

"ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ

ಸಂಗಡಲೂ ಇರುವಂಥದು" (1ಯೋಹಾನ 1:3; 6ನೇ ವಚನವನ್ನು ಸಹ ಓದು).

**2.ನಾವು ಕ್ರಿಸ್ತನೊಂದಿಗೆ ಸಹವಾಸ ಹೊಂದಿರಬೇಕು :**

"ಆತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನೂ ತಿಳುಕೊಂಡು ಆತನ ಮರಣದ ವಿಷಯದಲ್ಲಿ ಆತನಿಗೆ ಸ್ವರೂಪನಾಗಬೇಕೆಂಬುದೇ ನನ್ನ ಕೂತೂಹಲವಾಗಿದೆ" (ಫಿಲಿಪ್ಪಿ 3:10) ಎಂದು ಪೌಲನು ಬರೆಯುತ್ತಾನೆ. "ನಮ್ಮ ಕರ್ತನಾದ ಯೇಸು ಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆಗೆ ನಿಮ್ಮನ್ನು ಕರೆದವನು ಆತನೇ (1ಕೊರಿಂಥ 1:9).

**3.ನಾವು ಪವಿತ್ರಾತ್ಮನೊಂದಿಗೆ ಅನ್ಯೋನ್ಯತೆಯುಳ್ಳವರಾಗಿರಬೇಕು :**

"ಕ್ರಿಸ್ತನಿಂದ ಉತ್ತೇಜನ, ಪ್ರೀತಿಯ ಪ್ರೇರಣೆ, ಪವಿತ್ರಾತ್ಮನ ಅನ್ಯೋನ್ಯತೆ, ಕಾರುಣ್ಯದಯಾರಸಗಳು ಉಂಟಾಗುವವಾದರೆ ಐಕ್ಯಮತವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರಿ" (ಫಿಲಿಪ್ಪಿ 2:1,2).

**4.ನಂಬಿಗಸ್ಥರಾಗಿರುವ ಕ್ರೈಸ್ತವರೊಂದಿಗೆ ನಾವು ಸಹವಾಸ ಮಾಡಬೇಕು :**

"ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ" (1ಯೋಹಾನ 1:7).

**5.ಆರಾಧನೆಯಲ್ಲಿ ನಾವು ಅನ್ಯೋನ್ಯತೆಯಲ್ಲಿರಬೇಕು :**

"ಇವರು ಅಪೋಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ, ಸಹೋದರರ ಅನ್ಯೋನತೆಯಲ್ಲಿಯೂ, ರೊಟ್ಟಿಮುರಿಯುವುದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅ.ಕೃ.2:42). "ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಡಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು

ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ" (ಇಬ್ರಿಯ 10:25).

**6.ಸುವಾರ್ತೆಯನ್ನು ಪ್ರಕಟಿಸುವದರಲ್ಲಿ ನಾವು ಸಹವಾಸ (ಐಕ್ಯತೆ) ವುಳ್ಳವರಾಗಿರಬೇಕು :**

"ನಾನು ನಿಮಗೋಸ್ಕರ ದೇವರನ್ನು ಬೇಡಿಕೊಳ್ಳುವ ಎಲ್ಲಾ ಸಮಯಗಳಲ್ಲಿಯೂ ಸಂತೋಷದಿಂದಲೇ ಬೇಡುವವನಾಗಿದ್ದೇನೆ. ನಾನು ನಿಮ್ಮನ್ನು ನೆನಸಿಕೊಳ್ಳುವಾಗೆಲ್ಲಾ ನೀವು ಮೊದಲಿನಿಂದ ಇಂದಿನವರೆಗೂ ಸುವಾರ್ತೆ ಪ್ರಚಾರದಲ್ಲಿ ಸಹಕಾರಿಗಳಾಗಿದ್ದೀರೆಂದು ನನ್ನ ದೇವರಿಗೆ ಕೃತಜ್ಞತಾಸ್ತುತಿಮಾಡುತ್ತೇನೆ. ಈ ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ನಡೆಸಿಕೊಂಡು ಯೇಸುಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುವನೆಂದು ನನಗೆ ಭರವಸೆವುಂಟು. ನಿಮ್ಮೆಲ್ಲರ ವಿಷಯದಲ್ಲಿ ಈ ಅಭಿಪ್ರಾಯವುಳ್ಳವನಾಗಿರುವದು ನ್ಯಾಯವಾಗಿದೆ. ನಾನು ಬೇಡಿಬಿದ್ದಿರುವಾಗಲೂ ಸುವಾರ್ತೆಯ ವಿಷಯದಲ್ಲಿ ಉತ್ತರ ಹೇಳಿ ಸ್ಥಾಪಿಸುವಾಗಲೂ ನೀವೆಲ್ಲರೂ ನನ್ನೊಂದಿಗೆ ದೇವರ ಕೃಪೆಯಲ್ಲಿ ಪಾಲುಗಾರರಾಗಿದ್ದೀರೆಂದು ನಿಮ್ಮನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ" (ಫಿಲಿಪ್ಪಿ 1:3–7).

**7.ದೇವಜನರಿಗೆ ಸಹಾಯ ಮಾಡುವ ಸೇವೆ ವಿಷಯದಲ್ಲಿ ನಾವು ಸಹಾವಾಸವುಳ್ಳವರಾಗಿರಬೇಕು :**

"ಅವರು ಶಕ್ತ್ಯಾನುಸಾರವಾಗಿ ಮಾತ್ರ ಕೊಡದೆ ಶಕ್ತಿಯನ್ನು ಮೀರಿ ತಮ್ಮಷ್ಟಕ್ಕೆ ತಾವೇ ಕೊಟ್ಟರು; ಇದಕ್ಕೆ ನಾವೇ ಸಾಕ್ಷಿ. ದೇವಜನರಿಗೆ ಸಹಾಯ ಮಾಡುವ ಕೆಲಸದಲ್ಲಿ ತಾವು ಪಾಲುಗಾರರಾಗುವಂತೆ ಅಪ್ಪಣೆಯಾಗಬೇಕೆಂದು ನಮ್ಮನ್ನು ಬಹಳವಾಗಿ ಬೇಡಿಕೊಂಡರು" (2ಕೊರಿಂಥ 8;3,4).

**8.ಪ್ರತಿ ಸತ್ಕ್ರಿಯೆಗಳನ್ನು ಮಾಡುವದಕ್ಕೆ ನಾವು ಸಹವಾಸದಲ್ಲಿರಬೇಕು :**

"ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ತನ್ನನ್ನು ಶುದ್ಧಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವುದಕ್ಕೆ ಸಿದ್ಧನಾಗಿಯೂ

ಇರುವನು" (2ತಿಮೊಥಿ 2:21).

ಕ್ರಿಸ್ತನ ಸಭೆಯ ಸದಸ್ಯನಾದ ಪ್ರತಿಯೊಬ್ಬನು ಯಾವುದರೊಂದಿಗೆ ಸಹವಾಸ ಮಾಡಬೇಕು, ಯಾವುದರೊಂದಿಗೆ ಸಹವಾಸ ಮಾಡಬಾರದು ಎಂದು ತಿಳಿದಿರಬೇಕು. ಸಹವಾಸ ಮಾಡುವಂಥದ್ದನ್ನು ಅವನು ಕೈಹಿಡಿದು ಪ್ರೋತ್ಸಹಿಸಬೇಕು. ಅಂದರೆ ಅವನು ಆರ್ಥಿಕ ಸಹಾಯ ಮಾಡುತ್ತಾ ಸಹೋದರರೊಂದಿಗೆ ಸೇರಿ ಕೆಲಸ ಮಾಡುತ್ತಾ ತನ್ನ ಸಂಪೂರ್ಣ ಸಹಾಯವನ್ನು ಕೊಡಬೇಕು. ಸಹೋದರರ ಸಹವಾಸದಿಂದ ದೊರೆಯುವ ಪ್ರೋತ್ಸಾಹಕ್ಕಿಂತಲೂ ಮಿಗಿಲಾದದ್ದು ಬೇರೆ ಯಾವುದು ಇಲ್ಲ. ಸಹೋದರರೊಂದಿಗೆ ಸಹವಾಸ ಮಾಡುವುದರೊಂದಿಗೂ, ಸತ್ಕ್ರಿಯೆಗಳನ್ನು ನಡೆಸುವದರಲ್ಲಿ ಅವರ ಪ್ರೋತ್ಸಹವು ಎಷ್ಟೋ ಒಳ್ಳೇಯದಾಗಿರುತ್ತದೆ. ದೇವರ ಮಕ್ಕಳಿಗಿಂತಲೂ ಹತ್ತಿರದವರಾದ ಪ್ರಜೆಗಳು ಮತ್ತೊಬ್ಬರು ಇಲ್ಲ. "ನಮ್ಮೆಲರನ್ನು ಒಂದು ಮಾಡಿದ ಪ್ರೀತಿಯ ಅನುಬಂಧವು ಎಷ್ಟೋ ಧನ್ಯವಾದದ್ದು".

ಪಾಠ – 18

# ಸಭೆಯ ಕ್ರಮಶಿಕ್ಷಣ
# (Discipline of the Church)

ಕ್ರಿಸ್ತನ ಸಭೆಯ ಸದಸ್ಯರು ಪವಿತ್ರವಾಗಿಯೂ, ಭಕ್ತಿಯಿಂದಲೂ, ಕರ್ತನಿಗೆ ನಂಬಿಗಸ್ಥರಾಗಿ ಜೀವಿಸುವಂತೆ ಸಭೆಯು ಪ್ರತಿ ಸದಸ್ಯನನ್ನು ಪ್ರೋತ್ಸಾಹಿಸಬೇಕು. ಯಾರಾದರು ಪಾಪಕ್ಕೆ ಹಿಂದಿರುಗಿ ಹೋಗುತ್ತಿದ್ದರೆ ಅಂಥವರು ನೀತಿಮಾರ್ಗಕ್ಕೆ ಬರುವಂತೆ ಬೋಧಿಸಿ, ಉಪದೇಶಮಾಡಿ, ಸನ್ಮಾರ್ಗದಲ್ಲಿ ನಡೆಸುವುದಕ್ಕೆ ಪ್ರಯಾಸಪಡಬೇಕು. ಅಂತಹ ಪ್ರಯತ್ನಗಳೆಲ್ಲಾ ವಿಫಲವಾದಾಗ ಕೊನೆಗೆ ಅಂತಹ ಸದಸ್ಯರನ್ನು ಸಭೆಯ ಸಹವಾಸದಿಂದ ತೊಲಗಿಸುವ ಕ್ರಮಶಿಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತಹವನನ್ನು ನಿತ್ಯನರಕಕ್ಕೆ ಪಾತ್ರನನ್ನಾಗಿ ಮಾಡುವುದಕ್ಕೆ ಅಂತಹ ಕ್ರಮ ತಗೆದುಕೊಳ್ಳುವುದಾಗಲಿ ಅಲ್ಲ. ಅವನು ತನ್ನ ಸ್ಥಿತಿಯನ್ನು ಪುನಃ ಆಲೋಚಿಸಿಕೊಂಡು ದೇವರ ಬಳಿಗೆ ತಿರುಗಿ ಬರುವುದಕ್ಕೆ ಆ ಕ್ರಮ ತೆಗದುಕೊಳ್ಳಬೇಕು.

ಕೊರಿಂಥದಲ್ಲಿರುವ ಸಭೆಯಲ್ಲಿ ಪಾಪವು ಇರುವಂತೆ ಪೌಲನಿಗೆ ತಿಳಿದುಬಂತು. ಜಾರತ್ವ ಮಾಡಿದವನನ್ನೂ ಕುರಿತು ಬರೆಯುತ್ತಾ ಹೀಗೆ ಹೇಳಿದ್ದಾನೆ "ನಿಮ್ಮಲ್ಲಿ ಜಾರತ್ವವುಂಟೆಂದು ಜನರು ಸಾಧಾರಣವಾಗಿ ಹೇಳುತ್ತಾರೆ. ಒಬ್ಬನು ತನ್ನ ಅಪ್ಪನ ಹೆಂಡತಿಯನ್ನು ಇಟ್ಟುಕೊಂಡಿದ್ದಾನಂತೆ; ಅಂಥ ಜಾರತ್ವವು ಅನ್ಯಜನರಲ್ಲಿಯೂ ಇಲ್ಲ. ಹೀಗಿದ್ದರೂ ನೀವು ದುಃಖವನ್ನು ತೋರಿಸದೆ ಈ ಕಾರ್ಯಮಾಡಿದವನ್ನು ನಿಮ್ಮೊಳಗಿಂದ ಬಹಿಷ್ಕರಿಸದೆ ಉಬ್ಬಿಕೊಂಡೇ ಇದ್ದೀರಲ್ಲಾ. ನಾನಂತೂ ದೇಹದಿಂದ ದೂರವಾಗಿದ್ದರೂ ಆತ್ಮದಿಂದ ಹತ್ತಿರದಲ್ಲಿದ್ದು ಈ ಕಾರ್ಯಮಾಡಿದವನ್ನು ಕುರಿತು ಆಗಲೇ ತೀರ್ಪುಮಾಡಿದ್ದೇನಂದರೆ– ನೀವೂ ನನ್ನಾತ್ಮನೂ ಕರ್ತನಾದ ಯೇಸುವಿನ ಸಾಮರ್ಥ್ಯ ಸಹಿತ ಒಟ್ಟುಗೂಡಿ ಬಂದಿರಲಾಗಿ ಕರ್ತನಾದ ಯೇಸುವಿನ ಪ್ರತ್ಯಕ್ಷತೆಯ ದಿನದಲ್ಲಿ ಅಂತವನ ಆತ್ಮವು ರಕ್ಷಣೆ ಹೊಂದುವದಕ್ಕಾಗಿ ಅವನ ಶರೀರಭಾವವು ನಾಶವಾಗಬೇಕೆಂದು ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕೆಂಬದೇ. ನೀವು ಹೀಗೆ ಹಿಗ್ಗುವುದು ಒಳ್ಳೇದಲ್ಲ. ಸ್ವಲ್ಪ ಹುಳಿ ಕಲಿಸಿದರೆ ಕಣಿಕವೆಲ್ಲಾ ಹುಳಿಯಾಗುತ್ತದೆಂಬದು ನಿಮಗೆ ತಿಳಿಯದೋ? ನೀವು ಹುಳಿಯಿಲ್ಲದವರೆನಿಸಿಕೊಂಡದ್ದರಿಂದ ಹಳೆ ಹುಳಿಯನ್ನು ತೆಗೆದುಹಾಕಿ ಹೊಸ

ಕಣಿಕದಂತಾಗಿರ್ರಿ. ಯಾಕಂದರೆ ನಮ್ಮ ಪಸ್ಕದ ಯಜ್ಞದ ಕುರಿಯು ಕೊಯಿದದೆ; ಅದಾವದಂದರೆ ಕ್ರಿಸ್ತನೇ. ಆದಕಾರಣ ನಾವು ಹಳೇ ಹುಳಿಯನ್ನು ಅಂದರೆ ದುರ್ಮಾರ್ಗತ್ವ ದುಷ್ಟತ್ವ ಎಂಬ ಹುಳಿಯನ್ನು ಇಟ್ಟುಕೊಳ್ಳದೆ ಸರಳತೆ ಸತ್ಯತೆ ಎಂಬ ಹುಳಿಯಿಲ್ಲದ ರೊಟ್ಟಿಯನ್ನೇ ತೆಗೆದುಕೊಂಡು ಹಬ್ಬವನ್ನು ಆಚರಿಸೋಣ. ಜಾರರ ಸಹವಾಸ ಮಾಡಬಾರದೆಂದು ನನ್ನ ಪತ್ರಿಕೆಯಲ್ಲಿ ಬರೆದಿದ್ದೇನಷ್ಟೆ. ಈ ಲೋಕದಲ್ಲಿರುವ ಜಾರರು, ಲೋಭಿಗಳು, ಸುಲುಕೊಳ್ಳುವವರು, ವಿಗ್ರಹಾರಾಧಕರು ಇವರ ಸಹವಾಸವನ್ನು ಬಿಟ್ಟುಬಿಡಬೇಕೆಂದು ನನ್ನ ತಾತ್ಪರ್ಯವಲ್ಲ. ಹಾಗೆ ಬಿಡಬೇಕಾದರೆ ನೀವು ಈ ಲೋಕವನ್ನೇ ಬಿಟ್ಟು ಹೋಗಬೇಕಾಗುವದು. ಆದರೆ ಕ್ರೈಸ್ತ ಸಹೋದರನೆನಿಸಿಕೊಂಡವನು ಜಾರನಾದರೂ ಲೋಭಿಯಾದರೂ ವಿಗ್ರಹರಾಧಕನಾದರೂ ಬೈಯುವವನಾದರೂ ಕುಡಿಕನಾದರೂ ಸುಲುಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟಮಾಡಲೂ ಬಾರದು ಎಂದು ಬರೆದಿದ್ದೆನು. ಹೊರಗಿನವರನ್ನು ಕುರಿತು ತೀರ್ಪುಮಾಡುವದಕ್ಕೆ ನನಗೇನಧಿಕಾರ? ಒಳಗಿನವರನ್ನು ಕುರಿತು ತೀರ್ಪುಮಾಡುವವರು ನೀವು ಅಲ್ಲವೇ? ಹೊರಗಿನವರನ್ನು ಕುರಿತು ತೀರ್ಪುಮಾಡುವವನು ದೇವರು. ಆ ದುಷ್ಟನನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು" (1ಕೊರಿಂಥ 5).

1ಕೊರಿಂಥ 5:1–13ನೇ ಅಧ್ಯಾಯದಲ್ಲಿ ಒಬ್ಬ ಸಹೋದರನು ಮಾಡಿದ ಪಾಪವನ್ನು ಪೌಲನು ತೋರಿಸುತ್ತಾ, ಸಭೆಯು ಅವನನ್ನು ಹೊರಗೆ ಹಾಕಬೇಕೆಂದು ಹೇಳುವದನ್ನು ಗಮನಿಸು. ಅವರು ಆ ಕೆಲಸವನ್ನು ಮಾಡದೆ ಹೋದರೆ ಅವರು ಸಹ ಅಪವಿತ್ರರಾಗುತ್ತಾರೆ ಎಂದು ಪೌಲನು ಹೇಳಿದನು. ಯಾಕೆಂದರೆ ಹುಳಿ ಸ್ವಲ್ಪವಾದರೂ ಕಲಿಸಿದ ಕಣಿಕವೆಲ್ಲಾ ಹುಳಿಯಾಗುತ್ತದಲ್ಲಾ? ಅಂದರೆ ಒಬ್ಬನು ತನ್ನ ಪಾಪದಲ್ಲೇ ಮುಂದುವರೆಯುವುದನ್ನು ಸಭೆಯು ಸಹಿಸಿಕೊಂಡರೆ, ಉಳಿದವರು ಸಹ ಅವನ ಮಾದರಿಯನ್ನು ಅನುಸರಿಸಿ ಎಲ್ಲರು ಪಾಪಮಾಡುವುದಕ್ಕೆ ಅವಕಾಶವಿದೆ. ಆದದರಿಂದ ಅವರಲ್ಲಿರುವ ಪಾಪವನ್ನು ಅವರೇ ಹೊರಗೆ ಹಾಕಬೇಕೆಂದು ಕೊರಿಂಥದಲ್ಲಿರುವ ಕ್ರೈಸ್ತರಿಗೆ ಪೌಲನು ಎಚ್ಚರಿಸಿದನು. ಹೀಗೆ ಮಾಡುವುದರಿಂದ ಸಭೆಯು ಪವಿತ್ರವಾಗಿರುವುದು ಮಾತ್ರವಲ್ಲದೇ ಅಂಥವನ ಆತ್ಮವು ಕೊನೆಗೆ (ಮಾನಸಾಂತರ ಹೊಂದಿದಾಗ) ರಕ್ಷಣೆ ಹೊಂದುವುದಕ್ಕೆ ಅವಕಾಶವಿರುತ್ತದೆ. ಇದೇ ಕ್ರಮ ಶಿಕ್ಷಣದ ಅವಶ್ಯಕತೆಯಾಗಿದೆ (ಮತ್ತಾಯ 5:29,30).

ಥೆಸಲೋನಿಕದಲ್ಲಿರುವ ಸಭೆಗೆ ಪೌಲನು ಹೀಗೆ ಬರೆದನು: "ಸಹೋದರರೇ ನಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ" (2ಥೆಸಲೋನಿಕ 3:6). "ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆ ಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ. ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕೆಂದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ. ಸಹೋದರರೇ, ನೀವಾದರೋ ಒಳ್ಳೇದನ್ನು ಮಾಡುವುದರಲ್ಲಿ ಬೇಸರಗೊಳ್ಳಬೇಡಿರಿ. ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನಮ್ಮ ಮಾತಿಗೆ ಯಾವನಾದರೂ ಒಳಗಾಗದಿದ್ದರೆ ಅವನನ್ನು ಗುರುತು ಇಟ್ಟುಕೊಂಡು ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ. ಆದರೂ ಅವನನ್ನೂ ವೈರಿಯೆಂದು ಎಣಿಸದೆ ಸಹೋದರನೆಂದು ಎಣಿಸಿಕೊಂಡು ಬುದ್ಧಿಹೇಳಿರಿ" (2ಥೆಸಲೋನಿಕ 3:11–15).

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಹೀಗೆ ಹೇಳಿದ್ದಾನೆ: "ಮಕ್ಕಳಿಗೆ ಹೇಳುವಂತೆ ನಿಮಗೆ ಹೇಳಿದ ಎಚ್ಚರಿಕೆಯ ಮಾತನ್ನು ಮರೆತುಬಿಟ್ಟಿದ್ದೀರೋ? ಏನೆಂದರೆ ಮಗನೇ, ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ; ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ; ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ; ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ ಎಂಬುದು. ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ; ದೇವರು ನಿಮ್ಮನ್ನು ಮಕ್ಕಳೆಂದು ನಡೆಸುತ್ತಾನೆ. ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ? ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೇ ಹೊರತು ಪುತ್ರರಲ್ಲ. ಇದು ಮಾತ್ರವಲ್ಲದೆ ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ; ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವೂ ಇನ್ನೂ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ. ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷ್ಯಕ್ಕೆ ತೆಗೆದುಕೊಂಡು ತಮ್ಮ ಮನಸ್ಸಿಗೆ ತೋರಿದಂತೆ ನಮ್ಮನ್ನು ಶಿಕ್ಷಿಸಿದರು; ಆತನಾದರೋ ನಾವು ತನ್ನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂದು ನಮ್ಮ

ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ. ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ಅದು ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ" (ಇಬ್ರಿಯ 12:5–11).

ಯೇಸು ಹೀಗೆ ಹೇಳಿದ್ದಾನೆ: "ಇದಲ್ಲದೆ ನಿನ್ನ ಸಹೋದರನು ತಪ್ಪು ಮಾಡಿದರೆ ನೀನು ಹೋಗಿ ನೀನೂ ಅವನು ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು. ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ. ಅವನು ಕೇಳದೆಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಒಬಿಬ್ಬರನ್ನು ನಿನ್ನ ಸಂಗಡ ಕರಕೊಂಡು ಹೋಗು. ಅವನು ಅವರ ಮಾತನ್ನು ಕೇಳದೆ ಹೋದರೆ ಸಭೆಗೆ ಹೇಳು; ಆದರೆ ಸಭೆಯ ಮಾತನ್ನೂ ಕೇಳದೆ ಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ" (ಮತ್ತಾಯ 18:15–17). ಈ ವಚನದ ಪ್ರಕಾರ ಇದಕ್ಕೆ ಮೊದಲು ನೋಡಿದ ವಚನಗಳ ಪ್ರಕಾರ ಸಭೆಯು ಅಕ್ರಮವಾಗಿರುವ, ಭಕ್ತಿಹೀನನಾಗಿರುವ ಸದಸ್ಯನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಗಮನಿಸುತ್ತೇವೆ. ಈ ಅಕ್ರಮ ಸದಸ್ಯನು ಮಾನಸಾಂತರ ಹೊಂದಿದರೆ ಒಳ್ಳೇಯದೆ. ಇಲ್ಲವಾದರೆ ಪಾಪಮಾಡಿದ ಸಹೋದರನೊಂದಿಗೆ ಒಬ್ಬ ಸಹೋದರನು ಮಾತನಾಡಿದರೂ ಅವನು ಬದಲಾಗದಿದ್ದರೆ, ಇಬ್ಬರು ಮೂವರು ಹೋಗಿ ಅವನೊಂದಿಗೆ ಮಾತನಾಡಬೇಕು. ಆಗಲು ಸಹ ಅವನು ಸರಿಪಡಿಸಿಕೊಳ್ಳದಿದ್ದರೆ ಸಭೆಯು ಅವನ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಅವನ ಸಂಗತಿಯನ್ನು ಸಭೆಗೆ ಹೇಳಬೇಕು. ಸಭೆಯ ಎಚ್ಚರಿಕೆಯನ್ನು ಸಹ ಅವನು ಕೇಳಿ ಮಾನಸಾಂತರ ಹೊಂದದೇ ಹೋದರೆ ಅವನನ್ನು ಸಭೆಯಿಂದ ಹೊರಗೆ ಹಾಕಬೇಕು (ತೀತ 3:10,11). ಅದು ನಡೆದ ನಂತರ ಅವನು ಅನ್ಯನಂತೆ ಪರಿಗಣಿಸಲ್ಪಡಬೇಕು. ಸದಸ್ಯರು ಅವನೊಂದಿಗೆ ಊಟಮಾಡುವುದಕ್ಕೂ, ಅವನೊಂದಿಗೆ ಸಹವಾಸ ಮಾಡುವುದಕ್ಕೂ ತಿರಸ್ಕರಿಸಬೇಕು. ಸಭೆಯೊಂದಿಗೆ ಅವನಿಗಿರುವ ಸಹವಾಸವನ್ನು ಪೂರ್ತಿಯಾಗಿ ಇಲ್ಲದಂತೆ ಮಾಡುವುದು ಇದರ ಉದ್ದೇಶವಾಗಿದೆ. ಆ ರೀತಿಯಲ್ಲಿ ಮಾಡುವುದರಿಂದ ಅವನು ಪಾಪದಲ್ಲಿಯೇ ಇದ್ದುಕೊಂಡು ಸಭೆಗೆ ಅಂಗೀಕಾರ ಯೋಗ್ಯನಲ್ಲವೆಂದು ತಿಳಿಯಪಡಿಸಬೇಕು. ಇದರಿಂದಾಗಿ ಅವನು ಮಾನಸಾಂತರ

ಹೊಂದುವದಕ್ಕೂ ಅವನ ಅಪರಾಧವನ್ನು ಒಪ್ಪಿಕೊಳ್ಳುವದಕ್ಕೂ ಕ್ಷಮಾಪಣೆ ಕೇಳುವದಕ್ಕೂ ಅವನಿಗೆ ಅವಕಾಶವಾಗುತ್ತದೆ (1ಥೆಸಲೋನಿಕ 3:14,15; ಯಾಕೋಬ 5:16). ಈ ರೀತಿಯಲ್ಲಿ ಮಾತ್ರವೇ ಅವನು ಕ್ಷಮಿಸುವುದಕ್ಕೆ ಅವಕಾಶವಿರುತ್ತದೆ.

ಭಕ್ತಿಹೀನರನ್ನು ಕುರಿತು ಸಭೆಯು ಕರ್ತನ ಮಾರ್ಗವನ್ನು ಅನುಸರಿಸಿ ಕ್ರಮಶಿಕ್ಷಣವನ್ನು ವಾಕ್ಯಗಳ ಪ್ರಕಾರ ಉಪಯೊಗಿಸಿದಾಗ ಅದು ಪವಿತ್ರವಾಗಿ ಎಣಿಸಲ್ಪಟ್ಟು ಅದಕ್ಕೆ ಉಂಟಾಗುವ ಅನೇಕ ಸಮಸ್ಯೆಗಳಿಂದ ಸ್ವತಂತ್ರವಾಗಿ ಇರುತ್ತದೆ. ಕ್ರಮಶಿಕ್ಷಣವನ್ನು ಅನುಸರಿಸದಿದ್ದಾಗ ಎಲ್ಲರು ಅದರ ಪ್ರತಿಫಲವನ್ನು ಅನುಭವಿಸಬೇಕಾಗುತ್ತದೆ. ಸದಸ್ಯರು ಸಭೆಯಿಂದ ಹೊರಗೆ ಹಾಕಲ್ಪಡಬೇಕೆಂದು ದೇವರ ಉದ್ದೇಶವಲ್ಲ. ಆದರೂ ಸಭೆಯ ಸದಸ್ಯರ ಜೀವಿತದಲ್ಲಿ ಪಾಪವನ್ನು ಖಂಡಿಸದಂತೆ ಇರುವದು ಆತನ ಚಿತ್ತವಲ್ಲ. ನಿಜವಾಗಿಯೂ ಕರ್ತನ ಮಾರ್ಗವೇ ಸರಿಯಾದ ಮಾರ್ಗವಾಗಿದೆ. ಕ್ರಮಶಿಕ್ಷಣದಲ್ಲಿ, ವಾಕ್ಯಗಳಲ್ಲಿ ಹೇಳಿರುವ ಆತನ ಮಾರ್ಗವನ್ನೇ ನಾವೂ ಅನುಸರಿಸಬೇಕು.

ಇಸ್ರಾಯೇಲರನ್ನು, ಅನನೀಯನನ್ನು, ಸಪ್ಫೈರಳನ್ನು ಶಿಕ್ಷಿಸಿದ ರೀತಿಯಲ್ಲಿ ಇಂದಿನ ಸಭೆಯ ಸದಸ್ಯರನ್ನು ಕರ್ತನು ಶಿಕ್ಷಿಸುತ್ತಿಲ್ಲವಾದ್ದರಿಂದ ಎಲ್ಲರು ಆತನಿಗೆ ಕೃತಜ್ಞತೆಯುಳ್ಳವರಾಗಿರಬೇಕು. ಅವರನ್ನು ಭೌತಿಕವಾಗಿ ನಾಶಮಾಡಿದನು (1ಕೊರಿಂಥ 10:12; ಅ.ಕೃ.5:1–11). ನಮ್ಮ ಜೀವಿತಗಳನ್ನು ನಾವು ಸರಿಪಡಿಸಿಕೊಳ್ಳವುದಕ್ಕೆ, ಅವಶ್ಯಕವಾದಾಗ ನಮ್ಮ ಸಹೋದರರು ನಮ್ಮನ್ನು ಕ್ರಮಶಿಕ್ಷಣದಲ್ಲಿ ಇಡುವುದಕ್ಕೆ ಕರ್ತನಾದ ಯೇಸು ಕ್ರಿಸ್ತನು ವಿವೇಕವನ್ನು ಅನುಗ್ರಹಿಸಿ ನಮ್ಮನ್ನು ಆಶೀರ್ವಾದಿಸಿದನು.

## ಪಾಠ - 19

# ಸಭೆಗೆ ಪುನಃ ಸೇರಿಕೋಳ್ಳುವದು
# (Return to the Church)

ಸಭೆಯಲ್ಲಿರುವ ಪ್ರತಿ ಸದಸ್ಯನು ಕರ್ತನಿಗೆ ನಂಬಿಗಸ್ತನಾಗಿ ಇರಬೇಕೆಂದು ಆತನು ಅಪೇಕ್ಷಿಸುತ್ತಿದ್ದಾನೆ. ಅವನನ್ನು ಪ್ರೋತ್ಸಹಿಸುವುದಕ್ಕೆ ಹೊಸ ಒಡಂಬಡಿಕೆಯಲ್ಲಿ ಹೆಚ್ಚಿನದಾಗಿ ಬರೆಯಲ್ಪಟ್ಟಿದೆ. ಆದರೆ ವಿಷಾದಕರ ಸಂಗತಿ ಏನಂದರೆ ಕರ್ತನಿಗೆ ಎಲ್ಲರು ನಂಬಿಗಸ್ತರಾಗಿ ಇರುತ್ತಿಲ್ಲ. ಎಲ್ಲರಂತೆ ಸಭೆಯ ಸದಸ್ಯರು ಸಹ ಮನುಷ್ಯರೆ. ಮತ್ತು ಅವರ ಶರೀರ ಬಲಹೀನವಾದದ್ದು. ರಕ್ಷಣೆ ಹೊಂದದವನಿಗಿಂತ ಕ್ರೈಸ್ತವನಿಗೆ ಅವನ ಶೋಧನೆಯಲ್ಲಿ ಕರ್ತನು ಸಹಾಯಕನಾಗಿರುವದು, ಇತರ ಕ್ರೈಸ್ತರ ಸಹವಾಸದಲ್ಲಿರುವದು, ದೇವರ ಕೆಲಸದಲ್ಲಿ ನಿರತನಾಗಿರುವದು ಎಂಬ ಕಾರ್ಯಕ್ರಮಗಳಿದ್ದರೂ, ಅವನು ನಂಬಿಕೆಯಿಂದ ಬಿದ್ದುಹೋಗುವುದು ಸಾಧ್ಯವೇ. ಅವರು ಬಿದ್ದು ಹೋಗುವ ಅವಶ್ಯಕತೆ ಇಲ್ಲ, ಅವರು ಬಿದ್ದು ಹೋಗುವ ಅವಶ್ಯಕವಿಲ್ಲದಂತೆ ಅನೇಕ ಕಾರಣಗಳಿದ್ದರು ಅವರು ಬಿದ್ದು ಹೋಗಲಿಕ್ಕೆ ಅಸ್ಪದವಿರುತ್ತದೆ.

ನಂಬಿಕೆಯಿಂದ ದೂರವಾಗುವುದು ಸಾಧ್ಯವೆಂದು ಬೋಧಿಸುವ ಕೆಲವು ವಚನಗಳನ್ನು ನಾವು ಈಗ ನೋಡುವದು ಒಳ್ಳೇದು. ಯೇಸು ಹೇಳಿದ ಅನೇಕ ಸಾಮ್ಯಗಳು ಈ ಸತ್ಯವನ್ನು ಪ್ರಾಮುಖ್ಯವಾಗಿ ತೋರಿಸುತ್ತವೆ. ಬಿತ್ತುವವನ ಸಾಮ್ಯದಲ್ಲಿ ಸತ್ಯವನ್ನು ಅಂಗೀಕರಿಸಿದ ನಂತರ ಶೋಧನೆಗಳು, ಹಿಂಸೆಗಳು ಬಂದಾಗ ಬಿದ್ದು ಹೋದವನನ್ನು ಕುರಿತು ಯೇಸು ಬೋಧಿಸಿದನು. ಮತ್ತು ಸತ್ಯಕ್ಕೆ ವಿಧೇಯನಾದ ನಂತರ ಭೌತಿಕ ಸಂಬಂಧವಾದ ವಿಚಾರಗಳಿಂದಲೂ, ಹಣದ ವ್ಯಾಮೋಹದಿಂದಲೂ ನಂಬಿಕೆಯಿಂದ ಬಿದ್ದು ಹೋದವನನ್ನು ಕುರಿತು ಯೇಸು ಬೋಧಿಸಿದನು (ಮತ್ತಾಯ 13:18–23). ಕರ್ತನು ತಿರುಗಿ ಬರುವಷ್ಟರೊಳಗಾಗಿ ಕ್ರೈಸ್ತರು ಸಹ ಹೇಗೆ ಸಿದ್ಧವಾಗಿ ಇರುವುದಿಲ್ಲವೋ ಎಂದು ಹತ್ತು ಮಂದಿ ಕನ್ಯೆಯರ ಕುರಿತ ಸಾಮ್ಯವು ಬೋಧಿಸುತ್ತದೆ (ಮತ್ತಾಯ 25:1–13). ತಲಾಂತುಗಳನ್ನು ಕುರಿತಂತಹ, ತಪ್ಪಿಸಿಕೊಂಡು ಹೋಗಿರುವ ಮಗನನ್ನು ಕುರಿತು ಇರುವ ಸಾಮ್ಯಗಳು ಈ ಸತ್ಯವನ್ನು ಬೋಧಿಸುತ್ತವೆ (ಮತ್ತಾಯ 25:14–30; ಲೂಕ 15:11–32). ಉಳಿದ ವಚನಗಳಿಗಾಗಿ ಈ ಮುಂದಿನವುಗಳನ್ನು ಓದಿರಿ: ಅ.ಕೃ.5:1–11; 8:9–24; 2ಪೇತ್ರ

2:20–22; ಮತ್ತಾಯ 13:41,42. ನಂಬಿಕೆಯಿಂದ ಬಿದ್ದು ಹೋಗುವುದನ್ನು ಕುರಿತು ಎಚ್ಚರಿಸುತ್ತಾ ಕರ್ತನು ನಂಬಿಕೆಯಿಂದ ಜೀವಿಸುವುದು ಅತ್ಯವಶ್ಯಕವೆಂದು ವಾಕ್ಯಗಳು ಬೋಧಿಸುವುದರಿಂದ ಒಬ್ಬನು ಆ ಎಚ್ಚರಿಕೆಗಳನ್ನು ಅನುಸರಿಸದೇ ನಂಬಿಗಸ್ತನಾಗಿ ಜೀವಿಸದೇ ಹೋದರೆ ನಂಬಿಕೆಯಿಂದ ಬಿದ್ದುಹೋಗುವದು ಸಾಧ್ಯವಾಗುವುದು ಎಂದು ತಿಳಿದುಕೊಳ್ಳುತ್ತೇವೆ. ಪಾಪದಲ್ಲಿ ಬಿದ್ದು ಹೋದವರಿಗೆ ಏನು ಸಂಭವಿಸುತ್ತದೆ? ಅವರು ಹಾಗೇ ಪಾಪಕ್ಕೆ ಜಾರಿಹೋಗಿದ್ದರಿಂದ ಅವರು ನಾಶವಾಗಿಹೋಗುತ್ತಾರೆಂದು ಇದರ ಅರ್ಥವಾ? ಹೌದು, ಹಾಗೇ ನಡೆಯುವುದು ಸಾಧ್ಯವೇ. ಆದರೆ ಅಂತಹ ವ್ಯಕ್ತಿಗೂ ಸಹ ಶುಭವರ್ತಮಾನ ಒಂದು ಇದೆ. ಹೇಗಂದರೆ ಅತಿಕ್ರಮಿಸಿರುವ ಕ್ರೈಸ್ತನನ್ನು ಕ್ಷಮಿಸುವುದಕ್ಕೆ ದೇವರ ಆಜ್ಞೆ ಒಂದು ಇದೆ (ಗಲಾತ್ಯ 6:1; ಯಾಕೋಬ 5;19,20; ಮತ್ತಾಯ 18:21,22,35)

ತಪ್ಪು ಮಾಡಿದ ಕ್ರೈಸ್ತವನು ತಾನು ಮಾಡಿದ ಪಾಪಗಳ ನಿಮಿತ್ತ ಮಾನಸಾಂತರ ಹೊಂದಿ, ತನ್ನ ತಪ್ಪುಗಳನ್ನು ಒಪ್ಪಿಕೊಂಡು ತನ್ನ ಪಾಪಗಳು ಕ್ಷಮಿಸಲ್ಪಡುವಂತೆ ದೇವರನ್ನು ಪ್ರಾರ್ಥಿಸಬೇಕೆಂದು ಬೈಬಲ್ ಬೋಧಿಸುತ್ತದೆ. ಒಬ್ಬನು ದೇವರ ಬಳಿ ತನ್ನ ಹೃದಯದಲ್ಲಿ ಪಾಪಮಾಡಿದರೆ ಅವನು ಆ ಪಾಪದ ವಿಷಯದಲ್ಲಿ ಮಾನಸಾಂತರ ಹೊಂದಿ, ಅದನ್ನು ದೇವರ ಬಳಿಯಲ್ಲಿ ಒಪ್ಪಿಕೊಂಡು, ಕ್ಷಮೆಯನ್ನು ಕೇಳಬೇಕು (ಮತ್ತಾಯ 6:13). ಒಬ್ಬನು ತನ್ನ ಬಂಧು, ಅಥವಾ ಸ್ನೇಹಿತ, ಅಥವಾ ನೆರೆಯವನ ವಿಷಯದಲ್ಲಿ ಪಾಪ ಮಾಡಿದರೆ ಅವನು ಆತನ ಬಳಿಗೆ ಹೋಗಿ ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮಾಪಣೆಗಾಗಿ ದೇವರನ್ನು ಕೇಳಿಕೊಳ್ಳಬೇಕು (ಮತ್ತಾಯ 5:23,24). ಆದರೆ ಒಬ್ಬನ ಪಾಪವು ಬಹಿರಂಗವಾಗಿ ದೇವರ ಸಭೆಗೆ, ದೇವರ ನಾಮಕ್ಕೆ ಅಗೌರವ ತಂದಿದ್ದರೆ ಅವನು ತನ್ನ ಪಾಪದ ವಿಷಯದಲ್ಲಿ ಮಾನಸಾಂತರ ಹೊಂದಿ, ಸಭೆಯ ಎದುರಿನಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡು ಪಾಪಗಳ ಕ್ಷಮಾಪಣೆಗಾಗಿ ದೇವರನ್ನು ಪ್ರಾರ್ಥಿಸಬೇಕು. ಆ ವ್ಯಕ್ತಿಯು ನಿಜವಾಗಿಯೂ ದೇವರ ಬಳಿಗೆ ತಿರುಗಿ ಸೇರಿಕೊಳ್ಳಬೇಕೆಂದು ಹುಡುಕುವುದಾದರೆ ಕರ್ತನು ಅವನನ್ನು ಅಂಗೀಕರಿಸುವದು ಮಾತ್ರವಲ್ಲದೇ ಸಭೆಯು ಅವನ ದೋಷಗಳನ್ನು ಕ್ಷಮಿಸಿ ಕರ್ತನಿಗೆ ಬದಲಾವಣೆಯಾದ ವ್ಯಕ್ತಿಯಂತೆ ಅವನನ್ನು ಅಂಗೀಕರಿಸಿಕೊಳ್ಳಬೇಕು (ಮತ್ತಾಯ 6:14,15).

ಸಭೆಯಲ್ಲಿ ಸೇರಿಸಿಕೊಳ್ಳುವುದಕ್ಕೆ ಒಬ್ಬನು ಮಾಡಬೇಕಾದ ಕೆಲಸವನ್ನು ಈಗ ನಾವು ಜಾಗ್ರತೆಯಿಂದ ನೋಡೋಣ. ಪಾಪಮಾಡಿದ ಮೇಲೆ ಮಾನಸಾಂತರ

ಹೊಂದಿ ಕರ್ತನ ಬಳಿಗೆ ಸೇರಬೇಕೆಂದು ಆಶಿಸುವ ಕ್ರೈಸ್ತನಿಗೆ ಈ ಕೆಳಗಿನ ನಿಯಮಗಳು ಅನ್ವಯಿಸುತ್ತವೆ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು.

**1. ಅವನು ತನ್ನ ಪಾಪಗಳ ವಿಷಯದಲ್ಲಿ ಮಾನಸಾಂತರ ಹೊಂದಿ ಪಶ್ಚಾತ್ತಾಪ ಪಡಬೇಕು:**

ಕ್ರೈಸ್ತವನೊಬ್ಬನು ಮನಃಪೂರ್ವಕವಾಗಿಯೂ ಅಥವಾ ತಿಳಿಯದೆಯೋ ಸಭೆಯಿಂದ ದೂರವಾದಾಗ ಅಥವಾ ತನ್ನ ನಂಬಿಕೆಯನ್ನು, ಜವಾಬ್ದಾರಿಯನ್ನು ಕಾಪಾಡಿಕೊಳ್ಳದೆ ಹೋದರೆ, ಭಕ್ತಿಹೀನನಾಗಿ ಜೀವಿಸುತ್ತಿದರೆ ಅಂತವನು ಕರ್ತನ ಬಳಿಗೆ ತಿರುಗಿ ಸೇರಿಕೊಳ್ಳುವುದಕ್ಕೆ ತನ್ನ ಪಾಪಗಳ ವಿಷಯದಲ್ಲಿ ಮೊದಲು ಪಶ್ಚಾತ್ತಾಪ ಪಡಬೇಕು. ಅಂದರೆ ಅವನು ತನ್ನ ಪಾಪದ ಜೀವಿತವನ್ನು ವಿಸರ್ಜಿಸಬೇಕು. ಅವನು ಬದಲಾವಣೆಹೊಂದಿ ನೀತಿಯ ಮಾರ್ಗದಲ್ಲಿ ನಡೆಯಬೇಕು. ಕರ್ತನಿಗೆ ವಿಧೇಯನಾದ ನಂತರ ದೇವರ ವರವನ್ನು ಹಣಕೊಟ್ಟು ಸಂಪಾದಿಸಿಕೊಳ್ಳಬೇಕೆಂದು ಪಾಪಮಾಡಿದ ಮಂತ್ರಗಾರನಾದ ಸೀಮೋನನಿಗೆ ಪೇತ್ರನು ಹೀಗೆ ಹೇಳಿದನು. "ಆದದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನೋ ಏನೋ ಆತನನ್ನು ಬೇಡಿಕೋ" (ಅ,ಕೃ.8:22). ತಪ್ಪಿಹೋದ ಮಗನು ತನ್ನ ಪಾಪದ ಜೀವಿತವನ್ನು ಬಿಟ್ಟು ತಂದೆಯ ಬಳಿಗೆ ತಿರುಗಿ ಬಂದು ಅವನು ಮಾನಸಾಂತರ ಹೊಂದಿದವನಂತೆ ನಿರೂಪಿಸಿದನು. ಒಬ್ಬನು ಪಾಪದಲ್ಲಿಯೇ ಇದ್ದು ಅವನನ್ನು ಕರ್ತನು, ಸಭೆಯು ಅಂಗೀಕರಿಸಬೇಕೆಂದು ಕೋರಿಕೊಳ್ಳುವುದು ಸರಿಯಲ್ಲ.

**2.ಒಬ್ಬನು ತನ್ನ ದೋಷಗಳನ್ನು ಒಪ್ಪಿಕೊಳ್ಳಬೇಕು :**

"ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಬಹು ಬಲವಾಗಿದೆ" (ಯಾಕೋಬ 5:16). ಎಂದು ಯಾಕೋಬನು ಹೇಳಿದ್ದಾನೆ. ಒಬ್ಬನು ತನ್ನ ಪಾಪಗಳನ್ನೆಲ್ಲಾ ಕ್ರಮವಾಗಿ ಹಾಡಿನಂತೆ ವಿವರವಾಗಿ ವರ್ಣಿಸಬೇಕೆಂದು ಇದರ ಅರ್ಥವಲ್ಲ. ಆದರೆ ಅವನು ತನ್ನನ್ನು ತಾನು ತಗ್ಗಿಸಿಕೊಂಡು ತನ್ನ ಸಹೋದರರ ಬಳಿಯಲ್ಲಿ ತನ್ನ ದೋಷಗಳನ್ನು ಒಪ್ಪಿಕೊಳ್ಳಬೇಕು. ತಪ್ಪಿಹೋದ ಮಗನು ಹೀಗೆ ಒಪ್ಪಿಕೊಂಡನು: "ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ ಮುಂದೆ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನ್ನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು

ಹೇಳುವೆನು ಅಂದುಕೊಂಡು ಎದ್ದು ತನ್ನ ತಂದೆಯ ಕಡೆಗೆ ಬಂದನು" (ಲೂಕ 15:18,19). ಒಬ್ಬನು ಗರ್ವದಿಂದ ತುಂಬಿದವನಾಗಿ ತನ್ನ ಪಾಪವನ್ನು ಒಪ್ಪಿಕೊಳ್ಳುವುದಕ್ಕೆ ನಿರಾಕರಿಸಿದರೆ ಅವನು ಬದಲಾಗುವುದಕ್ಕೆ ಸಿದ್ಧನಾಗಿಲ್ಲ ಎಂದು ಅರ್ಥ. ಅವನು ನಿಯಮಾನುಸಾರವಾಗಿ ತಿರುಗಿ ಸೇರಿಕೊಳ್ಳುವುದಕ್ಕೆ ಒಪ್ಪಿಕೊಳ್ಳುವುದಿಲ್ಲ, ಆದರೆ ಕರ್ತನ ಚಿತ್ತಕ್ಕೆ ವಿಧೇಯನಾಗಬೇಕು. ಸೀಮೋನನು ತನ್ನ ಪಾಪದ ಸ್ಥಿತಿಯನ್ನು ಕುರಿತು ಹೇಳಿದಾಗ "ಅದಕ್ಕೆ ಸೀಮೋನನು ನೀವು ಹೇಳಿರುವ ಸಂಗತಿಗಳಲ್ಲಿ ಯಾವುದು ನನ್ನ ಮೇಲೆ ಬಾರದಂತೆ ನನಗೋಸ್ಕರ ನೀವೇ ಕರ್ತನನ್ನು ಬೇಡಿಕೊಳ್ಳಿರಿ ಎಂದು ಹೇಳಿದನು" (ಅ,ಕೃ.8;24). ಆದ್ದರಿಂದ ಸೀಮೋನನು ತನ್ನ ಪಾಪವನ್ನು ಒಪ್ಪಿಕೊಂಡು ಅದನ್ನು ತಿದ್ದಿಕೊಳ್ಳಲೆನಿಸಿಕೊಂಡನು.

**3.ಪಾಪಗಳ ಕ್ಷಮಾಪಣೆಗಾಗಿ ಒಬ್ಬನು ದೇವರ ಬಳಿಯಲ್ಲಿ ಪ್ರಾರ್ಥಿಸಬೇಕು :**

ಒಬ್ಬನು ತನ್ನ ಪಾಪಗಳನ್ನು ಒಪ್ಪಿಕೊಳ್ಳುವುದು ಮಾತ್ರವಲ್ಲದೇ, ಕ್ಷಮಾಪಣೆಗಾಗಿ ದೇವರನ್ನು ಬೇಡಿಕೊಳ್ಳಬೇಕು ಎಂದು ಯಾಕೋಬ 5:16ರಲ್ಲಿ ಹೇಳಿದೆ. ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾ ತಪ್ಪಿಸಿಕೊಂಡ ಮಗನು ತನ್ನ ತಂದೆಯ ಬಳಿಗೆ ಬಂದನು. ತಂದೆಯು ಅವನಿಗೆ ಕೃಪೆ ತೋರಿಸಿ ತಿರುಗಿ ಅವನನ್ನು ಸೇರಿಸಿಕೊಂಡನು (ಲೂಕ 15:21–25).

ಒಬ್ಬ ವ್ಯಕ್ತಿ ತನ್ನ ಕುಟುಂಬದಲ್ಲಿ ಜನಿಸಿದಾಗ ಅವನು ಯಾವಾಗಲೂ ಆ ಕುಟುಂಬದ ಸದಸ್ಯನಾಗಿರುತ್ತಾನೆ. ದೇವರ ಕುಟುಂಬದ ವಿಷಯದಲ್ಲಿಯೂ ಸಹ ಅದೇ ಸತ್ಯ. ಆತನ ಸಭೆಯಾದರೆ ತಂದೆಯ ಬಳಿಯಿಂದ ಬಾಧ್ಯತೆಯನ್ನು ಕಳೆದುಕೊಳ್ಳುವುದಿಲ್ಲವೆಂದು ಇದರ ಅರ್ಥವಲ್ಲ. ಒಬ್ಬನು ಪರಲೋಕದ ಬಾಧ್ಯತೆಯನ್ನು ಕಳೆದುಕೊಂಡರೆ ಅವನು ನಿತ್ಯನಾಶನಕ್ಕೆ ಹೋಗುವನು. ಅದು ಬಹು ಭಯಂಕರವಾದದ್ದು. ಆದರೆ ಒಬ್ಬನು ದೇವರಿಂದಲೂ ಸಭೆಯಿಂದಲೂ ದೂರವಾಗಿದ್ದರೂ ಮೊದಲಿದ್ದ ಸ್ಥಾನಿಕ ಸಭೆಗೆ ಸೇರಿಕೊಳ್ಳುವುದಕ್ಕೆ ಒಂದು ಮಾರ್ಗವಿದೆ ಎಂದು ತಿಳಿದುಕೊಳ್ಳುವುದು ಧನ್ಯಕರವಾದ್ದು.

ಒಬ್ಬನು ಕ್ಷಮಿಸಲ್ಪಡುವಂತೆ ಕರ್ತನ ನಿಯಮಗಳಿಗೆ ವಿಧೇಯನಾದರೆ ಅವನ ಪರಲೋಕದ ತಂದೆಯು, ಸಭೆಯು ಅವರ ಪ್ರೀತಿಯಲ್ಲಿಗೆ, ಸಹವಾಸದಲ್ಲಿಗೆ ತಿರುಗಿ ಸೇರಿಸಿಕೊಳ್ಳುವರು. ಬೈಬಲ್ ಇದನ್ನು ಬೋಧಿಸುತ್ತದೆ ಆದ್ದರಿಂದ ಇದನ್ನು ಸಭೆಯು ಬೋಧಿಸುತ್ತಾ ಅನುಸರಿಸಬೇಕು.

ಪಾಠ – 20

# ಸಭೆಯೊಳಗಿನ ಆಶೀರ್ವಾದಗಳು
## (Blessings in the Church)

ಕ್ರಿಸ್ತನ ಸಭೆಯನ್ನು ಅನೇಕರು ಒಂದು ಮತಶಾಖೆಯಂತೆ ನೋಡುತ್ತಾರೆ. ಆದುದರಿಂದ ಅವರು ತಮ್ಮ ಗೌರವವನ್ನು ಕಳೆದುಕೊಂಡರು. ಅವರು ಕ್ರೈಸ್ತರಂತೆ ಇರಬೇಕೆಂದು ಅಂದುಕೊಳ್ಳುವರು ಹೊರುತು ಕ್ರಿಸ್ತನ ಸಭೆಯೊಂದಿಗೆ ಮಾತ್ರ ಸಹವಾಸದಲ್ಲಿರುವದಿಲ್ಲ. ಬೈಬಲ್ ವರ್ಣಿಸುವ ರೀತಿಯಲ್ಲಿ ಅವರು ಸಭೆಯನ್ನು ಗಮನಿಸಿದರೆ, ಅವರ ಮನಸ್ಥಿತಿ ಬಹಳ ಬೇರೆಯಾಗಿ ಇರುತ್ತದೆ. ಆಗ ಅವರು ಸಹ ಅದರಲ್ಲಿ ಪಾಲುಗಾರರಾಗಿ ಇರಬೇಕೆಂದು ಕೋರಿಕೊಳ್ಳುತ್ತಾರೆ. ಕ್ರಿಸ್ತನ ಸಭೆಯಲ್ಲಿ ಇಲ್ಲದೆ ಹೋದರೆ ಅವರು ಕ್ರೈಸ್ತವರಾಗಿರಲು ಅಸಾಧ್ಯವೆಂದು ಅವರು ತಪ್ಪದೇ ಗ್ರಹಿಸಿಕೊಳ್ಳುವರು. ಈ ಸಂಗತಿಯು ಸತ್ಯವಾಗಿದೆ. ಮತ್ತು ಅವರು ಆಶೀರ್ವಾದಗಳೊಂದಿಗೆ ತುಂಬಿರುವ ಮನೆಯಲ್ಲಿ ಸದಸ್ಯರಾಗಿ ಇದ್ದೇವೆಂದು ಹೀಗೆ ಗ್ರಹಿಸಿಕೊಳ್ಳುವರು.

ಆತ್ಮಸಂಬಂಧವಾದ ಪ್ರತಿಯೊಂದು ಆಶೀರ್ವಾದಗಳು ಕ್ರಿಸ್ತನಲ್ಲಿವೆ (ಎಫೆಸ 1:3), ಆತನ ಶರೀರವಾದ ಸಭೆಯಲ್ಲಿವೆ ಎಂದು ಪೌಲನು ಹೇಳಿದ್ದಾನೆ (ಕೊಲೊಸ್ಸೆ 1:18; ಎಫೆಸ 1:22,23). ಆದ್ದರಿಂದ ಅಂತಹ ಆಶೀರ್ವಾದಗಳೆಲ್ಲವೂ ಸಭೆಯಲ್ಲಿವೆ. ಅವೆಲ್ಲವೂ ಸಭೆಯಲ್ಲಿದ್ದಾಗ, ಸಭೆಯ ಹೊರಗೆ ಆತ್ಮೀಯ ವರಗಳು ಏನೂ ಇಲ್ಲವೆಂದು ಇದರ ಅರ್ಥ. ಇದು ಸತ್ಯವಾಗಿರುವದರಿಂದ ನಂತರ ನಮ್ಮ ಪ್ರಶ್ನೆ ಸಹಜವಾಗಿ ಏನಂದರೆ ಒಬ್ಬನು ಕ್ರಿಸ್ತನಲ್ಲಿಗೆ, ಆತನ ಸಭೆಯಲ್ಲಿಗೆ ಹೇಗೆ ಪ್ರವೇಶಿಸುವನು.

ಕ್ರಿಸ್ತನಲ್ಲಿಗೆ ಆತನ ಸಭೆಯಲ್ಲಿಗೆ ಪ್ರವೇಶಿಸಲು ಒಂದೇ ಒಂದು ಮಾರ್ಗವಿದೆ. ಅದು ಆತನ ಸುವಾರ್ತೆಗೆ ಒಳಗಾಗುವುದರ ಮೂಲಕ ಮಾತ್ರ. ಒಬ್ಬನು ರಕ್ಷಣೆ ಹೊಂದಬೇಕಾದರೆ ಅವನು ಸುವಾರ್ತೆಯನ್ನು ಕೇಳಬೇಕು (ರೋಮಾ 10:17). ಅದನ್ನು ನಂಬಬೇಕು (ಇಬ್ರಿಯ 11:6). ತನ್ನ ಪಾಪಗಳ ವಿಷಯದಲ್ಲಿ ದೇವರ ಕಡೆಗೆ ತಿರುಗಿಕೊಳ್ಳಬೇಕು, ಮಾನಸಾಂತರ ಹೊಂದಬೇಕು (ಅ.ಕೃ.17:30). ಕ್ರಿಸ್ತನನ್ನು ಒಪ್ಪಿಕೊಳ್ಳಬೇಕು (ಮತ್ತಾಯ 10:32). ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು

(ಅ.ಕೃ.2:38) ಎಂದು ವಾಕ್ಯಗಳು ಬೋಧಿಸುತ್ತವೆ. ಆದ್ದರಿಂದಲೇ "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" ಎಂದು ಬರೆದಿರುವದನ್ನು ನಾವು ನೋಡುತ್ತೇವೆ (ರೋಮಾ 6:3). ಮತ್ತೆ "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" ಎಂದು ಬರೆದಿರುವುದನ್ನು ನೋಡಬಹುದು (ಗಲಾತ್ಯ 3:26,27). ಕ್ರಿಸ್ತ ಯೇಸುವಿನಲ್ಲಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು ಅಂದರೆ ಆತನ ಶರೀರದೊಳಕ್ಕೆ ಅಥವಾ ಸಭೆಯೊಳಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು ಎಂದು ಗಮನಿಸುವುದಕ್ಕೆ ಈ ಕೆಳಗಿನ ವಚನವನ್ನು ಗಮನಿಸು: "ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರೂ ಒಂದೇ ದೇಹವಾಗುವುದಕ್ಕೆ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು" (1ಕೊರಿಂಥ 12:13). ಕ್ರಿಸ್ತನಲ್ಲಿಗೆ, ಆತನ ಶರೀರದೊಳಕ್ಕೆ ಒಬ್ಬನು ಸೇರುವ ಮಾರ್ಗವು ಇದು ಒಂದೇ.

ಸಭೆಯಲ್ಲಿಗೆ ಪ್ರವೇಶಿಸುವುದು ಹೇಗೆ ಎಂದು ನಾವು ತಿಳಿದುಕೊಂಡ ನಂತರ, ಅದರಲ್ಲಿ ಆತ್ಮೀಯ ಆಶೀರ್ವಾದಗಳನ್ನು ಕುರಿತು ನೋಡಿಕೊಳ್ಳೋಣ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ವಿವರಿಸಲಾಗಿದೆ:

**1.ಕ್ಷಮಾಪಣೆ :**

"ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು" (ಕೊಲೊಸ್ಸೆ 1:13). ಇಲ್ಲಿ ಹೇಳಲ್ಪಟ್ಟಿರುವ ಸಭೆಯು ರಾಜ್ಯವೇ (ಮತ್ತಾಯ 16:18,19). ಅದು ಕ್ರಿಸ್ತನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟಿದೆ (ಅ.ಕೃ.20:28). ಆತನ ರಕ್ತದ ಮೂಲಕ ನಮಗೆ ಪಾಪಕ್ಷಮಾಪಣೆ ದೊರೆಯುತ್ತದೆ.

**2.ರಕ್ಷಣೆ :**

"ಆದಕಾರಣ ದೇವರಾರಿಸಿಕೊಂಡವರು ನನ್ನ ಕೂಡ ಕ್ರಿಸ್ತ ಯೇಸುವಿನಲ್ಲಿರುವ ರಕ್ಷಣೆಯನ್ನು ನಿತ್ಯಪ್ರಭಾವ ಸಹಿತವಾಗಿ ಹೊಂದಬೇಕೆಂದು ನಾನು ಅವರಿಗೋಸ್ಕರ ಎಲ್ಲವನ್ನೂ ತಾಳಿಕೊಳ್ಳುತ್ತೇನೆ" (2ತಿಮೊಥೆ 2:10). ಕ್ರಿಸ್ತ ಯೇಸುವಿಗೆ ವಿಧೇಯನಾಗುವದರ ಮೂಲಕ ನಾವು ಪಾಪದಿಂದ ಬಿಡುಗಡೆ ಹೊಂದುತ್ತೇವೆ (ಮಾರ್ಕ 16:16). ಆದ್ದರಿಂದ ಆತನ ಸಭೆಯಲ್ಲಿ ಸೇರಿಸಲ್ಪಡುವೆವು (ಅ.ಕೃ. 2:47).

**3.ಬಿಡುಗಡೆ :**

"ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ" (ಎಫೆಸ 1:7). ದುಷ್ಟನಿಂದ ನಾವು ವಿಮೋಚಿಸಲ್ಪಟ್ಟು ಬಿಡುಗಡೆ ಹೊಂದಿದ್ದೇವೆ.

**4.ಅಪರಾಧ ನಿರ್ಣಯವಿಲ್ಲ :**

"ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧ ನಿರ್ಣಯವಿಲ್ಲ......" (ರೋಮಾ 8:1–3). ಅಪರಾಧ ನಿರ್ಣಯವಿಲ್ಲ ಎಂಬ ವಾಗ್ದಾನವು ಕ್ರಿಸ್ತನಲ್ಲಿರುವವರಿಗೆ, ಸಭೆಯುಲ್ಲಿರುವವರಿಗೆ ಮಾಡಲ್ಪಟ್ಟಿದೆ. ಅವರು ಶರೀರಾನುಸಾರವಾಗಿ ಅಲ್ಲದೇ ಆತ್ಮನುಸಾರವಾಗಿ ನಡೆದುಕೊಳ್ಳಬೇಕೆಂಬ ನಿಯಮದ ಮೇಲೆ ಹಾಕಲ್ಪಟ್ಟಿದೆ.

**5.ನೂತನ ಸೃಷ್ಟಿ :**

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2ಕೊರಿಂಥ 5:17). ಅಂದರೆ ನಾವು ಕ್ರಿಸ್ತನಲ್ಲಿಯೂ ಆತನ ಸಭೆಯಲ್ಲಿಯೂ ನೂತನ ಜನರಾಗಿದ್ದೇವೆ. ನಮ್ಮ ಜೀವಿತಗಳು ನೂತನವಾಗಿ ಆರಂಭಿಸುವ ಸಮಯವಿದು. ಅದುವೇ ಒಂದು ಒಳ್ಳೇಯ ಆಶೀರ್ವಾದವಾಗಿದೆ. ತಮ್ಮ ಜೀವಿತವನ್ನು ಹೊಸದಾಗಿ ಪ್ರಾರಂಭಿಸಬೇಕೆಂದು ಈ ಲೋಕದಲ್ಲಿ ಯಾರು ಕೋರಿಕೊಳ್ಳುತ್ತಿಲ್ಲ.

**6.ಸಮಾಧಾನ :**

"ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ

ಉಭಯರನ್ನೂ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ" (ಎಫೆಸ 2:16).

**7.ಕೃಪೆ :**

"ನನ್ನ ಮಗನೇ, ನೀನು ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಿಂದ ಬಲಹೊಂದಿದವನಾಗು" (2ತಿಮೊಥೆ 2:1).

**8.ಪ್ರೀತಿ :**

"ನಮ್ಮ ಕರ್ತನ ಕೃಪೆಯು ಅತ್ಯಧಿಕವಾಗಿದ್ದು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯನ್ನೂ ಪ್ರೀತಿಯನ್ನೂ ನನ್ನಲ್ಲಿ ಉಂಟುಮಾಡಿತು" (1ತಿಮೊಥೆ 1:14).

**9.ದೇವರ ಮಕ್ಕಳಾಗುವದು :**

"ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:26,27).

**10.ಪ್ರಾರ್ಥನೆ :**

"ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ" (1ಯೋಹಾನ 5:15) ಯೋಹಾನ 9:31 ಅನ್ನು ಸಹ ಓದು.

**11.ಅನ್ಯೋನ್ಯತೆ :**

"ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ" (1ಯೋಹಾನ 1:7).

**12.ನಿರೀಕ್ಷಣೆ :**

"ನಾವು ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಪ್ರೀತಿಪೂರ್ವಕವಾದ ನಿಮ್ಮ ಪ್ರಯಾಸವನ್ನೂ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೇಲಣ ನಿರೀಕ್ಷೆಯಿಂದುಂಟಾದ

ನಮ್ಮ ಸ್ಥೈರಣೆಯನ್ನು ನಮ್ಮ ತಂದೆಯಾದ ದೇವರ ಮುಂದೆ ಎಡೆಬಿಡದೆ ಜ್ಞಾಪಕಮಾಡಿಕೊಂಡು......" (1ಥೆಸಲೋನಿಕ 1:2,3).

**13.ಕರ್ತನ ಸನ್ನಿಧಿ ಹೊಂದಿರುವುದು :**

"ನೋಡಿರಿ ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:20) ಎಂದು ವಾಗ್ದಾನ ಮಾಡಿದನು.

**14.ಪವಿತ್ರಾತ್ಮನ ದಾನ :**

"ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ" (ಅ.ಕೃ. 2:38).

**15.ಆತ್ಮೀಯ ಆಶೀರ್ವಾದಗಳೆಲ್ಲವೂ :**

"ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3).

ಇಂತಹ ಅನೇಕ ಆಶೀರ್ವಾದಗಳಿವೆ. ಅವೆಲ್ಲವೂ ಸಭೆಯಲ್ಲಿರುವವರಿಗೆ ಮಾತ್ರ ಉಂಟಾಗುತ್ತವೆಯಾಗಲಿ ಸಭೆಯ ಹೊರಗಡೆ ಇರುವವರಿಗೆ ದೊರೆಯುವದಿಲ್ಲ. ಆದ್ದರಿಂದಲೇ ಒಬ್ಬನು ಕ್ರಿಸ್ತನ ಸಭೆಯೊಂದಿಗೆ ಸಂಬಂಧ ಹೊಂದಿದ್ದರೆ ಅವನು ಅದರಲ್ಲಿ ಭಾಗವಾಗಿರುವನೆಂದು ನಾವು ಮೊದಲು ತಿಳಿದುಕೊಂಡಿದ್ದೇವೆ. ನೀನು ಸಭೆಯ ಹೊರಗಡೆ ಜೀವಿಸಿಸಬೇಕೆಂದು ಕೋರಿಕೊಳ್ಳುತ್ತೀಯಾ? ಮಾಡಿದ ವಾಗ್ದಾನಗಳನ್ನು ಒಂದು ಸಾರಿ ಪುಟ ತಿರುಗಿಸಿ ಆಲೋಚನೆಮಾಡು, ಕ್ರಿಸ್ತನ ಹೊರಗಡೆ ಜೀವಿಸುತ್ತಾ ಅವುಗಳೆಲ್ಲವನ್ನು ಕಳೆದು ಕೊಳ್ಳುವುದಕ್ಕೆ ನೀನು ಇಷ್ಟಪಡುವೆಯಾ?

## ಪಾಠ – 21

# ಸಭೆಯ ಆರ್ಥಿಕತೆ

# (Support of the Church)

ಸಭೆಗೆ ಆರ್ಥಿಕ ಸಹಾಯ ಎಲ್ಲಿಂದ ಬರುತ್ತದೆ? ಸಭೆಯು ಉಳಿದ ಇತರ ಮತ ಸಂಸ್ಥೆಗಳಿಗಿಂತಲೂ ಬೇರೆಯಾಗಿರುವದರಿಂದ ಇದು ಸರಿಯಾದ ಪ್ರಶ್ನೆಯಾಗಿದೆ. ಉಳಿದ ಸಂಸ್ಥೆಗಳಂತೆ ಆರ್ಥಿಕ ಸಹಾಯಕ್ಕಾಗಿ ಸಭೆಯು ಬೇರೆ ಸ್ಥಳಗಳಲ್ಲಿ ಹುಡುಕಬಾರದು. ಉದಾಹರಣೆಗೆ ಸಭೆಯು ಸರ್ಕಾರದಿಂದ ಆರ್ಥಿಕ ಸಹಾಯಕ್ಕಾಗಿ ಎದುರು ನೋಡಬಾರದು. ಹಣವನ್ನು ಸಂಗ್ರಹಿಸುವ ಕೂಡಿಕೆಗಳನ್ನು ನಡೆಸಬಾರದು. ಸದಸ್ಯರು, ಸದಸ್ಯರಲ್ಲದವರು ಸಹ ಕಾಣಿಕೆಗಳನ್ನು ಕೊಡಬೇಕೆಂದು ಅಂತಹ ಕೂಡಿಕೆಗಳಲ್ಲಿ ಬಲವಂತ ಮಾಡಬಾರದು. ಪ್ರತ್ಯೇಕವಾದ ವಸ್ತುಗಳನ್ನು ಮಾರುವುದರಿಂದಾಗಲಿ, ಲಾಟರಿ ಟಿಕೆಟ್‌ಗಳನ್ನು ಮಾರುವುದರಿಂದಾಗಲಿ ಹಣವನ್ನು ಸಂಗ್ರಹಿಸಬಾರದು. ಇದು ಇತರ ಮತಶಾಖೆ ಸಂಸ್ಥೆಗಳೊಂದಿಗೆ ಸಹವಾಸ ದಾದ್ದರಿ ಸಹಯಕ್ಕಾಗಿ ಅಂತವುಗಳನ್ನು ಅಭ್ಯಾಸಿಸಬಾರದು. ಹಾಗಾದರೆ ಸಭೆಗೆ ಸಹಾಯ ಎಲ್ಲಿಂದ ಬರುತ್ತದೆ? ಈ ಸಂಗತಿಗಳನ್ನು ಲೇಖನಗಳು ಬಹಳ ವಿವರವಾಗಿ ನಮಗೆ ತಿಳಿಸುವುದನ್ನು ನಾವು ಈ ಕೆಳಗೆ ನೋಡಬಹುದು.

ಕ್ರಿಸ್ತನ ಸಭೆಯು ಅನೇಕ ಇತರ ಸ್ಥಳೀಯ ಸಭೆಗಳೊಂದಿಗೆ ಸಹವಾಸ ಹೊಂದಿರುತ್ತದೆ. ಪ್ರತಿಯೊಂದು ಸ್ಥಳೀಯ ಸಭೆಯು ಸಭೆಯ ಹಿರಿಯರನ್ನು, ಸಭಾಸೇವಕರನ್ನು, ಸುವಾರ್ತಿಕರನ್ನು, ಬೋಧಕರನ್ನು ಸದಸ್ಯರನ್ನು ಒಳಗೊಂಡಿರುತ್ತದೆ. ಪ್ರತಿ ಸ್ಥಳೀಯ ಸಭೆಯು ಕೆಲವು ನಿಯಮಗಳನ್ನು, ಜವಾಬ್ದಾರಿಗಳನ್ನು, ಅವಶ್ಯಕತೆಗಳನ್ನು, ಕೆಲಸಗಳನ್ನು ಹೊಂದಿರುತ್ತದೆ. ಪ್ರತಿ ಸ್ಥಳೀಯ ಸಭೆಯು ಉಳಿದ ಸ್ಥಳೀಯ ಸಭೆಗಳಿಂದ ಸ್ವತಂತ್ರತೆಯನ್ನು ಹೊಂದಿಕೊಂಡಿರುತ್ತದೆ. ಅದರ ಆರ್ಥಿಕ ಸಹಾಯವನ್ನು ಅದೇ ನೋಡಿಕೊಳ್ಳಬೇಕು. ಅಂದರೆ ಕ್ರಿಸ್ತನ ಸಭೆಗೆ ಈ ಪ್ರಪಂಚದಲ್ಲಿ ಒಂದು ಮುಖ್ಯಕೇಂದ್ರ (ಪ್ರಧಾನ ಕಛೇರಿ ಅಥವಾ ಹೆಡ್ ಆಫೀಸ್) ವಾಗಲಿ, ಮುಖ್ಯ ಅಧಿಕಾರಿಯಾಗಲಿ, ಆಡಳಿತ ವ್ಯವಸ್ಥೆಯಾಗಲಿ ಇಲ್ಲ. ಆದ್ದರಿಂದ ಒಂದು ಸ್ಥಳೀಯ ಸಭೆಯು ಸಹಾಯಕ್ಕಾಗಿ ಒಂದು ಅಧಿಕಾರಿಯನ್ನು ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ. ಒಂದು ಸ್ಥಳೀಯ ಸಭೆಯು ಚಿಕ್ಕದಾಗಿದ್ದಾಗ, ಅವಶ್ಯಕತೆಯಲ್ಲಿದ್ದಾಗ ತನ್ನ ಅವಶ್ಯಕತೆಯಲ್ಲಿ ಸಹಾಯಕ್ಕಾಗಿ ಬೇರೆ ಸ್ಥಳೀಯ ಸಭೆಯೊಂದಿಗೆ ಸಹವಾಸದಲ್ಲಿ

ಇರಬಹುದು. ಸಭೆಯು ಆ ರೀತಿಯಲ್ಲಿ ಸಹಾಯಮಾಡಬೇಕು ಅಥವಾ ಮಾಡಬಾರದೆಂಬ ನಿರ್ಬಂಧವಿಲ್ಲ. ಆದದರಿಂದ ಪ್ರತಿ ಸ್ಥಳೀಯ ಕ್ರಿಸ್ತನ ಸಭೆಯು ಅದು ಚಿಕ್ಕದಾಗಿದ್ದರು, ದೊಡ್ಡದಾಗಿದ್ದರು ಅದು ತನ್ನ ಆರ್ಥಿಕ ಸಹಾಯವನ್ನು ತಾನೇ ನೋಡಿಕೊಳ್ಳಬೇಕು.

ಸ್ಥಳೀಯ ಸಭೆಯು ವೈಯಕ್ತಿಕ ಕ್ರೈಸ್ತವ ಸಹೋದರರೊಂದಿಗೆ ಒಂದುಗೂಡಿರುತ್ತದೆ. ಅದರ ಪ್ರತಿಯೊಬ್ಬ ಸದಸ್ಯನೂ ಕಾಣಿಕೆಗಳು ಕೊಡಬೇಕೆಂದು ಕರ್ತನು ಆಜ್ಞಾಪಿಸಿರುತ್ತಾನೆ. ಕೊರಿಂಥದಲ್ಲಿರುವ ಸ್ಥಳೀಯ ಸಭೆಗೆ ಪೌಲನು ಹೀಗೆ ಬರೆಯುತ್ತಾನೆ: "ದೇವಜನರಿಗೋಸ್ಕರ ಹಣವಸೂಲು ಮಾಡುವದನ್ನು ಕುರಿತು ನಾನು ಹೇಳುವದೇನಂದರೆ, ಗಲಾತ್ಯದ ಸಭೆಗಳಿಗೆ ನಾನು ಹೇಳಿಕೊಟ್ಟ ಕ್ರಮದಂತೆ ನೀವೂ ಮಾಡಿರಿ. ನಾನು ಬಂದಾಗ ಹಣವಸೂಲು ಮಾಡಬೇಕಾದ ಅವಶ್ಯವಾಗದಂತೆ ನಿಮ್ಮಲ್ಲಿ ಪ್ರತಿಯೊಬ್ಬನು ತನಗೆ ಬಂದ ಸಂಪಾದನೆಯ ಮೇರೆಗೆ ವಾರವಾರದ ಮೊದಲನೆಯ ದಿನದಲ್ಲಿ ಗಂಟುಮಾಡಿ ತನ್ನ ಮನೆಯಲ್ಲಿಟ್ಟುಕೊಂಡಿರಬೇಕು" (1ಕೊರಿಂಥ 16:1,2). ಮತ್ತೆ ಹೀಗೆ ಬರೆಯುತ್ತಾನೆ: "ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ; ದುಃಖದಿಂದಾಗಲಿ ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು; ಯಾಕೆಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು" (2ಕೊರಿಂಥ 9:7). ಸಭೆಯ ಸದಸ್ಯರು ಕಾಣಿಕೆ ಕೊಡುವುದಕ್ಕೂ, ಸ್ಥಳೀಯ ಸಭೆಗೆ ಆರ್ಥಿಕವಾಗಿ ಸಹಾಯ ಮಾಡುವದಕ್ಕೂ ಈ ವಚನಗಳಲ್ಲಿ ಅವರು ಅನುಸರಿಸಿದ ಕೆಲವು ನಿಯಮಗಳನ್ನು ಆತನು ಬರೆದನು. ದಯಮಾಡಿ ಅವುಗಳನ್ನು ಗಮನಿಸು:

**1.ಅವರು ಪ್ರತಿ ಭಾನುವಾರ ಕಾಣಿಕೆ ಕೊಡಬೇಕು :**

ಆ ದಿನವು ಅವರು ಆರಾಧನೆಗೆ ಕೂಡಿಕೊಳ್ಳುವ ದಿನವೂ ಆಗಿದೆ(ಅ.ಕೃ.20:7). ಆದ್ದರಿಂದ ಅವರು ಕಾಣಿಕೆಯನ್ನು ತೆಗೆದುಕೊಂಡು ಬರಲು ಅದು ಬಹಳ ಅನುಕೂಲವಾದ ದಿನ.

**2.ಕೊಡುವುದರಲ್ಲಿ ಪ್ರತಿಯೊಬ್ಬರೂ ಪಾಲುಗಾರರಾಗಬೇಕು :**

ಅವರು ತಮ್ಮ ಹಣವನ್ನಾಗಲಿ, ಧಾನ್ಯವನ್ನಾಗಲಿ ಅಥವಾ ಮತ್ತೇನನ್ನಾದರೂ ಕೊಡಬಹುದು. ಕೊಡುವುದು ಸಭೆಗೆ ಪ್ರಯೋಜನಕರವಾಗಿಯೂ, ಕೊಡುವವನಿಗೆ ಅನುಕೂಲವಾದದ್ದಾಗಿಯೂ ಇರುವದನ್ನು ಕೊಡಬಹುದು.

**3.ಕ್ರೈಸ್ತನು ತನಗೆ ಬಂದ ಸಂಪಾದನೆಯ ಮೇರೆಗೆ ಕೊಡಬೇಕು :**

ಅವರು ಹೆಚ್ಚಿನ ಹಣವನ್ನು ಸಂಪಾದಿಸಿರುವುದಾದರೆ ಹೆಚ್ಚು ಕಾಣಿಕೆಯನ್ನು ಕೊಡಬೇಕು. ಅವರು ಒಂದು ವಾರದಲ್ಲಿ ಏನನ್ನೂ ಸಂಪಾದಿಸದೇ ಹೋದರೆ ಅವಶ್ಯವಿಲ್ಲ. ಆದರೆ ಅವರ ಸಂಪಾದನೆಯಲ್ಲಿ ಎಷ್ಟು ಭಾಗವನ್ನು ಕೊಡಬೇಕು? ಇಷ್ಟೇ ಕೊಡಬೇಕೆಂದು ನಾನು ಹೇಳುವದಿಲ್ಲ. ಅದು ವೈಯುಕ್ತಿಕವಾಗಿ ನಿರ್ಣಯಿಸಿಕೊಳ್ಳಬೇಕು ಯೆಹೂದ್ಯರು ತಮ್ಮ ಆದಾಯದಲ್ಲಿ ದಶಮ (ಶೇಕಡ 10 ರಷ್ಟು) ಭಾಗವನ್ನು ಕೊಡುತ್ತಿದ್ದರು. ಆದರೆ ನಾವು ಅವರಿಗಿಂತಲೂ ಶ್ರೇಷ್ಠವಾದ ನಿಬಂಧನೆಯ ಕೆಳಗಿದ್ದೇವೆ, ಅವರಿಗಿಂತಲೂ ಶ್ರೇಷ್ಠವಾದ ವಾಗ್ದಾನಗಳನ್ನು ಹೊಂದಿದ್ದೇವೆ. ಆದ್ದರಿಂದ ಅವರಿಗಿಂತಲೂ ಹೆಚ್ಚಾಗಿ ಕೊಡುವುದಕ್ಕೆ ನಾವು ಪ್ರೋತ್ಸಾಹಿಸಲ್ಪಡಬೇಕು.

**4.ಅವರು ಕೊಡುವ ರೀತಿಯಲ್ಲಿ ಭಾನುವಾರ ಕೊಡುವುದಾದರೆ ಅವಶ್ಯಕತೆ ಬಂದಾಗ ಸ್ಥಾನಿಕ ಸಭೆಯಲ್ಲಿ ಹಣವಿರುತ್ತದೆ :**

ಈ ರೀತಿಯಾಗಿ ಕಾಣಿಕೆಗಳನ್ನು ಕೊಡದೇ ಹೋದರೆ ಸಭೆಯ ಕೆಲಸ ನಡೆಯುವುದಕ್ಕೆ ಅಡ್ಡಿ ಉಂಟಾಗುತ್ತದೆ.

**5.ಪ್ರತಿಯೊಬ್ಬನು ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಬೇಕು :**

ಇದರ ಪ್ರಕಾರ ಒಬ್ಬನು ಕೊಡುವುದಕ್ಕೆ ಮೊದಲು, ಎಷ್ಟು ಕೊಡಬೇಕೆಂದು ಮೊದಲೇ ನಿರ್ಣಯಿಸಿಕೊಂಡು ಕೊಡಬೇಕು. ಎಷ್ಟು ಕೊಡಬೇಕೆಂದು ಆಲೋಚಿಸದೆ ಕಾಣಿಕೆ ಸಂಗ್ರಹಿಸುವ ಸಮಯದಲ್ಲಿ ಜೇಬಿನಲ್ಲಿ ಕೈಹಾಕಿ ಕೈಗೆ ಸಿಕ್ಕ ನಾಣ್ಯವನ್ನು, ಯಾವುದೋ ಒಂದು ನೋಟನ್ನು ಕೊಟ್ಟರೆ ಅವನು ಕೊಡಬೇಕಾದಷ್ಟು ದೇವರಿಗೆ ಕೊಡಲಾರನು. ವಾಕ್ಯಗಳ ಪ್ರಕಾರ ನಾವು ಕೊಡಬೇಕಾದಷ್ಟು ಮೊದಲೇ ಆಲೋಚಿಸಿಕೊಂಡು ಕೊಡಬೇಕು.

**6.ಒಬ್ಬನು ದುಃಖದಿಂದಾಗಲಿ, ಬಲಾತ್ಕಾರದಿಂದಾಗಲಿ ಕೊಡಬಾರದು :**

ಯಾರೂ ಒತ್ತಾಯಮಾಡುವದರಿಂದ ಒಬ್ಬನು ಕೊಡಬಾರದು. ಅವನಿಗೆ ಕೊಡಬೇಕೆಂಬ ಮನಸ್ಸು ಇದ್ದಾಗ ಮನಃಸ್ಪೂರ್ತಿಯಾಗಿ ಕೊಡಬೇಕು.

7.ಕೊಡುವ ಪ್ರತಿ ಕಾಣಿಕೆಯೂ ಸಂತೋಷದಿಂದ ಕೊಡಬೇಕು:

ಅವನು ದೇವರಿಂದ ಆಶೀರ್ವದಿಸಲ್ಪಟ್ಟವನಾಗಿರುವುದರಿಂದ ದೇವರಿಗೆ ಕಾಣಿಕೆಗಳನ್ನು ಕೊಡುವುದಕ್ಕೆ ಅವನು ಸಂತೋಷಿಸುತ್ತಾ ಕೃತಜ್ಞತೆಯುಳ್ಳವನಾಗಿ ಕೊಡಬೇಕು.

ಸಭೆಯ ಸದಸ್ಯರು ಈ ರೀತಿಯಲ್ಲಿ ಕೊಡಬೇಕು. ಸ್ಥಳೀಯ ಸಭೆಗೆ ಆರ್ಥಿಕ ಸಹಾಯ ಈ ರೀತಿಯಲ್ಲಿ ದೊರೆಯುತ್ತದೆ. ದೇವರು ತನ್ನ ಕೆಲಸದ ನಿಮಿತ್ತ ಹಣಸಹಾಯವನ್ನು ಒದಗಿಸುವ ಮತ್ತೊಂದು ಮಾರ್ಗವಿಲ್ಲ. ಸಭೆಯ ಸದಸ್ಯರು ತಮ್ಮ ಮನಃಪೂರ್ವಕವಾಗಿ ಕೊಟ್ಟ ಕಾಣಿಕೆಗಳ ಮೇಲೆ ಸಭೆಯ ಕೆಲಸ ಆಧಾರವಾಗಿದೆ. ಒಬ್ಬನು ಸಭೆಯ ಸದಸ್ಯನಾದಾಗ ಸಭೆಯು ತನ್ನ ಕೆಲಸವನ್ನು ಮಾಡುವ ಹಾಗೆ ಸಭೆಗೆ ಆರ್ಥಿಕವಾಗಿ ಸಹಾಯ ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾನೆ.

ಸದಸ್ಯರು ಕೊಟ್ಟನಂತರ, ಆ ಕಾಣಿಕೆಯನ್ನು ದೇವರ ಕೆಲಸಕ್ಕಾಗಿ ವಿವೇಕ ಪೂರ್ವಕವಾಗಿ ಬಳಸುವ ಜವಾಬ್ದಾರಿಯನ್ನು ಸಭೆಯು ಹೊಂದಿದೆ. ಆ ಕಾಣಿಕೆಯನ್ನು ಸಭೆಯು ಮುಖ್ಯವಾಗಿ ಸುವಾರ್ತೆಯನ್ನು ಸಾರುವುದಕ್ಕೂ, ಕಷ್ಟದಲ್ಲಿರುವವರಿಗೆ ಸಹಾಯಮಾಡುವದಕ್ಕೂ ಉಪಯೋಗಿಸಬೇಕು. ಸ್ಥಳೀಯ ಸಭೆಯು ತನ್ನ ಬಳಿಯಲ್ಲಿರುವ ಕಾಣಿಕೆಯಲ್ಲಿ ಹೆಚ್ಚು ಭಾಗವನ್ನು ತನ್ನ ಸ್ವಂತ ಅವಶ್ಯಕತೆಗಳಿಗಾಗಿ ಬಳಸದೆ ಎಚ್ಚರಿಕೆಯಿಂದಿರಬೇಕು.

ಸದಸ್ಯರೆಲ್ಲರು ವಾಕ್ಯದ ಪ್ರಕಾರ ಕೊಡುವುದು ಅತ್ಯಾವಶ್ಯಕವೆಂದು ಬೋಧಿಸಲ್ಪಡಬೇಕು. ತೆಗದುಕೊಳ್ಳುವದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯವೆಂಬುದಾಗಿ ಕರ್ತನಾದ ಯೇಸು ಹೇಳಿದ್ದಾನೆ (ಅ.ಕೃ.20:35). ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ ಎಂದು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ 6:33). ಅಂದರೆ ನಾವು ಕಾಣಿಕೆ ಕೊಡುವಾಗ ಆತನ ರಾಜ್ಯವನ್ನು ಮೊದಲು ಗಮನಿಸಬೇಕೆಂದು ಅರ್ಥ. ಮಕೆದೊನ್ಯದಲ್ಲಿರುವ ಸಭೆಯವರು ಶಕ್ತ್ಯಾನುಸಾರವಾಗಿ ಮಾತ್ರ ಕೊಡದೇ ಶಕ್ತಿಯನ್ನು ಮೀರಿ ತಮ್ಮಷ್ಟಕ್ಕೆ ತಾವೇ ಕೊಟ್ಟದ್ದರಿಂದ ಅವರಿಗೆ ಹೊಗಳಿಕೆ ಉಂಟಾಯಿತು. ಎಲ್ಲಾದಕ್ಕಿಂತಲೂ ಮೊದಲು ಅವರು ತಮ್ಮನ್ನೇ ಕರ್ತನಿಗೆ ಒಪ್ಪಿಸಿಕೊಟ್ಟರು.

ಒಬ್ಬ ಬಡ ವಿಧವೆಯು ತನ್ನ ಬಡತನದಲ್ಲಿಯೂ ತನಗಿದ್ದ ಜೀವನವನ್ನೆಲ್ಲ ಹೇಗೆ ಕೊಟ್ಟುಬಿಟ್ಟಳೋ ನಿನಗೆ ನೆನಪಿದೆಯಾ? (ಲೂಕ 21:1–4), ಅನನೀಯ ಸಫ್ಫೈರಳು ಇವರು ಕೊಡುತ್ತಿರುವುದನ್ನು ಕುರಿತು ಸುಳ್ಳು ಹೇಳಿದಾಗ ಹೇಗೆ ತಮ್ಮ ಪ್ರಾಣವನ್ನು ಕಳೆದುಕೊಂಡರೋ ನೆನಪಿದೆಯಾ? (ಅ.ಕೃ.5:1–11). ಒಬ್ಬನು ದೇವರಿಗೆ ಕೊಡಬೇಕಾದದ್ದನ್ನು ಕೊಡದೇ ಹೋದರೆ ಅವನು ದೇವರಿಂದ ಕಳ್ಳತನ ಮಾಡಿದಂತಾಗುವುದೆಂದು ವಾಕ್ಯವು ಬೋಧಿಸುತ್ತಿದೆ (ಮಲಾಕಿ 3:7–10). ದೇವರು ಕಾಣಿಕೆ ಕೊಡುವುದರಲ್ಲಿ ತನ್ನ ಪ್ರಜೆಗಳೊಂದಿಗೆ ಇಲ್ಲಿಯವರೆಗೆ ಮಾಡಿದ ಹಾಗೆ ಈಗಲೂ ಸಹ ಮಾಡಿದರೆ ಏನಾಗುವುದು? ನಮ್ಮಲ್ಲಿ ಎಷ್ಟು ಜನರು ಉಳಿಯುವರು?

ಇಂದಿನ ಸಭೆಯು ಹೆಚ್ಚು ಕೆಲಸ ಮಾಡಬೇಕು. ಲೋಕಕ್ಕೆಲ್ಲ ಸುವಾರ್ತೆಯನ್ನು ಬೋಧಿಸುವ ಜವಾಬ್ದಾರಿಯನ್ನು ಅದು ಹೆಚ್ಚಾಗಿ ಹೊಂದಿದೆ. ಆ ಕೆಲಸವನ್ನು ಮಾಡುವುದಕ್ಕೆ ಹೆಚ್ಚಿನ ಹಣವು ಅವಶ್ಯಕವಾಗಿದೆ. ಆದದರಿಂದ ಸಭೆಯು ತನ್ನ ಕೆಲಸವನ್ನು ನೇರವೇರಿಸುವ ಹಾಗೆ ನೀನು, ನಾನು ಕ್ರೈಸ್ತರ ಹಾಗೆ ಹೆಚ್ಚು ಕಾಣಿಕೆಯನ್ನು ಕೊಡಬೇಕು. ನಾವೆಲ್ಲರು ವಾಕ್ಯದ ಪ್ರಕಾರ ಕೊಟ್ಟಾಗ ಲೋಕಕ್ಕೆಲ್ಲಾ ಸುವಾರ್ತೆ ಸಾರಲು ಬೇಕಾಗಿರುವದಕ್ಕಿಂತ ಹೆಚ್ಚು ಹಣ ಸಭೆಯಲ್ಲಿರುತ್ತದೆ.

## ಪಾಠ – 22

# ಸಭೆಗಾಗಿ ಕ್ರಿಸ್ತನ ಬರುವಿಕೆ
# (Christ's Return of the Church)

ಸುಮಾರು ಎರಡು ಸಾವಿರ ವರ್ಷಗಳ ಕೆಳಗೆ ಕ್ರಿಸ್ತನು ಬಂದನು. ಆತನು ಸರಿಸುಮಾರು 30 ವರ್ಷಗಳ ವರೆಗೆ ಈ ಲೋಕದಲ್ಲಿ ಜೀವಿಸಿದನು, ಪ್ರಪಂಚದ ಚರಿತ್ರೆಯನ್ನೆಲ್ಲಾ ಆತನು ಬದಲಾಯಿಸಿದನು. ಈ ಲೋಕದ ಪಾಪಗಳಿಗಾಗಿ ಆತನು ಶಿಲುಬೆಯ ಮೇಲೆ ಮರಣ ಹೊಂದುವುದು ಆತನು ಪಟ್ಟ ಪ್ರಯಾಸಕ್ಕೆ ಕಿರೀಟವಾಯಿತು. ಆತನು ಸಮಾಧಿ ಮಾಡಲ್ಪಟ್ಟು ಪುನರುತ್ಥಾನನಾದ ನಂತರ ಪರಲೋಕದಲ್ಲಿರುವ ತನ್ನ ತಂದೆಯ ಬಳಿಗೆ ಆರೋಹಣನಾದನು. ಇದು ಮಾತ್ರವೇ ಅಲ್ಲ. ಒಂದು ದಿನ ಆತನು ಪುನಃ ಬರುತ್ತಾನೆ. ಆ ಸಮಯದಲ್ಲಿ ಆತನು ತನ್ನ ಸಭೆಯನ್ನು ಕರೆದುಕೊಂಡು ಹೋಗುವನು.

ಈ ಪಾಠದಲ್ಲಿ ಸಭೆಯನ್ನು ತನ್ನ ಬಳಿಗೆ ಕರೆದುಕೊಂಡು ಹೋಗುವುದಕ್ಕಾಗಿ ಕ್ರಿಸ್ತನು ಪುನಃ ಬರುವ ಸಂಗತಿಯನ್ನು ಕುರಿತು ತಿಳಿದುಕೊಳ್ಳೋಣ. ಯೇಸು ಆರೋಹಣನಾಗುವುದಕ್ಕಿಂತ ಮುಂಚೆ, ತನ್ನ ಶಿಷ್ಯರೊಂದಿಗೆ ಹೀಗೆಂದನು : "ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದನು; ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತೇನಲ್ಲಾ.ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು;" (ಯೋಹಾನ14:1–3). ಆತನು ತಿರುಗಿ ಬರುವನೆಂದು ಕ್ರಿಸ್ತನು ಮಾತ್ರವಲ್ಲದೇ, ಹೊಸ ಒಡಂಬಡಿಕೆ ಲೇಖಕರು ಅನೇಕರು ಅದು ಯಥಾರ್ಥವೆಂದು ಬರೆದಿದ್ದಾರೆ. ಲೂಕನು, ಆತನು ಪರಲೋಕಕ್ಕೆ ಏರಿಹೋಗುವುದನ್ನು ವರ್ಣಿಸುತ್ತಾ ಹೀಗೆ ಬರೆದಿದ್ದಾನೆ : "ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ಶುಭ್ರ ವಸ್ತ್ರಧಾರಿಗಳಾದ ಇಬ್ಬರು ಪುರುಷರು ಫಕ್ಕನೆ ಅವರ ಹತ್ತರ ನಿಂತು ಕೊಂಡು–ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವುದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು ಎಂದು ಹೇಳಿದನು" (ಅ.ಕೃ.1:10–11).

ಪೌಲನು ಹೀಗೆ ಬರೆದಿದ್ದಾನೆ: "ಸಹೋದರರೇ, ನಿದ್ರೆ ಹೋಗುವವರ ಗತಿ ಏನೆಂದು ನೀವು ತಿಳಿಯದೆ ಇದ್ದು ನಿರೀಕ್ಷೆಯಿಲ್ಲದವರಾದ ಇತರರಂತೆ ದುಃಖಿಸುವುದು ನಮ್ಮ ಮನಸ್ಸಿಗೆ ಒಪ್ಪುವುದಿಲ್ಲ. ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ ಯೇಸುವಿನಲ್ಲಿದ್ದುಕೊಂಡು ನಿದ್ರೆ ಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನೆಂದು ನಂಬಬೇಕಲ್ಲವೇ. ನಾವು ಕರ್ತನ ಮಾತಿನ ಆಧಾರದಿಂದ ನಿಮಗೆ ಹೇಳುವುದೇನೆಂದರೆ ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು ನಿದ್ರೆಹೋದವರಿಗಿಂತ ಮುಂದಾಗುವುದೇ ಇಲ್ಲ. ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ಧದೊಡನೆಯೂ ದೇವರ ತುತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೇ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು. ಆದಕಾರಣ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ" (1ಥೆಸಲೋನಿಕ 4:13–18). ನಮ್ಮ ಕರ್ತನು ತಿರುಗಿ ಬರುವಾಗ ಏನು ನಡೆಯುವುದೋ ಎಂದು ಪೇತ್ರನು ನಮಗೆ ಹೀಗೆ ತಿಳಿಯಪಡಿಸಿದ್ದಾನೆ: "ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶ ಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು.

ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವುದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲ; ಆ ದಿನದಲ್ಲಿ ಆಕಾಶ ಮಂಡಲವು ಬೆಂಕಿ ಹತ್ತಿ ಲಯವಾಗಿ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವವು. ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನೂ ನೂತನ ಭೂ ಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು (2ಪೇತ್ರ 3:10–13).

ಮದಲಗಿತ್ತಿಯಾದ ತನ್ನ ಸಭೆಗಾಗಿ ಕರ್ತನು ಬರುವಾಗ ನಡೆಯುವ ಸಂಗತಿಗಳಲ್ಲಿ ಕೆಲವನ್ನು ಕುರಿತು ಪೌಲನು ಹೀಗೆ ಬರೆದಿದ್ದಾನೆ: "ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೂ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. ಅದಿರಲಿ; ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು. ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆ ಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವು ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು" (ಎಫೆಸ 5:23–27). ಸಭೆಯೇ ರಾಜ್ಯವೆಂದಣಿಸಿ ಅದಕ್ಕಾಗಿ ಕರ್ತನು ಬರುವಾಗ ನಡೆಯುವ ಸಂಗತಿಯನ್ನು ಆತನು ಹೀಗೆ ಮತ್ತೆ ಬರೆದನು: "ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದುಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು. ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರು ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು. ಆಮೇಲೆ ಆತನು ಬೇರೆ ಎಲ್ಲಾ ದೊರೆತನವನ್ನೂ ಎಲ್ಲಾ ಅಧಿಕಾರವನ್ನೂ ಬಲವನ್ನೂ ನಿವೃತ್ತಿಮಾಡಿ ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವಾಗ ಸಮಾಪ್ತಿ" (1ಕೊರಿಂಥ 15:20–24).

ಸಭೆಯು ಕ್ರಿಸ್ತನ ವಧುವಾಗಿದೆ ಎನ್ನುವ ಸಂಗತಿಯನ್ನು ಇನ್ನೊಂದು ಸಾರಿ ಆಲೋಚಿಸೋಣ. ಒಬ್ಬ ಸ್ತ್ರೀ ತನ್ನ ಗಂಡ ಸತ್ತುಹೋದ ನಂತರ ಇನ್ನೊಬ್ಬ ಪುರುಷನನ್ನು ಮದುವೆ ಮಾಡಿಕೊಳ್ಳಬಹುದೆಂದು ಪೌಲನು ತೋರಿಸಿದ ನಂತರ, ಧರ್ಮಶಾಸ್ತ್ರವು ಗತಿಸಿಹೋಗಿರುವದರಿಂದ ನಾವು ಕ್ರಿಸ್ತನು ಎನ್ನುವ ಬೇರೊಬ್ಬನನ್ನು ಸೇರಲು ಸ್ವತಂತ್ರರಾದೆವು ಎಂದು ಆತನು ಬೋಧಿಸಿದನು (ರೋಮಾ 7:1–4). ಆದುದರಿಂದ ಕ್ರಿಸ್ತನಿಗೆ ನಿಶ್ಚಯಮಾಡಲ್ಪಟ್ಟ ನಾವು (ಅಂದರೆ ಸಭೆ) ಆತನ

ವಧುವಾಗಿದ್ದೇವೆ. ಮತ್ತಾಯ 25ನೇ ಅಧ್ಯಾಯದಲ್ಲಿ ಕ್ರಿಸ್ತನು ಹತ್ತುಮಂದಿ ಕನ್ಯೆಯರನ್ನು ಕುರಿತು ಮದಲಿಂಗನ ಬರುವಿಕೆಯನ್ನು ಕುರಿತು ಒಂದು ಸಾಮ್ಯವನ್ನು ಬೋಧಿಸಿದನು. ಹತ್ತು ಮಂದಿ ಕನ್ಯಕೆಯರು ವಧುವನ್ನು ಸೂಚಿಸುತ್ತಿದ್ದಾರೆ. ಮದಲಿಂಗನು ಕ್ರಿಸ್ತನೆ. ಮದುವೆಯಾಗಲು ಆತನು ಬರುತ್ತಿರುವ ಹಾಗೆ ಅಲ್ಲಿ ವರ್ಣಿಸಲ್ಪಟ್ಟಿದೆ. ಆತನು ಬಂದಾಗ ವಧುವು ಆತನ ಬಳಿಯಲ್ಲಿರುವುದಕ್ಕಾಗಿ ಆಕೆಯನ್ನು ಕರೆದುಕೊಂಡು ಹೋಗುವನು. ಸ್ನಾನಿಕನಾದ ಯೋಹಾನನು ಹೀಗೆ ಹೇಳಿದ್ದಾನೆ: "ಮದಲಗಿತ್ತಿಯುಳ್ಳವನೇ ಮದಲಿಂಗನು; ಆದರೂ ಮದಲಿಂಗನ ಗೆಳೆಯನು ಅವನ ಹತ್ತರ ನಿಂತುಕೊಂಡು ಅವನ ಮಾತುಗಳನ್ನು ಕೇಳಿ ಮದಲಿಂಗನ ಧ್ವನಿಗೆ ಬಹುಸಂತೋಷ ಪಡುತ್ತಾನಲ್ಲವೆ. ಇದರಂತೆ ನನಗಿರುವ ಸಂತೋಷ; ಅದು ನೇರವೇರಿತು" (ಯೋಹಾನ 3:29).

ತನ್ನ ವಧುವಾಗಿರುವ ಸಭೆಗಾಗಿ ಕ್ರಿಸ್ತನು ತಿರುಗಿ ಬರುವದನ್ನು ಆಲೋಚಿಸೋಣ. ಆತನ ಏನನ್ನು ಕಾಣಲು ಬಯಸುವನು? ಆತನ ಹೆಸರನ್ನು ಧರಿಸಿ ಪವಿತ್ರವಾಗಿ ಆಕೆಯೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಒಬ್ಬಳೇ ವಧುವಿನ ಬಳಿಗೆ ಅಂದರೆ ಒಂದೇ ಸಭೆಯ ಬಳಿಗೆ ಬರುವನು. ಇದು ಸತ್ಯವಾಗಿದ್ದರೆ ನೀನು, ನಾನು ಆತನ ಸಭೆಯ ಸದಸ್ಯರು ಅಲ್ಲವಾಗಿದ್ದರೆ ಏನಾಗುತ್ತದೆ? ನಮಗೇನು ನಡೆಯುತ್ತದೆ? ಹಾಗಾದರೆ ಆತನು ಸಭೆಯಲ್ಲಿ ಇರಬೇಕೆಂಬ ಒಂದೇ ಒಂದು ಮಾರ್ಗವಿದೆ. ಅದೇನಂದರೆ ಕರ್ತನಿಗೆ ಒಳಗಾಗಿ ಆತನ ಸಭೆಯಲ್ಲಿ ಸೇರಿಸಲ್ಪಡುವುದೇ (ಮಾರ್ಕ 16:16; ಅ.ಕೃ.2:47). ಆತನಿಗೆ ವಿಧೇಯರಾಗದವರನ್ನು ಕುರಿತು ಪೌಲನು ಹೀಗೆ ಹೇಳುತ್ತಿದ್ದಾನೆ: "ಯಾವಾಗ ಕೊಡುವನೆಂದರೆ ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತಿಕಾರವನ್ನು ಸಲ್ಲಿಸುವನು. ಆ ದಿನದಲ್ಲಿ ಆತನು ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿಯೂ ಬರುವಾಗ ಅಂಥವರು ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು" (2ಥೆಸಲೋನಿಕ 1:7–10).

ಕ್ರಿಸ್ತನು ತಿರುಗಿ ಬಂದಾಗ ರಾಜ್ಯವನ್ನು ಕುರಿತು ಸತ್ಯವೇದವು ಹೀಗೆ ಹೇಳುತ್ತದೆ "ಮನುಷ್ಯ ಕುಮಾರನು ತನ್ನ ದೂತರನ್ನು ಕಳುಹಿಸುವನು; ಅವರು ಆತನ ರಾಜ್ಯದೊಳಗಿಂದ ಎಲ್ಲಾ ಕಂಟಕರನ್ನೂ ಅಧರ್ಮಿಗಳನ್ನು ಕೂಡಿಸಿ ಬೆಂಕಿಕೊಂಡದಲ್ಲಿ ಹಾಕುವರು; ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು. ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು. ಕಿವಿಯುಳ್ಳವನು ಕೇಳಲಿ ಅಂದನು" (ಮತ್ತಾಯ 13:41–43).

ನ್ಯಾಯತೀರ್ಪಿನ ದಿನದಲ್ಲಿ ಆತನು ನೀತಿವಂತರನ್ನು, ಅನೀತಿವಂತರನ್ನು ಬೇರೆ ಬೇರೆ ಮಾಡಿದಾಗ ಏನು ನಡೆಯುತ್ತದೊ ಮತ್ತಾಯ 25:31–46ರಲ್ಲಿ ಬರೆಯಲ್ಪಟ್ಟಿದೆ. "ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ– ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ" ಎಂದು ಹೇಳುವನು (ಮತ್ತಾಯ 25:34). ಆಗ ನಾವು ಇದಕ್ಕಿಂತ ಮೊದಲು ಓದಿದ ರೀತಿಯಲ್ಲಿ ಕ್ರಿಸ್ತನು ತನ್ನ ರಾಜ್ಯವನ್ನು ತಂದೆಗೆ ಒಪ್ಪಿಸಿಕೊಡುವನು (1ಕೊರಿಂಥ 15:24).

ಇಲ್ಲಿ ಹೇಳಲಾದ ರಾಜ್ಯವು ಸಭೆಯೇ (ಮತ್ತಾಯ 16:18,19). ಅದು ಸ್ಥಾಪಿಸಲ್ಪಡುವುದಕ್ಕಿಂತ ಮೊದಲು ಮತ್ತಾಯ, ಮಾರ್ಕ, ಲೂಕಾ, ಯೋಹಾನ ಇವರು ಬರೆದ ಸುವಾರ್ತೆಗಳಲ್ಲಿ ಪರಲೋಕರಾಜ್ಯವೆಂದು ಕರೆಯಲ್ಪಟ್ಟಿದೆ. ಪರಲೋಕದಿಂದ ಕ್ರಿಸ್ತನು ಬಂದು ಅದನ್ನು ಸ್ಥಾಪಿಸುವವನಾಗಿರುವದರಿಂದ ಅದು ಹಾಗೆ ಕರೆಯಲ್ಪಟ್ಟಿತು. ಆತನು ವಾಗ್ದಾನ ಮಾಡಿದ ರೀತಿಯಲ್ಲಿ ಅದು ಅ.ಕೃ. 2ನೇ ಅಧ್ಯಾಯದಲ್ಲಿ ಸ್ಥಾಪಿಸಲ್ಪಟ್ಟಿತು (ಯೇಶಾಯ 2:2,3; ಯೋವೇಲ2:28,29; ದಾನಿಯೇಲ 2:44). ಅಲ್ಲಿಂದ ಸಭೆಯು ಅಥವಾ ರಾಜ್ಯವು ಸ್ಥಾಪಿಸಲ್ಪಟ್ಟಂತೆ ವಾಕ್ಯದಲ್ಲಿ ಹೇಳಲ್ಪಟ್ಟಿದೆ (ಕೊಲೊಸ್ಸೆ 1:13; ಇಬ್ರಿಯ12:26; ಯಾಕೋಬ 2:5; 2ಪೇತ್ರ 1:11). ಅದರ ಮೇಲೆ ಕ್ರಿಸ್ತನೇ ರಾಜನು, ಅದಕ್ಕೆ ಆತನೇ ಶಿರಸ್ಸು (ಕೊಲೊಸ್ಸೆ 1:18; ಎಫೆಸೆ 1:22,23). ಅದರ ಪೌರರೇ ಸಭೆಯ ಸದಸ್ಯರು.

ಆತನು ಜನರೊಂದಿಗೆ ಸೇರಿಸಲ್ಪಟ್ಟ ರಾಜ್ಯಕ್ಕಾಗಿ ತನ್ನ ಒಂದೇ ಒಂದು ರಾಜ್ಯಕ್ಕಾಗಿ ಕ್ರಿಸ್ತನು ತಿರುಗಿ ಬರುವವನಾಗಿದ್ದಾನೆ. ಆ ರಾಜ್ಯದ ಪೌರರು ಆತನ ಹೆಸರನ್ನು ಧರಿಸಿಕೊಂಡು ಆತನ ಆಜ್ಞೆಗಳಿಗೆ ವಿಧೇಯರಾಗುವುದರ ಮೂಲಕ ಆತನನ್ನು

ಗೌರವಿಸುವರು. ನೀನು ಆ ರಾಜ್ಯದ ಪೌರನ? ನೀನು ಕರ್ತನ ಸಭೆಯ ಸದಸ್ಯನ? ಇಲ್ಲವಾಗಿದ್ದಲ್ಲಿ ಕರ್ತನು ನಿನಗಾಗಿ ಬರುತ್ತಿಲ್ಲ. ಅಂದರೆ ನೀನು ನಿತ್ಯನಾಶನಕ್ಕಾಗಿ ಬಿಡಲ್ಪಡುವಿ.

ಕ್ರಿಸ್ತನು ಮತ್ತೆ ಯಾವಾಗ ಬರುವನು? ನಮಗೆ ತಿಳಿಯದು. ಆತನು ಈ ದಿನವಾಗಲಿ, ನಾಳೆಯಾಗಲಿ, ಕೆಲವು ಸಾವಿರ ವರ್ಷಗಳ ನಂತರವಾಗಲಿ ಬರಬಹುದು. ಆತನು ಯಾವಾಗ ಬರುವನೋ ನಮಗೆ ತಿಳಿದಿಲ್ಲವಾದರೂ, ಮತ್ಯಾವ ಮನುಷ್ಯನಿಗೂ ತಿಳಿಯದು. ತಂದೆಯಾದ ದೇವರಿಗೆ ಮಾತ್ರ ಗೊತ್ತು. ಕ್ರಿಸ್ತನು ಹೀಗೆ ಹೇಳಿದ್ದಾನೆ : "ಇದಲ್ಲದೆ ಆ ದಿನದ ವಿಷಯವೂ ಆ ಘಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೇ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು"(ಮತ್ತಾಯ 24:36). ಆದ್ದರಿಂದ ನೀನು, ನಾನು ಯಾವಾಗಲೂ ಸಿದ್ಧವಾಗಿರುವದು ಅತಿ ಪ್ರಾಮುಖ್ಯ. ಬೈಬಲ್ ಹೇಳುವ ರೀತಿಯಲ್ಲಿ ನಾವು ಸಿದ್ಧವಾಗಿರುವುದಾದರೆ ಕ್ರಿಸ್ತನು ಬಂದಾಗ ಆತನು ನಮ್ಮನ್ನು ತನ್ನ ಬಳಿಗೆ ಕರೆದುಕೊಂಡುಹೋಗುವನು. ಹಾಗೆಯೇ ಆತನು ತನ್ನ ರಾಜ್ಯ ಪೌರರಾದ ಸಭೆಯನ್ನು ಸಹ ಕರೆದುಕೊಂಡು ಹೋಗುವನು.

## ಪಾಠ – 23

# ಸಭೆಯ ಚರಿತ್ರೆ

## (History of the Church)

ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ಕ್ರಿಸ್ತನ ಸಭೆಯ ಸ್ಥಾಪನೆಗಾಗಿ ಅಥವಾ ಆತನ ರಾಜ್ಯದ ಸ್ಥಾಪನೆಗಾಗಿ ಸಮಸ್ತವು ಸಂಸಿದ್ಧವಾಗಿರುವಂತೆ ನಾವು ನೋಡುತ್ತೇವೆ. ಅಪೊಸ್ತಲರೆಲ್ಲರು ಯೆರೂಸಲೇಮಿನಲ್ಲಿ ಕೂಡಿಬಂದಿದ್ದರು ಪವಿತ್ರಾತ್ಮನು ಅವರ ಮೇಲೆ ಇಳಿದು ಬಂದನು. ಪಂಚಾಶತ್ತಮ ದಿನದ ಹಬ್ಬವನ್ನು ಆಚರಿಸಲು ಅನೇಕ ದೇಶಗಳಿಂದ ಯೆಹೂದ್ಯರು ಅಲ್ಲಿಗೆ ಬಂದಿದ್ದರು. ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಪ್ರವಾದಿಯಾದ ಯೋವೇಲನ ಮೂಲಕವಾಗಿ ತಿಳಿಸಿದ ಸಂಗತಿ ಇದೇ ಎಂದು ಪ್ರಕಟಿಸಿದನು. ಕ್ರಿಸ್ತನು ಮರಣಹೊಂದಿದ್ದರಿಂದ ಅಂತ್ಯದಿನಗಳು ಪ್ರಾರಂಭವಾದವು; ಮಾನಸಾಂತರವನ್ನೂ, ಪಾಪಕ್ಷಮಾಪಣೆಯನ್ನು ಪ್ರಕಟಿಸಿದರು. ಆ ಸುವಾರ್ತೆ ಪ್ರಕಟಿಸಲ್ಪಟ್ಟಾಗ ಸುಮಾರು ಮೂರು ಸಾವಿರ ಜನರು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಕರ್ತನು ಅವರನ್ನು ತನ್ನ ಮಂಡಳಿಗೆ ಸೇರಿಸಿದನು. ಆಗ ಸುವಾರ್ತೆಯು ಯೆರೂಸಲೇಮಿನಿಂದ ಯೂದಾಯ ಸಮಾರ್ಯದಲ್ಲಿಯೂ ಮತ್ತು ಭೂಮಿಯ ಕಟ್ಟಕಡೆಯವರೆಗೂ ಆಕಾಶದ ಕೆಳಗಿರುವ ಸಮಸ್ತಜನರಿಗೂ ಸರ್ವಸೃಷ್ಟಿಗೂ ಸುವಾರ್ತೆಯು ಪ್ರಕಟಿಸಲ್ಪಟ್ಟಿತ್ತು (ಅ.ಕೃ.1:8; ಮತ್ತಾಯ 28:19,20; ಮಾರ್ಕ 16:15,16; ಕೊಲೊಸ್ಸೆ 1:23).

ಅಪೊಸ್ತಲರ ಕಾಲದಲ್ಲಿ ಸಭೆಯು ಬಹಳ ಅಭಿವೃದ್ಧಿ ಹೊಂದಿತು. ಅದು ಬಹಳ ತ್ವರಿತಗತಿಯಲ್ಲಿ ವ್ಯಾಪಿಸಿತು. ಪೌಲನು ಬದಲಾವಣೆ ಹೊಂದಿದ ನಂತರ, ಯೆಹೂದ್ಯರಿಗೆ ಮಾತ್ರವಲ್ಲದೇ ಅನ್ಯಜನರಿಗೂ ಸುವಾರ್ತೆ ಪ್ರಕಟಿಸುತ್ತಾ ಆತನು ಮೂರು ಪ್ರಯಾಣಗಳನ್ನು ಮಾಡಿದನು. ಆದ್ದರಿಂದಲೇ ಆಸ್ಯದಲ್ಲಿಯೂ, ಐರೋಪ್ಯ ದೇಶಗಳಲ್ಲಿಯೂ ಅನೇಕ ಜನರು ಮಾನಸಾಂತರ ಹೊಂದಿದರು. ಮತ್ತು ಕ್ರಿಸ್ತನ ಸಭೆಗಳನೇಕವು ಸ್ಥಾಪಿಸಲ್ಪಟ್ಟವು. ಆದರೆ ಸಭೆಗೆ ದೊಡ್ಡ ಹಿಂಸೆ ಉಂಟಾಗಿದ್ದರಿಂದ ಅದು ಅಷ್ಟು ಸುಲಭವಾಗಿ ನಡೆಯಲ್ಲಿಲ. ಮೊದಲು ಯೆರೂಸಲೇಮಿನಲ್ಲಿರುವ ಸಭೆಗೆ ದೊಡ್ಡ ಹಿಂಸೆ ಉಂಟಾಯಿತ್ತು. ಆದ್ದರಿಂದ ಅಲ್ಲಿನ ಶಿಷ್ಯರಲ್ಲಿ ಅಪೊಸ್ತಲರನ್ನು ಬಿಟ್ಟು ಎಲ್ಲಾರು ಚದರಿ ಹೋದರು.

ಚದರಿಹೋದವರು ಅಲ್ಲಲ್ಲಿ ಹೋಗಿ ಸುವಾರ್ತಾ ವಾಕ್ಯವನ್ನು ಸಾರುತ್ತಿದ್ದರು (ಅ.ಕೃ. 8:1–4). ಕಾಲವಾದಂತೆಲ್ಲಾ ರೋಮನ್ನರು ಅವರಿಗೆ ಉಂಟಾಗುವ ಪ್ರತಿ ಸಮಸ್ಯೆಗಳಿಗೆ ಕ್ರೈಸ್ತರನ್ನು ದೂರುತ್ತಿದ್ದರು (ಹಿಂಸಿಸುತ್ತಿದ್ದರು). ರೋಮಾ ಪಟ್ಟದಲ್ಲಿಯೂ, ಅವರ ಸಾಮ್ರಾಜ್ಯದಲ್ಲಿರುವ ಎಲ್ಲಾ ಕ್ರೀಡಾಂಗಣದಲ್ಲಿ ಕ್ರೈಸ್ತರನ್ನು ಬಹಳ ಘೋರವಾಗಿ ಹಿಂಸಿಸುತ್ತಾ ಆನಂದಿಸುತ್ತಿದ್ದರು. ಕೊನೆಗೆ ಪೌಲನು ಸಹ ಸೆರೆಗೆ ಹಾಕಲ್ಪಟ್ಟು ತೀರ್ಪಿಗಾಗಿ ರೋಮ ದೇಶಕ್ಕೆ ಹೋದನು. ಯೋಹಾನನ್ನು ಬಿಟ್ಟರೆ ಎಲ್ಲಾ ಅಪೊಸ್ತಲರು ಕ್ರಿಸ್ತನ ಹೆಸರಿನ ನಿಮಿತ್ತ ಹತಸಾಕ್ಷಿಗಳಾದರೆಂದು ಚರಿತ್ರೆಯು ಹೇಳುತ್ತದೆ. ಅಷ್ಟು ಮಾತ್ರವಲ್ಲದೆ ಸಾವಿರ ಗಟ್ಟಲೆ ಕ್ರೈಸ್ತರು ಸಹ ತಮ್ಮ ಪ್ರಾಣವನ್ನು ಕ್ರಿಸ್ತನಿಗಾಗಿ ಕಳೆದುಕೊಂಡರು.

ಹಿಂಸೆಗಳು ಉಂಟಾದರೂ ಸಭೆಯು ಅಭಿವೃದ್ಧಿಹೊಂದಿ ವ್ಯಾಪಿಸಲ್ಪಟ್ಟಿತ್ತು. ಸಭೆಗೆ ಉಂಟಾದ ದೊಡ್ಡನಷ್ಟವು ಹಿಂಸೆಗಳಿಂದ ಆಗಲಿಲ್ಲವಾದರೂ, ಸಭೆಯ ಒಳಗಡೆಯಿಂದಲೇ ಉಂಟಾದವು. ನಂಬಿಕೆಯ ಭ್ರಷ್ಟತ್ವ ಉಂಟಾಗುತ್ತದೆ ಎಂದು ಪೌಲನು ಮೊದಲೇ ಎಚ್ಚರಿಸಿದ್ದನು. ಅಂದರೆ ಕ್ರಿಸ್ತನ ಸಭೆಯ ಅನೇಕ ಸದಸ್ಯರು ಅಸತ್ಯ ಮಾರ್ಗದೊಳಗೆ ಹೋಗುವ ದಿನವು ಬರುವುದೆಂದು ಆತನು ಎಚ್ಚರಿಸಿದ್ದನು. ಆತನ ಮಾತುಗಳನ್ನು ಈಗ ಗಮನಿಸು: "ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ವಿಷಯವಾಗಿಯೂ ನಾವು ಆತನ ಬಳಿಯಲ್ಲಿ ಕೂಡಿಕೊಳ್ಳುವುದರ ವಿಷಯವಾಗಿಯೂ ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ– ಕರ್ತನ ದಿನವು ಈಗಲೇ ಹತ್ತಿರವಾಯಿತೆಂಬದಾಗಿ ದೇವರಾತ್ಮ ಪ್ರೇರಿತವಾದ ನುಡಿ ಇದೆ ಎಂದಾಗಲಿ ಪೌಲನು ಹಾಗೆ ಹೇಳಿದನೆಂದಾಗಲಿ ಪೌಲನು ಹಾಗೆ ಬರೆದನೆಂದಾಗಲಿ ಯಾರಾದರೂ ಹೇಳಿದರೂ ನೀವು ಬೇಗನೆ ಬುದ್ಧಿಗೆಟ್ಟು ಚಂಚಲರಾಗಿ ಕಳವಳಪಡಬೇಡಿರಿ. ಯಾರು ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕೆಂದರೆ ಮೊದಲು ಮತಭ್ರಷ್ಟತೆ ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವುದಿಲ್ಲ. ಯಾವುದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ನಾಶನಕ್ಕೆ ಅಧೀನನಾದ ಆ ಪುರುಷನು ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ. ನಾನು ನಿಮ್ಮ ಸಂಗಡ ಇದ್ದಾಗ ಈ ಸಂಗತಿಗಳನ್ನು ಹೇಳಿದ್ದು ಜ್ಞಾಪಕವಿಲ್ಲವೋ ಇದಲ್ಲದೆ ಆ ಮನುಷ್ಯನು ನೇಮಕವಾದ ಸಮಯದಲ್ಲೇ ಬೈಲಿಗೆ ಬರುವುದಕ್ಕೆ ಏನು ಅಡ್ಡಿ

ಮಾಡುತ್ತದೋ ತಿಳಿದೇ ಇದೆ. ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ; ಆದರೆ ಇದುವರೆಗೆ ಅಡ್ಡಿ ಮಾಡುವವನು ತೆಗೆದು ಬಿಡುವ ತನಕ ಅದು ಗುಪ್ತವಾಗಿಯೇ ಇರುವದು. ಅವನು ತೆಗೆದು ಬಿಡಲ್ಪಟ್ಟಕೊಡಲೇ ಆ ಅಧರ್ಮಸ್ವರೂಪನು ಕಾಣಬರುವನು; ಅವನನ್ನು ಯೇಸು ಕ್ರಿಸ್ತನು ತನ್ನ ಬಾಯಿ ಉಸುರಿನಿಂದ ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು. ಆ ಅಧರ್ಮಸ್ವರೂಪನ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರುವದು. ಅದು ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ ಸೂಚಕಕಾರ್ಯ ಅದ್ಭುತಕಾರ್ಯ ಇವುಗಳಿಂದಲೂ ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶನಮಾರ್ಗದಲ್ಲಿರುವವರಿಗೋಸ್ಕರ ಸಂಭವಿಸುವದು. ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಅದೇ ಕಾರಣದಿಂದ ದೇವರು ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವದಕ್ಕೆ ಅವರನ್ನು ಬಿಡುತ್ತಾನೆ. ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗುವರು" (2ಥೆಸಲೋನಿಕ 2:1–12).

ಆ ದುರ್ನೀತಿಯು ಆ ದಿನಗಳಲ್ಲೇ ಕೆಲಸ ಮಾಡುತ್ತಿತ್ತು ಎಂದು ಪೌಲನು ಹೇಳುವದನ್ನು ಗಮನಿಸು. ಅತನು ಇನ್ನೂ ಹೇಳುತ್ತಾ: "ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ. ಸುಳ್ಳುಬೋಧಕರು ಬಂದು ಸ್ವಂತಮನಸ್ಸಿನಲ್ಲಿ ಅಪರಾಧಿಗಳೆಂಬ ಬರೆಯುಳ್ಳವರಾದರೂ ತಾವು ನೀತಿವಂತರೆಂದು ತೋರಿಸಿಕೊಂಡು ಅವರನ್ನು ಮರುಳುಗೊಳಿಸಿ ಮದುವೆಯಾಗಬಾರದೆಂತಲೂ ಇಂಥಿಂಥ ಆಹಾರವನ್ನು ತಿನ್ನಬಾರದೆಂತಲೂ ಹೇಳುವರು. ಆದರೆ ಯಾರು ನಂಬುವವರಾಗಿದ್ದು ಸತ್ಯವನ್ನು ಗ್ರಹಿಸಿದ್ದಾರೋ ಅವರು ಕೃತಜ್ಞತಾಸ್ತುತಿ ಮಾಡಿ ತಿನ್ನುವದಕ್ಕೋಸ್ಕರ ದೇವರು ಸಕಲ ವಿಧವಾದ ಆಹಾರವನ್ನೂ ಉಂಟುಮಾಡಿದನು" (1ತಿಮೊಥೆ 4:1–3). ಎಫೆಸದಲ್ಲಿರುವ ಸಭೆಯ ಹಿರಿಯರೊಂದಿಗೆ ಮಾತಾಡುತ್ತಾ ಪೌಲನು ಹೀಗೆ ಹೇಳಿದ್ದಾನೆ: "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ

ಎಚ್ಚರಿಕೆಯಾಗಿರಿ. ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು. ಆದಕಾರಣ ಕಣ್ಣೀರುಸುರಿಸುತ್ತಾ ಮೂರು ವರುಷ ಹಗಲಿರುಳು ಎಡೆಬಿಡದೆ ಪ್ರತಿಯೊಬ್ಬನಿಗೆ ಬುದ್ಧಿಹೇಳಿದೆನೆಂದು ನೀವು ಜ್ಞಾಪಕಮಾಡಿಕೊಂಡು ಎಚ್ಚರಿಕೆಯಾಗಿರಿ" (ಅ.ಕೃ.20:28–31).

ಪೌಲನು ಎಚ್ಚರಿಸಿದ ರೀತಿಯಲ್ಲಿ, ಸಭೆಯಲ್ಲಿರುವವರೇ ಕೆಲವರು ಕ್ರಿಸ್ತನನ್ನು ಅನುಸರಿಸುವವರನ್ನು ಅಸತ್ಯದಲ್ಲಿಗೆ ನಡೆಸಲು ಪ್ರಾರಂಭಿಸಿದರು. ಈ ಭ್ರಷ್ಟತ್ವವು ಸಭೆಯ ಪರಿಪಾಲನೆಯ ಮೇಲೆ ನಡೆದ ವಿರೋಧದ ಮೂಲಕ ಪ್ರಾರಂಭವಾಯಿತೆಂದು ಚರಿತ್ರೆ ಹೇಳುತ್ತದೆ. ಪ್ರತಿ ಸ್ಥಳೀಯ ಸಭೆಯು ಅದರಲ್ಲಿರುವ ಹಿರಿಯರು ಸಭಾ ಸೇವಕರು ಎಲ್ಲರು ಸ್ವತಂತ್ರವಾಗಿರಬೇಕೆಂಬುದು ಕರ್ತನ ಚಿತ್ತವಾಗಿದೆ. ಆದರೆ ಕಾಲಕ್ರಮೇಣವಾಗಿ ಅನೇಕ ಸ್ಥಳೀಯ ಸಭೆಗಳು ಒಬ್ಬನೇ ಒಬ್ಬ ಹಿರಿಯನನ್ನು ಉಳಿದವರೆಲ್ಲರ ಮೇಲೆ ಉನ್ನತವಾಗಿ ನೇಮಿಸಿದರು. ಈ ರೀತಿಯಲ್ಲಿ ಹೆಚ್ಚಿಸಲ್ಪಟ್ಟ ಈತನನ್ನು ಅನೇಕ ಸಭೆಗಳ ಮೇಲೆ ಅಧಿಕಾರವುಳ್ಳವನನ್ನಾಗಿ ಮಾಡಿದರು. ಇದು ಕೊನೆಗೆ ಸಭೆಯ ಮೇಲೆಲ್ಲಾ ಸಾರ್ವಜನಿಕ ಅಧ್ಯಕ್ಷತೆಗೆ ದಾರಿ ನಡೆಸಿತ್ತು. ಇದೆಲ್ಲವು ಒಂದೇ ದಿನದಲ್ಲಿ ನಡೆಯಲ್ಲಿಲ್ಲವಾದರು ಅನೇಕ ವರ್ಷಗಳ ಕಾಲದಲ್ಲಿ ನಡೆಯಿತ್ತು. ಇದರಿಂದಾಗಿ ಕ್ರಿ.ಶ.606ರಷ್ಟರೊಳಗೆ ಮೊದಲ ಸಾರ್ವಜನಿಕ ಅಧ್ಯಕ್ಷನು ಅಥವಾ ಪೋಪ್ ಎಂಬುವವನು ನಂಬಿಕೆ ಭ್ರಷ್ಟತ್ವದಲ್ಲಿರುವ ಸಭೆಗೆ ಶಿರಸ್ಸು ಆಗಿ ನೇಮಿಸಲ್ಪಟ್ಟನು. ಇದರ ಫಲವೇ ಇಂದು ನಮಗೆ ತಿಳಿದಿರುವ ರೋಮನ್ ಕ್ಯಾಥೊಲಿಕ್ ಸಭೆ. ಆದರೆ ಕ್ರಿಸ್ತನ ಸಭೆಗೆ ಏನು ನಡೆದಿತ್ತು.? ನಂಬಿಕಯಲ್ಲಿ ಸ್ಥಿರವಾಗಿದ್ದವರು ಬಹುಃಶ ಅವರ ಇರುವಿಕೆಯನ್ನು ಯಾರು ಗುರುತಿಸದೆಯೇ ಮುಂದುವರೆದರು. ಕರ್ತನಾದರೂ ಆತನ ರಾಜ್ಯ ಅಥವಾ ಸಭೆಯು ಶಾಶ್ವತವಾಗಿರುತ್ತದೆ ಎಂದು ಹೇಳಿದನು. ಸಭೆಯು ಸಹ ಮಾಡಬೇಕಾದ್ದದು ಇದೆ.

ಕ್ರೈಸ್ತವ ಲೋಕವನ್ನಾದರೂ ಕ್ಯಾಥೊಲಿಕ್ ಸಭೆಯು ಪರಿಪಾಲಿಸಿತು. ನಿಜಕ್ಕೂ ಅದರ ಪ್ರಭಾವ ಲೋಕದೆಲ್ಲಲ ವ್ಯಾಪಿಸುವಂತೆ ಮಾಡಿತು. ಅದು ಅಧಿಕಾರದಲ್ಲಿದ್ದು ತನ್ನ ನಿಯಂತ್ರಣವನ್ನು ಸಾಧಿಸಿದ ಕೆಲವು ವರ್ಷಗಳ ಕಾಲವನ್ನು "ಕತ್ತಲೆಯ ಯುಗ" ಎಂದು ಚರಿತ್ರೆಯಲ್ಲಿ ಕರೆಯಲ್ಪಡುವಷ್ಟರ ವರೆಗೆ ಬಂದಿತ್ತು. ಕ್ಯಾಥೊಲಿಕ್ ಸಭೆ ಮಾತ್ರ

ಬೈಬಲನ್ನು ಓದಿ ಅರ್ಥವನ್ನು ಗ್ರಹಿಸುವುದಕ್ಕೆ ಅರ್ಹರೆಂದು ಹೇಳುತ್ತಾ ಸಾಮಾನ್ಯ ಜನರು ಬೈಬಲ್ ಓದದಂತೆ ಅವರು ಬಹಿಷ್ಕರಿಸಿದರು. ಆದ್ದರಿಂದ ಲೋಕದಲ್ಲೆಲ್ಲಾ ಕತ್ತಲೆಯ ಯುಗ ಪ್ರಾರಂಭವಾಯಿತ್ತು. ಕ್ಯಾಥೊಲಿಕ್ ಅಧಿಕಾರಿಗಳು ಮಾತ್ರ ಓದಿ ಬೋಧಿಸುವ ಅಧಿಕಾರವುಳ್ಳವರೆಂದು ಅದು ಪ್ರಕಟಿಸಿತು. ಇದರಿಂದಾಗಿ ಜನರು ಏನು ತಿಳಿದುಕೊಳ್ಳಬೇಕೆಂದು ಈ ಅಧಿಕಾರಿಗಳು ಕೋರಿಕೊಳ್ಳುವರೋ ಅದನ್ನೇ ಅವರು ಬೋಧಿಸಿದರು.

ಅಂತಹ ಕಾಲದಲ್ಲಿ ಕ್ಯಾಥೊಲಿಕ ಸಭೆಯು ಪ್ರೋಕ್ಷಿಸುವ ದೀಕ್ಷಾಸ್ನಾನವನ್ನು ವಾದ್ಯಸಂಗೀತ ಎಂಬ ಅಂಶಗಳ ಮೇಲೆ ರೋಮನ್ ಕ್ಯಾಥೊಲಿಕ್‌ಗಳೆಂದು, ಗ್ರೀಕ್ ಕ್ಯಾಥೊಲಿಕ್ ಎಂದು ಎರಡು ಭಾಗವಾಗಿ ವಿಭಜಿಸಲ್ಪಟ್ಟಿತ್ತು. ಕಾಲಕ್ರಮೇಣವಾಗಿ ಈ ರೋಮನ್ ಕ್ಯಾಥೊಲಿಕ್ ಸಭೆಯು ಅನೇಕ ಸಿದ್ಧಾಂತಗಳನ್ನು, ಬೋಧನೆಗಳನ್ನು ಬೋಧಿಸಿದರು. ಕೊನೆಗೆ 16ನೇ ಶತಮಾನದೊಳಗಾಗಿ ರೊಮನ್ ಕ್ಯಾಥೊಲಿಕ್ ಸಭೆಯು ಬೋಧನೆಯಲ್ಲಿಯೂ ನೀತಿಯಲ್ಲಿಯೂ ಬಹು ಕಲುಷುತಗೊಂಡದ್ದರಿಂದ ಮಾರ್ಟಿನ್ ಲೂಥರ್ ಎಂಬುವವನು ಆ ಸಭೆಯಲ್ಲಿ ಅಧಿಕಾರಿ (ಉಪದೇಶಕನಾಗಿ) ಕೆಲಸ ಮಾಡುತ್ತಾ, ಇರುವ ತಪ್ಪುಗಳನ್ನು ಸರಿಪಡಿಸಬೇಕೆಂದು ಪ್ರಯತ್ನಿಸಿದನು. ಇದರಿಂದಾಗಿ ಅವನು ಬಹಿಷ್ಕರಿಸಲ್ಪಟ್ಟನು. ಅವನು ಆ ಸಭೆಯನ್ನು ಬಿಟ್ಟು ತಾನು ಸರಿ ಅಂದುಕೊಂಡಿದ್ದನ್ನು ಬೋಧಿಸಿದನು. ಅದನ್ನು ಅನುಸರಿಸುವುದಕ್ಕೆ ಪ್ರಾರಂಭಿಸಿದನು. ಆ ಮೂಲಕ ಪುನರುದ್ಧರಣೆ ಅಥವಾ ಪ್ರೊಟೆಸ್ಟೆಂಟ್ ಆರಂಭವಾಯಿತು. ಇದರಿಂದ ಇಂದಿನವರೆಗೂ ನಮಗೆ ತಿಳಿದ ಮತಶಾಖೆಗಳ ತತ್ವಗಳು ಉದ್ಭವಿಸಿದವು. ಮಾರ್ಟಿನ್ ಲೂಥರ್ ಅನುಸರಿಸಿದ ವಿಧಾನದಿಂದ ಪ್ರಪಂಚದ ಅನೇಕ ಕಡೆಯಲ್ಲಿ "ಬೈಬಲ್ ಕಡೆಗೆ ಹಿಂತಿರುಗಿರಿ" ಎಂಬ ಹೋರಾಟ ಪ್ರಾರಂಭವಾಯಿತು. ಆದರೂ ಅದು ಸಂಪೂರ್ಣ ವಿಜಯ ಸಾಧಿಸದೇ ಹೋಯಿತು.

17 ಮತ್ತು 18ನೇ ಶತಮಾನದಲ್ಲಿ ಯೂರೊಪಿನಲ್ಲಿಯೂ, ಅಮೇರಿಕದಲ್ಲಿಯೂ ಮತಶಾಖೆಗಳನ್ನು ಕುರಿತು, ವಿಭಜನೆಗಳನ್ನು ಕುರಿತು ಬೇಸರಗೊಂಡ ಕೆಲವು ಮತಶಾಖೆಗಳ ಜನರು ಇದ್ದರು. ಕ್ರಮೇಣ ಅವರಿದ್ದ ಸುಳ್ಳು ಬೋಧನೆಯಿಂದ ಬಿಡುಗಡೆ ಹೊಂದಿ ಸಂಪೂರ್ಣವಾಗಿ ಬೈಬಲನ್ನು ಅನುಸರಿಸುವುದಕ್ಕೆ ಪ್ರಾರಂಭಿಸಿದರು. ವಾಕ್ಯವು ಬೋಧಿಸುವ ಸಭೆಯ ಬಳಿಗೆ ಬರುವದೇ ಅವರ ಉದ್ದೇಶವಾಗಿತ್ತು, ಆದರೆ ಹೊಸ ಒಡಂಬಡಿಕೆ ಸಭೆಯನ್ನು ಸ್ಥಾಪಿಸುವುದು ಅವರ

ಉದ್ದೇಶವಾಗಿರಲ್ಲಿಲ್ಲ. ಅದನ್ನು ಅವರು ಸಾಧಿಸಿದರು. ಅಂದಿನಿಂದ ಪರಿಪೂರ್ಣವಾದ ಹೊಸ ಒಡಂಬಡಿಕೆ ಕ್ರೈಸ್ತತ್ವವನನ್ನು ಕುರಿತು ವಿಜ್ಞಾಪನೆ ಲೋಕದಲ್ಲೇಲ್ಲಾ ಪ್ರಕಟಿಸಲ್ಪಡುತ್ತಿದೆ. ಅದರಿಂದ ಲಕ್ಷಗಟ್ಟಲೆ ಜನರು ಮನುಷ್ಯರು ಕಲ್ಪಿಸಿದ ಪದ್ಧತಿಗಳನ್ನು, ಬೋಧನೆಗಳನ್ನು ಬಿಟ್ಟು ಕೇವಲ ಕ್ರೈಸ್ತರಾಗುವುದಕ್ಕೂ, ಕ್ರಿಸ್ತನ ಸಭೆಯ ಸದಸ್ಯರಾಗುವದಕ್ಕೂ ಬೈಬಲನ್ನು ಮಾತ್ರ ಮಾರ್ಗದರ್ಶನವಾಗಿ ಇಟ್ಟುಕೊಳ್ಳುವುದಕ್ಕೂ ನಿರ್ಣಯಿಸಿಕೊಂಡಿದ್ದಾರೆ. ಸತ್ಯವನ್ನು ಬೋಧಿಸುವುದಕ್ಕೆ ಲೋಕದಲ್ಲೆಲ್ಲಾ ಹೊರಟಿರುವ ಕ್ರೈಸ್ತರು ಆಫ್ರಿಕಾ, ಇಂಡಿಯಾ, ರಷ್ಯ, ಹಾಲೇಂಡ್ ದೇಶಗಳಲ್ಲಿ ಪವಿತ್ರವಾಗಿರುವ ಕ್ರಿಸ್ತನ ಸಭೆ ಇರುವುದನ್ನು ಕಂಡು ಕೊಂಡರು. ಆ ಸಭೆಯು ಎಂದಿಗೂ ಇರುವ ರೀತಿಯಲ್ಲೇ ಇಂದಿಗೂ ಇದೆ. ಅದು ಬೈಬಲ್ ಸಭೆಯೆಂದು ನಿರೂಪಿಸುವುದಕ್ಕೆ ಅದರ ಚರಿತ್ರೆಯನ್ನು ಸಭೆಯ ಆರಂಭದ ವರೆಗೂ ಅವಸರ ಪಡುವ ಅವಶ್ಯಕತೆ ಇಲ್ಲ. ಸಭೆಯ ಮಾದರಿಯು ಬೈಬಲಿನಲ್ಲಿದೆ. ನಾವು ಅದನ್ನು ಅನುಸರಿಸಿದಾಗ ನಾವೇ ಕ್ರಿಸ್ತನ ಸಭೆಯಾಗುತ್ತೇವೆ. ಬೀಜವು ದೇವರ ವಾಕ್ಯವಾಗಿದೆ (ಲೂಕ 8:11). ಅಪೊಸ್ತಲರ ಕಾಲದಲ್ಲಿ ಅದು ಯಾವುದನ್ನು ಉದ್ಭವಿಸಿತೋ ಅದನ್ನೇ ಅಂದರೆ ಕ್ರೈಸ್ತರನ್ನು, ಕ್ರಿಸ್ತನ ಸಭೆಯ ಸದಸ್ಯರನ್ನು ಅದು ಇಂದು ಉದ್ಭವಿಸುತ್ತದೆ. ದೇವರ ರಾಜ್ಯವು ನಿತ್ಯವು ನಿಲ್ಲುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದ ಸಭೆಯು ಸ್ಥಾಪಿಸಲ್ಪಟ್ಟ ದಿನದಿಂದಲೂ ಶಾಶ್ವತವಾಗಿಯೇ ಇದೆ. ಅದು ಸದಾಕಾಲ ನಿಲ್ಲುತ್ತದೆ. ಅದನ್ನು ನಾಶಮಾಡುವುದಕ್ಕೆ ಮಾನವನಿಗಾಗಲಿ, ಸೈತಾನನಿಗಾಗಲಿ ಶಕ್ತಿಯಿಲ್ಲ. ಇದುವೇ ಕರ್ತನ ರಾಜ್ಯ, ಆತನ ಸಭೆಯು, ಪ್ರಾರಂಭದಿಂದಲೂ ಅಂತ್ಯದವರೆಗೆ ವಿಜಯವಂತವಾಗಿ ಕೊನೆಗೆ ಕರ್ತನೊಂದಿಗೆ ಸದಾಕಾಲ ಇರುವದು ಅದುವೇ ಕ್ರಿಸ್ತನ ಸಭೆ.

## ಪಾಠ – 24

# ಇಂದಿನ ಕ್ರಿಸ್ತನ ಸಭೆ
# (The Church Today)

ಕ್ರಿಸ್ತನ ಸಭೆಯು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿದೆ (ಅ.ಕೃ.2ನೇ ಅಧ್ಯಾಯ). ಆದರೆ ಆ ದಿನದಲ್ಲಿದ್ದ ರೀತಿಯಲ್ಲಿಯೇ ಅದು ಇಂದು ಇದೆ. "ಅದು ಹೇಗೆ ಸಾಧ್ಯವಾಗುತ್ತದೆ?" ಎಂದು ನೀನು ಕೇಳಬಹುದು. ಹೊಸ ಒಡಂಬಡಿಕೆಯಲ್ಲಿ ಇರುವ ಸಭೆಯ ಮಾದರಿಯನ್ನು ಅನುಸರಿಸುವುದರ ಮೂಲಕ ಅದು ಸಾಧ್ಯವಾಗುತ್ತದೆ.

ಇಂದು ಇರುವ ಸಭೆಯೇ ಮೊಟ್ಟಮೊದಲು ಪ್ರಾರಂಭಿಸಲ್ಪಟ್ಟ ಸಭೆ ಎಂದು ನಿರೂಪಿಸುವುದಕ್ಕೆ, ಅದರ ಚರಿತ್ರೆಯನ್ನು ವರ್ಷಾನುಸಾರವಾಗಿ ಪಂಚಾಶತ್ತಮ ದಿನದ ವರೆಗೂ ಹಿಂದಿರುವವರೆಗೂ ಪ್ರಯಾಸಪಟ್ಟು ಓದಬೇಕೆಂದು ಕೆಲವರ ಅಭಿಪ್ರಾಯ. ಆದರೆ ಅದು ಅವಶ್ಯವಿಲ್ಲ, ಮೊದಲು ಆತನ ರಾಜ್ಯವು ಎಂದಿಗೂ ನಾಶವಾಗುವುದಿಲ್ಲವೆಂದು ಕರ್ತನು ನಮಗೆ ವಾಗ್ದಾನ ಮಾಡಿದ್ದಾನೆ (ದಾನಿಯೇಲ 2:44; ಲೂಕ 1:33; ಇಬ್ರಿಯ 12:28). ಇದರಿಂದಾಗಿ ಆತನ ಸಭೆಯು ಆರಂಭವಾದ ದಿನದಿಂದ ಇಂದಿನ ವರೆಗೂ ಪ್ರಪಂಚದಲ್ಲಿ ಎಲ್ಲೋ ಒಂದು ಕಡೆ ಇದೆ ಎಂದು ಅರ್ಥ. ಎರಡನೇಯದಾಗಿ ಆತನ ರಾಜ್ಯದ ಬೀಜವು ಹೊಸ ಒಡಂಬಡಿಕೆಯಲ್ಲಿ ಭದ್ರಮಾಡಲ್ಪಟದ್ದನ್ನು ನಾವು ಹೊಂದಿಕೊಂಡಿದ್ದೇವೆ (ಲೂಕ 8:11). ಹೊಸ ಒಡಂಬಡಿಕೆಯ ಕಾಲದಲ್ಲಿ ಅದು ಕ್ರೈಸ್ತರನ್ನು ಹುಟ್ಟುವಂತೆ ಮಾಡಿದರೆ ಇಂದು ಸಹ ಕ್ರೈಸ್ತವರನ್ನು ಹುಟ್ಟುವಂತೆ ಮಾಡುತ್ತದೆ. ಅಪೊಸ್ತಲರ ಕಾಲದಲ್ಲಿ ಸಭೆಯು ಕ್ರೈಸ್ತವರೊಂದಿಗೆ ಸೇರಿಸಲ್ಪಟ್ಟಿತ್ತು. ಇಂದು ಸಹ ಅದೇ ನಡೆಯುತ್ತದೆ. ಆದ್ದರಿಂದ ಹೊಸ ಒಡಂಬಡಿಕೆ ಎಲ್ಲಿ ಇದೆಯೋ ಅಲ್ಲಿ ಅದನ್ನು ಹೊಂದಿಕೊಂಡವರು ಅದು ಹೇಳುವ ರೀತಿಯಲ್ಲಿ ಮಾಡಿದರೆ ಕ್ರಿಸ್ತನ ಸಭೆ ಇರುವುದು ಸಾಧ್ಯವೇ.

ದೇವರು ತನ್ನ ಜನರು ಅನುಸರಿಸುವುದಕ್ಕೆ ಒಂದು ಮಾದರಿಯನ್ನು ಎಂದೆಂದಿಗೂ ಕೊಡುತ್ತಲೇ ಇದ್ದನು. ನಾವೆಯನ್ನು ನಿರ್ಮಿಸಲು ಒಂದು ಮಾದರಿಯನ್ನು ಆತನು ನೋಹನಿಗೆ ಕೊಟ್ಟನು (ಆದಿಕಾಂಡ 6). ದೇವದರ್ಶನ ಗುಡಾರವನ್ನು ನಿರ್ಮಿಸಲು ಒಂದು ಮಾದರಿಯನ್ನು ಆತನು ಮೋಶೆಗೆ ಕೊಡುತ್ತಾ "ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲಾವನ್ನು ಮಾಡಿಸಬೇಕು" ಎಂಬ ದೈವೋಕ್ತಿಯು ಅವನಿಗೆ ಉಂಟಾಯಿತಲ್ಲ (ಇಬ್ರಿಯ 8:5). ಆದುದರಿಂದ ಹೊಸ ಒಡಂಬಡಿಕೆಯಲ್ಲಿ ಕರ್ತನ ಸಭೆಯ ಒಂದು ಪರಿಪೂರ್ಣ ಮಾದರಿ ನಮಗೆ ಪ್ರಕಟಿಸಲ್ಪಟ್ಟಿದೆ. ನೋಹನಿಗೆ, ಮೋಶಗೆ ಕೊಡಲ್ಪಟ್ಟ

ಮಾದರಿಯನ್ನು ಅನುಸರಿಸಿ ಅವರು ಹೇಗೆ ನೇರವೇರಿಸಿದರೋ ಅದೇ ರೀತಿಯಲ್ಲಿ ಸಭೆಯ ಮಾದರಿಯನ್ನು ಅನುಸರಿಸಿ ನಾವು ಮಾಡಬೇಕು. ನಾವೆಯನ್ನು, ದೇವದರ್ಶನ ಗುಡಾರವನ್ನು ನಿರ್ಮಿಸುವುದರಲ್ಲಿ ನೋಹನು, ಮೋಶೆಯು ದೇವರು ಕೊಟ್ಟ ಮಾದರಿಯನ್ನು ಅನುಸರಿಸಿದಾಗ ದೇವರು ಹೇಗೆ ಸಂತೋಷಿಸಿದನೋ, ಅದೇ ರೀತಿಯಲ್ಲಿ ಅಪೊಸ್ತಲರ ಕಾಲದಲ್ಲಿನ ಸಭೆಯ ಮಾದರಿಯನ್ನು ನಾವು ಅನುಸರಿಸಿದಾಗ ದೇವರು ಸಂತೋಷಿಸುವನು, ಹೇಗಂದರೆ ಯಾವ ರೀತಿಯಲ್ಲಿಯೂ ಸೇರಿಸುವುದಾಗಲಿ, ಅದರಿಂದ ತೆಗೆಯುವದಾಗಲಿ ಮಾಡದೇ ಆತನು ಅಪೇಕ್ಷಿಸುವ ರೀತಿಯಲ್ಲಿ ಆ ಸಭೆಯು ಇರುವುದು(ಪ್ರಕಟನೆ22:18,19).

ಸಭೆಯ ರೂಪರೇಷೆಗಳೆಲ್ಲವೂ ಹೊಸ ಒಡಂಬಡಿಕೆಯಲ್ಲಿ ಬಹಳ ವಿವರವಾಗಿ ತಿಳಿಸಲ್ಪಟ್ಟಿದೆ. ಸಭೆ ಅಂದರೆ ಏನು? ಅದರ ಸ್ಥಾಪಕರು ಯಾರು, ಅದು ಎಲ್ಲಿ ಸ್ಥಾಪಿಸಲ್ಪಟ್ಟಿತ್ತು? ಯಾವಾಗ ಸ್ಥಾಪಿಸಲ್ಪಟ್ಟಿತ್ತು? ಅದರ ಹೆಸರು ಏನಾಗಿತ್ತು? ಅದರ ಸದಸ್ಯರಾಗುವುದು ಹೇಗೆ? ಅದರ ಆರಾಧನೆ ಕ್ರಮಪದ್ಧತಿ ಹೇಗೆ? ಅದರ ಕೆಲಸವೇನು ಎಂಬ ಅನೇಕ ಸಂಗತಿಗಳನ್ನು ಕುರಿತು ಕರ್ತನು ತಾನೇ ತನ್ನ ಗ್ರಂಥವಾದ ಹೊಸ ಒಡಂಬಡಿಕೆಯಲ್ಲಿ ವಿವರಿಸಿದ್ದಾನೆ. ಆ ಸಭೆಗೆ ಶಿರಸ್ಸು ಯಾರು ? ಅದು ಕಂಡುಕೊಂಡ ಬೆಲೆ ಎಂತದ್ದು? ಅದರ ರಕ್ಷಕನು ಯಾರು? ಎಂಬ ವಿಷಯಗಳನ್ನು ಕುರಿತು ವಿವರಿಸುತ್ತದೆ. ಸಭೆ ಅಂದರೆ ಏನು? ಅದರ ಕೆಲಸವೇನು? ಎಂಬ ವಿಷಯಗಳಲ್ಲಿ ಅದು ಸಂದೇಹವಿಲ್ಲದೆ ಹೊಸ ಒಡಂಬಡಿಕೆ ವಿವರಿಸುತ್ತದೆ. ದೇವರ ವಾಕ್ಯವು ಎಷ್ಟು ಸ್ಪಷ್ಟವಾಗಿದೆಯೋ ಅಷ್ಟು ಸ್ಪಷ್ಟವಾಗಿ ಅದರ ಮಾದರಿ ನಮಗೆ ಬೈಬಲಿನಲ್ಲಿ ದೊರೆಯುತ್ತದೆ.

ಆದ್ದರಿಂದ ಬೈಬಲಿನಲ್ಲಿರುವ ನಿಜವಾದ ಸಭೆಯನ್ನು ತಿಳಿದುಕೊಳ್ಳುವುದಕ್ಕೆ ನಾವು ಮಾಡಬೇಕಾದದ್ದೆಲ್ಲಾ ಕೇವಲ ಬೈಬಲನ್ನು ಸರಿಯಾಗಿ ವಿಭಜಿಸಿ ಓದುವುದಷ್ಟೇ. ಅದರ ಸತ್ಯವನ್ನು ನಾವು ಗ್ರಹಿಸಿದಾಗ ಅದನ್ನು ಅವಲಂಭಿಸಿದಾಗ ನಾವು ಅದರ ಸದಸ್ಯರಾಗುವೆವು. ಆ ರೀತಿಯಲ್ಲಿ ಕ್ರಿಸ್ತನು ಮೊದಲ ಶತಮಾನದಲ್ಲಿ ಸ್ಥಾಪಿಸಿದ ಸಭೆಯಲ್ಲಿ ನಾವು ಸದಸ್ಯರಾಗುವೆವು. ಅದರ ಬೀಜವು ಅದರ ಜಾತಿಯ ಪ್ರಕಾರ ಫಲವನ್ನು ಕೊಡುವುದು. ಆದುದರಿಂದ ದೇವರ ವಾಕ್ಯವು ಕ್ರೈಸ್ತವರನ್ನು, ಅಂದರೆ ಕ್ರಿಸ್ತನ ಸಭೆಯ ಸದಸ್ಯರನ್ನು ಅಂದು ಹೇಗೆ ಹುಟ್ಟುವಂತೆ ಮಾಡಿತೋ ಹಾಗೆ ಇಂದು ಅದೇ ರೀತಿಯಲ್ಲಿ ಹುಟ್ಟುವಂತೆ ಮಾಡುತ್ತದೆ.

ಪ್ರಪಂಚದಲ್ಲೆಲ್ಲಾ ಇಂದು ಕ್ರಿಸ್ತನ ಸಭೆಯನ್ನು ಕಾಣುತ್ತಿದ್ದೇವೆ. ಅದು ಪ್ರತಿ ಸ್ಥಳದಲ್ಲಿಯೂ ಇದೆ.

ಮನುಷ್ಯರು ಬೈಬಲ್ ಹೇಳುವ ರೀತಿಯಲ್ಲಿ ಮಾಡುವಾಗ ಎಲ್ಲಿಯಾದರೂ ಯಾವಾಗಲಾದರೂ ಅದು ಇರುತ್ತದೆ. ಜನರು ದೇವರ ಚಿತ್ತವನ್ನು ನೆರವೇರಿಸುವುದನ್ನು ಯಾವಾಗ ನಿಲ್ಲಿಸುತ್ತಾರೊ ಆಗ ಅದು ಇಲ್ಲದಂತಾಗುತ್ತದೆ.

ಕ್ರಿಸ್ತನ ಸಭೆಯು ಬೈಬಲನ್ನು ಅನುಸರಿಸುವುದರ ಮೂಲಕ, ಬಹಳವಾಗಿ ಅಭಿವೃದ್ಧಿ ಹೊಂದಿ ವಿಸ್ತರಣೆಗೊಳ್ಳುತ್ತದೆ. ಅದು ವಿಭಜನೆಯನ್ನು ಖಂಡಿಸುತ್ತದೆ. ಕ್ರಿಸ್ತನನ್ನು ಮಹಿಮೆ ಪಡಿಸುತ್ತದೆ. ಬೈಬಲಿನಲ್ಲಿ ನಿನಗೆ ಕಾಣಿಸುವ ನಿಜ ಸಭೆಯು ಇದೆ. ಅದು ಒಂದು ಮತಶಾಖೆಯಲ್ಲ. ಮತಶಾಖೆಗಳ ಸಮೂಹವಂತು ಅಲ್ಲವೇ ಅಲ್ಲ. ಅದು ಪ್ರೊಟೆಸ್ಟಂಟ್ ಆಗಲಿ ಕ್ಯಾಥೊಲಿಕ್ ಆಗಲಿ ಅದರಲ್ಲಿನ ಒಂದು ಭಾಗವಲ್ಲ. ಹಾಗದರೆ ಅದು ಏನು? ಅದು ಕ್ರಿಸ್ತನ ಸಭೆ ಅಷ್ಟೆ.

ಕರ್ತನ ಸಭೆಗೆ ಭೂಮಿಯ ಮೇಲೆ ಯಾವ ಮುಖ್ಯಕೇಂದ್ರವಾಗಲಿ, ಮುಖ್ಯ ಅಧಿಕಾರಿಯಾಗಲಿ ಇಲ್ಲ. ಯಾವ ಮನುಷ್ಯನನ್ನು ಅದು ಘನಪಡಿಸುವುದಿಲ್ಲ. ಭೂಸಂಬಂಧವಾದ ರೀತಿಯಲ್ಲಿ ಅದು ಆಡಳಿತ ನಡೆಸದು. ಪ್ರತಿ ಸ್ಥಳೀಯ ಸಭೆಯಲ್ಲಿ ಹಿರಿಯರು, ಸಭಾ ಸೇವಕರು, ಸುವಾರ್ತಿಕರು, ಉಪದೇಶಕರು, ಸದಸ್ಯರನ್ನು ಒಳಗೊಂಡು ಸ್ವತಂತ್ರವಾಗಿರುತ್ತದೆ. ಗುರುಗಳು ಸಾಮಾನ್ಯ ಸದಸ್ಯರು ಎಂಬ ಭೇದವು ಅದರಲ್ಲಿ ಇಲ್ಲ. ಆದ್ದರಿಂದ ಒಬ್ಬ ಸದಸ್ಯನು ಮತ್ತೊಬ್ಬ ಸದಸ್ಯನಿಗಿಂತ ಶ್ರೇಷ್ಟನೆಂದು ಹೇಳುವುದಿಲ್ಲ. ಇದರಲ್ಲಿ ಎಲ್ಲರು ಒಂದೇ ಸ್ಥಾನದಲ್ಲಿರುವರು.

ಕ್ರಿಸ್ತನ ಸಭೆಗೆ ಎಂದಿಗೂ ಶತ್ರುಗಳು ಇದ್ದೆ ಇರುವರು. ಆದುದರಿಂದ ಇಂದು ಸಹ ಅದಕ್ಕೆ ಶತ್ರುಗಳು ಇರುವರು. ಮನುಷ್ಯ ಕಲ್ಪಿತ ಸಭೆಗಳು ಇಂದು ಅದನ್ನು ವಿರೋಧಿಸುತ್ತವೆ. ಹೇಗಂದರೆ ಅದು ಅವರನ್ನು ಅನುಸರಿಸುತ್ತಿಲ್ಲ. ಅವುಗಳೊಂದಿಗೆ ಕ್ರಿಸ್ತನ ಸಭೆಯು ಸಹವಾಸ ಮಾಡುವುದಾಗಲಿ ಅವರೊಂದಿಗೆ ಸೇರಿ ಕೆಲಸ ಮಾಡುವುದಾಗಲಿ ಮಾಡುವುದಿಲ್ಲ. ಅವರು ಮನುಷ್ಯ ಕಲ್ಪಿತ ಬೋಧನೆಗಳನ್ನು ಅನುಸರಿಸುವಾಗ ಬೈಬಲನ್ನು ಮಾತ್ರವೇ ಅನುಸರಿಸುವವರು ಕೆಲವರಿದ್ದಾರೆಂದು ತಿಳಿದುಕೊಂಡಿದ್ದಾರೆ. ಅವರು ಮನುಷ್ಯರನ್ನು ಅನುಸರಿಸುತ್ತಾ, ಮನುಷ್ಯರ ಹೆಸರುಗಳನ್ನು ಧರಿಸಿಕೊಂಡಾಗ ನಾವು ಕ್ರಿಸ್ತನನ್ನು ಹಿಂಬಾಲಿಸುತ್ತಾ ಕ್ರಿಸ್ತನ ಹೆಸರನ್ನು ಧರಿಸಿಕೊಂಡಿದ್ದೇವೆ. ಅವರು ನಮ್ಮ ಮೇಲೆ ಸತ್ಯವೆಂಬ ಆಯುಧವನ್ನಲ್ಲದೇ ಜನರ ಮನಸ್ಸಿನಲ್ಲಿ ದ್ವೇಷವನ್ನು ಕಲ್ಪಿಸಿ, ಅಪಾರ್ಥವನ್ನು ಉಂಟುಮಾಡುತ್ತಿದ್ದಾರೆ. ಆದರೆ ಅವರ ಪ್ರಯತ್ನವೆಲ್ಲಾ ವ್ಯರ್ಥವೇ.

ಯುಗಯುಗಗಳಿಂದಲೂ ಕ್ರಿಸ್ತನ ಸಭೆಯು ಜಯವನ್ನು ಸಾಧಿಸುತ್ತಾ ಬಂದಿದೆ. ಈ ಲೋಕದಲ್ಲಿರುವ ಶತ್ರುಗಳೆಲ್ಲರು, ನರಕದಲ್ಲಿರುವ ದೆವ್ವಗಳೆಲ್ಲವು ಅದನ್ನು ನಿಲ್ಲಿಸಲಾರವು. ಅದರ ಸುತ್ತಲು ಇರುವವರಿಗಿಂತ ಅದು ಸಂಖ್ಯೆಯಲ್ಲಿ ಕಡಿಮೆ

ಕಾಣಿಸಬಹುದು, ರಕ್ಷಣೆಹೊಂದುವವರು ಕೆಲವರು ಮಾತ್ರವೇ (ಮತ್ತಾಯ 7:13,14). ಕ್ರಿಸ್ತನಿಗೆ ಒಂದೇ ಒಂದು ಸಭೆ ಇದೆ. ಆ ಒಂದು ಸಭೆಗಾಗಿ ಕ್ರಿಸ್ತನು ತಿರುಗಿ

ವಂದನೆಗಳು